ಹೇಗೆ ಘೋಷಣೆ ಮಾಡಬೇಕು ? ಈ ರೋಗವನ್ನು ನಿಯಂತ್ರಿಸುವ ಸಲುವಾಗಿ ಕಡಿಮೆ ಬಡ್ಡಿ ದರದಲ್ಲಿ ದೀರ್ಘಾವದಿ ಸಾಲ ದೊರೆಯುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮಾನ್ಯ ಮಾದೇಗೌಡರು ಹೇಳಿದ ಹಾಗೆ ಹಳ್ಳಿಗಳ ಕಡೆಯ ಜನರಿಗೆ ಈ ರೋಗವನ್ನು ಹೇಗೆ ನಿಯಂತ್ರಿಸಬೇಕೆಂಬ ಕಲ್ಪನೆ ಇರುವುದಿಲ್ಲ. ಜನಕ್ಕೆ ರೋಗ ಬಂದರೆ ಹೇಗೆ ಮಂತ್ರ-ತಂತ್ರಗಳನ್ನು ಮಾಡಿ ಯಂತ್ರ ಕಟ್ಟುತ್ತಾರೋ ಅದೇ ರೀತಿ ಮರಕ್ಕೆ ರೋಗ ಬಂದರೂ ಕೂಡ ತಾಯತ ಕಟ್ಟುವ ಪದ್ಧತಿ ನಮ್ಮ ಕಡೆ ಇದೆ, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ; ಅದ್ದರಿಂದ ಸರ್ಕಾರದವರು ಈ ಬಗ್ಗೆ ತೀವ್ರವಾದ ಅಸಕ್ತಿ ವಹಿಸಿ ಸಂಶೋಧನೆ ಮಾಡಿ ಇನ್ನೂ ಹೆಚ್ಚು ಎಫೆಕ್ಟೀವ್ ಮೆಡಿಷನ್ಸ್ ತಯಾರಿಸುವುದರ ಜೊತೆಗೆ ಜನತೆಗೂ ಕೂಡ ತಿಳುವಳಿಕೆ ಕೊಡುವಂತಹ ಒಂದು ವಿಸ್ತಾರವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸಿ ಅವರನ್ನು ಕಷ್ಟದಿಂದ ಪಾರಾಗುವಂತೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಆಗಲೇ ತಮ್ಮ ಗಮನವನ್ನು ಸೆಳೆದ ಹಾಗೆ ಅಡಿಕೆ ಮತ್ತು ಬಾಳೇಗಿಡಗಳಿಗೆ ತಗಲಿರುವ ರೋಗದ ಬಗ್ಗೆಯೂ ಕೂಡ ಗಮನ ಹರಿಸಬೇಕೆಂದು ಪ್ರಾರ್ಥಿಸಿಕೊಳ್ಳು ತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಈ ಬಗ್ಗೆ ಸರ್ಕಾರ ಬೇಕಾದಷ್ಟು ಪ್ರಚಾರ ಮಾಡುತ್ತಿರುವುದರ ಜೊತೆಗೆ ತೋಟಗಾರಿಕೆ ಇಲಾಖೆ ಕೂಡ ಚನ್ನಾಗಿ ಕೆಲಸ ಮಾಡುತ್ತಿದೆ. ರೈತರು ಆ ಇಲಾಖೆಯೊಡನೆ ಸಹಕರಿಸಿದರೆ ಈ ರೋಗವನ್ನು ತಡೆಗಟ್ಟುವುದಕ್ಕೆ ಅಷ್ಟೇನು ತೊಂದರೆಯಾಗುವುದಿಲ್ಲ. ಸಾಲ ಸೌಲಭ್ಯಗಳ ಅವಶ್ಯಕತೆ ಇದ್ದರೆ, ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮೂಲಕವಾಗಲೀ ಅಥವಾ ತೋಟಗಾರಿಕೆ ಇಲಾಖೆಯ ಮುಖೇನವಾಗಲೀ ಪಡೆಯಬಹುದು. ಆ ಇಲಾಖೆಗಳು ಬೇಕಾದಷ್ಟು ಸಾಲ ಸೌಲಭ್ಯಗಳನ್ನು ಒದಗಿಸು ತ್ತಿರುವುದರಿಂದ, ಇಂಥ ಸಂದರ್ಭದಲ್ಲಿ ರೈತರು ಆ ಇಲಾಖೆಗಳ ಮುಖಾಂತರ ಪಡೆಯಲಿಕ್ಕೆ ಪ್ರಯತ್ನಿಸ ಬೇಕು.

ಶ್ರೀ ಯು. ಬಿ. ಬೋರ್ಕರ್.—ರೈತರು ಇಲಾಖೆಗಳಿಗೆ ಬ್ಯಾಂಕುಗಳಿಗೆ ಸಾಲಕ್ಕಾಗಿ ಅಲೆದಲೆದು ಸಾಕಾಗುತ್ತಿದ್ದಾರೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು.

[No Answer]

## Budget Estimates for 1978-79

## Demands for Grants

### *Demand Nos. 27 and 28 (Debate Continued)*

ಶ್ರೀ ಎಂ. ಮಲ್ಲಪ್ಪ.—ಸನ್ಮಾನ್ಯ ಸಭಾಧ್ಯಕ್ಷರೇ, ಆರೋಗ್ಯ ಇಲಾಖೆ ಬೇಡಿಕೆಯ ಮೇಲಿನ ಚರ್ಚೆ ಯಲ್ಲಿ ೧೭ ಜನ ಶಾಸಕರು ಭಾಗವಹಿಸಿದ್ದಾರೆ. ಭಾಗವಹಿಸಿರುವ ಶಾಸಕರೆಲ್ಲರೂ ಕೂಡ ಉತ್ತಮವಾದ ರಚನಾತ್ಮಕವಾದ ಸಲಹೆಗಳನ್ನು ನೀಡಿದ್ದಾರೆ. ಈ ಚರ್ಚೆಯಲ್ಲಿ ಭಾಗವಹಿಸಿದ ಅವರೆಲ್ಲರಿಗೂ ಮೊದಲು ನಾನು ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಕೆಲವು ಟೀಕೆಗಳು ಕಟುವಾಗಿವೆ. ಆ ವಿಷಯ ದಲ್ಲೂ ಕೂಡ ನಾನು ಉತ್ತರ ಕೊಡಬೇಕಾಗಿದೆ. ಮುಖ್ಯವಾಗಿ ಎಲ್ಲ ಶಾಸಕರೂ ಈ ಒಂದು ವೈದ್ಯಕೀಯ ಸೌಕರ್ಯ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಸಮರ್ಪಕವಾಗಿ ಸಮರ್ಥನೀಯವಾಗಿ ಒದಗಬೇಕು ಎಂದು ಹೇಳಿದ್ದಾರೆ. ಅದೆಲ್ಲಕ್ಕಿಂತ ಹೆಚ್ಚಾಗಿ ಈಗ ಆಸ್ಪತ್ರೆಗಳಿಗೆ ಒದಗಿಸಿರುವ ಔಷಧಗಳ ಪ್ರಮಾಣ ಹೆಚ್ಚಬೇಕು, ವೈದ್ಯರು ಸಮರ್ಪಕವಾಗಿ ಕೆಲಸ ಮಾಡಬೇಕು ಹಾಗೂ ಬಡವರ ಬಗ್ಗೆ ಅನುಕಂಪ ಹೆಚ್ಚು ಬೇಕು ಎಂಬ ವಿಷಯದಲ್ಲಿ ಮಾನ್ಯ ಸದಸ್ಯರು ಹೆಚ್ಚು ಒತ್ತಾಯ ಮಾಡಿದ್ದಾರೆ. ನಾನು ಅವರ ಸಲಹೆ ಗಳನ್ನು ಸಂಪೂರ್ಣವಾಗಿ ಅಂಗೀಕಾರ ಮಾಡುತ್ತೇನೆ. ಏತಕ್ಕೆಂದರೆ ನಮ್ಮ ದೇಶದಲ್ಲಿ ಹೆಚ್ಚಾಗಿ ಬಡವರೇ ಇರುವಾಗ ಅವರ ಕಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯರು ಹೆಚ್ಚಿನ ಗಮನವನ್ನು ಕೊಡ ಬೇಕು. ಬಡವರು ಆಸ್ಪತ್ರೆಗಳಿಗೆ ಹೋದಾಗ ನಿಜವಾಗಿಯೂ ತಮಗೆ ಹೆಚ್ಚು ಸೌಕರ್ಯ ಸಿಗುತ್ತದೆ ಎಂಬ ಮನೋಭಾವ ಬಡವರಲ್ಲಿ ಉಂಟಾಗಬೇಕು. ಆ ರೀತಿಯಲ್ಲಿ ವೈದ್ಯರ ಸೇವೆಯನ್ನು ನಿರೀಕ್ಷೆ ಮಾಡುವುದು ಸ್ವಾಭಾವಿಕ ಮತ್ತು ಸಮರ್ಪಕ ಎಂದು ನಾನೂ ಭಾವಿಸಿದ್ದೇನೆ. ಈ ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದ ಶ್ರೀಮಾನ್ ವೈ. ರಾಮಕೃಷ್ಣ ಅವರು ಮಾಜಿ ಆರೋಗ್ಯ ಮಂತ್ರಿಗಳು. ತುಂಬಾ

ಅನುಭವವನ್ನು ಪಡೆದಿರುವವರು. ಈ ಇಲಾಖೆಯ ಬಗ್ಗೆ ಹೆಚ್ಚು ಕಳಕಳಿಯಿಂದ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲೂ ಹೆಚ್ಚಾಗಿ ಅವರು ಆರೋಗ್ಯ ಮಂತ್ರಿಗಳಾಗಿದ್ದಾಗ ಏನೇನು ಸಾಧನೆಯಾಯಿತು ಎಂಬುದನ್ನೂ ಕೂಡ ಹೆಚ್ಚಾಗಿ ತಿಳಿಸಿದ್ದಾರೆ. ಅವರು ಹೋದಮೇಲೂ ಕೂಡ ಈ ಇಲಾಖೆಯಲ್ಲಿ ಹೆಚ್ಚಿನ ಸಾಧನೆಯಾಗಿದೆ, ಇಲಾಖೆ ವಿಸ್ತಾರವಾಗಿದೆ. ಆಗ ಎಷ್ಟು ಜನ ವೈದ್ಯರಿದ್ದರು, ಈಗ ಎಷ್ಟು ಜನ ಇದ್ದಾರೆ, ಆಗ ಎಷ್ಟು ಹಣ ಖರ್ಚು ಮಾಡುತ್ತಿದ್ದರು. ಈಗ ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಎಂಬ ಬಗ್ಗೆ ಅಂಕಿಅಂಶಗಳನ್ನು ಈಗ ಕೊಡುತ್ತೇನೆ, ಇವತ್ತು ನಮ್ಮ ರಾಜ್ಯದಲ್ಲಿ ಜನಸಂಖ್ಯೆ ಕೂಡ ಹೆಚ್ಚಿದೆ. ಅದೇ ಪ್ರಮಾಣದಲ್ಲಿ ವೈದ್ಯರು, ವೈದ್ಯಕೀಯ ಸೌಕರ್ಯ, ಆಸ್ಪತ್ರೆಗಳೂ ಹೆಚ್ಚಿದೆ ಎಲ್ಲಕ್ಕಿಂತ ಹೆಚ್ಚಾಗಿ ಇನ್ನೊಂದು ವಿಷಯವನ್ನ ಪ್ರಾಮುಖ್ಯವಾಗಿ ಪ್ರಸ್ತಾಪಿಸಿದರು. ಕುಟುಂಬ ಯೋಜನೆ ಸಮರ್ಪಕವಾಗಿ ಆಗಬೇಕು, ಇದು ಸಮರ್ಪಕವಾಗಿ ಆದಾಗಲೇ ನಮ್ಮ ರಾಷ್ಟದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು. ನಾನೂ ಕೂಡ ಅದನ್ನು ಒಪ್ಪುತ್ತೇನೆ.

ಅಂಕಿ ಅಂಶಗಳನ್ನು ನೋಡಿದಾಗ ನಿಜವಾಗಿ ಗಣನೀಯವಾದ ಪ್ರಮಾಣದಲ್ಲಿ ಕುಟುಂಬ ಯೋಜನೆ ಕಾರ್ಯಕ್ರಮ ನಮ್ಮ ರಾಜ್ಯದಲ್ಲಿ ಯಶಸ್ವಿಯಾಗಿ ನಡೆದಿದೆ ಎಂಬುದು ಗೊತ್ತಾಗುತ್ತದೆ. ಇದು ನಾನು ಹೇಳತಕ್ಕ ಮಾತು ಮಾತ್ರವಲ್ಲ. ಭಾರತ ಸರ್ಕಾರದವರು ಇದನ್ನು ಒಪ್ಪಿದ್ದಾರೆ, ಬಲಾತ್ಕಾರವಾಗಿ ಮತು ಹಿಂಸೆಯನ್ನು ಪ್ರಯೋಗ ಮಾಡಿ ಕೆಲವು ಕಡೆ ಕುಟುಂಬ ಯೋಜನೆ ನಡೆದಿದೆ ಎಂದು ಕೆಲವರು ವಾದ ಮಾಡಿದ್ದಾರೆ. ಆ ಬಗ್ಗೆ ಒಂದು ಕಮಿಷನ್ ಕೂಡ ನೇಮಕವಾಗಿದ್ದು ವಿಚಾರಣೆಯೂ ನಡೆದಿದೆ. ಆ ಕಮಿಷನ್ ಮುಂದೆ ಈ ರೀತಿಯ ಹಿಂಸೆ ಮಾಡಿರುವ ಬಗ್ಗೆಯಾಗಲೀ ದೌರ್ಜನ್ಯ ನಡೆದಿರುವ ಬಗ್ಗೆಯಾಗಲೀ ಎವಿಡೆನ್ಸ್ ಕೂಡ ಹೊರಬಂದಿಲ್ಲ ಎಂದು ಹೇಳಿದರೆ ರಾಮಕೃಷ್ಣ ಅವರೂ ಕೂಡ ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ನಮಗೆ ಆಗ ಅಂಕಿ ಅಂಶ ದೊರೆಯಲಿಲ್ಲ, ನಾವೆಲ್ಲಾ ಜೈಲಿನಲ್ಲಿದ್ದೆವು ಆಮೇಲೆ ನಾವು ಜೈಲಿನಿಂದ ಹೊರಬಂದ ಮೇಲೆ ಅದೆಲ್ಲಾ ಗೊತ್ತಾಯಿತು ಎಂದು ಹೇಳಬಹುದು. ಆದರೆ ಇತ್ತೀಚೆಗೆ ತಾಲ್ಲೂಕು ಬೋರ್ಡ್ ಚುನಾವಣೆ ನಡೆಯಿತು. ಆಗ ಕೂಡ ನೀವು ಜನರನ್ನು ಪ್ರಚೋದನೆ ಮಾಡಿ ತಿಳಿಸಿ ಬಡವರಿಗೆ, ಹಿಂದುಳಿದವರಿಗೆ, ತಿಳುವಳಿಕೆ ಇಲ್ಲದವರಿಗೆ ಹಿಂಸಾಚಾರದಿಂದ ಕುಟುಂಬಯೋಜನೆ ಕಾರ್ಯ ನಮ್ಮ ರಾಜ್ಯದಲ್ಲಿ ಮಾಡಿದೆ ಎಂಬುದನ್ನು ತಿಳಿಸಬಹುದಾಗಿತ್ತು. ಆದರೂ ಕೂಡ ತಾಲ್ಲೂಕು ಬೋರ್ಡ್ ಚುನಾವಣೆ ಫಲಿತಾಂಶಗಳು ಸಮರ್ಪಕವಾದ ಉತ್ತರವನ್ನು ಕೊಟ್ಟಿದೆ. ನಿಜವಾಗಿಯೂ ದಕ್ಷಿಣ ರಾಜ್ಯಗಳಲ್ಲಿ ಅದರಲ್ಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಕುಟುಂಬ ಯೋಜನೆ ಕಾರ್ಯಕ್ರಮ ಫಲಪ್ರದವಾಗಿ ನಡೆದಿದೆ ಎಂದು ಹೇಳಿದರೆ ತಾವೆಲ್ಲರೂ ಒಪ್ಪುತ್ತೀರೆಂದು ಭಾವಿಸುತ್ತೇನೆ. ಭಾರತ ಸರ್ಕಾರದ ಧೋರಣೆಯ ಫಲವಾಗಿ ಕಳೆದ ವರ್ಷ ಕುಟುಂಬಯೋಜನೆ ಕಾರ್ಯಕ್ರಮ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ಯಾವ ವೇಗದಲ್ಲಿ ನಡೆಯಬೇಕಾಗಿತ್ತೋ ಆ ವೇಗದಲ್ಲಿ ನಡೆಯಲಿಲ್ಲ. ಆದರೂ ನಮ್ಮ ರಾಜ್ಯ ಇಡೀ ದೇಶದಲ್ಲಿ ಮೂರನೇ ಸ್ಥಾನವನ್ನು ಪಡೆದಿದೆಯೆಂದು ಹೇಳಿದರೆ ತಾವೆಲ್ಲರೂ ಹೆಮ್ಮೆಪಡುತ್ತೀರಿ ಎಂದು ನನಗನ್ನಿಸುತ್ತದೆ.

(ಶ್ರೀ ಎ. ಸಿ. ನಾಣಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದರ ಬಗ್ಗೆ ಅಂಕಿಅಂಶಗಳನ್ನು ಒದಗಿಸಬೇಕು ಎಂದು ನಿನ್ನೆ ತಾವೆಲ್ಲಾ ಹೇಳಿದ್ದೀರಿ, ನಾನೂ ಕೂಡ ಅಂಕಿ ಅಂಶಗಳನ್ನು ಒದಗಿಸುವುದಕ್ಕೆ ತಯಾರಾಗಿದ್ದೇನೆ. 1975--76ರಲ್ಲಿ Sterlisation – target 1,39,000, achievement 1,20,671; I.U D, 3,30.900 this is target, achievement 27,581; Contraseptive target 1.21,600 – achievement 81,907. In 1976–77 Sterlisation target 2,44,500; achievement 4,31,414; I.U.D target 17;000, achievement 30,245; Contraseptive 2,12,500 target – achievhment 91,263; 1977–78 Sterlisation target 3,00,000 – achievement 93.971; I.U.D. target 57.400 – achievement 23,377; contraseptive target 1,79,200 – achievement 77,571; ಈ ಅಂಕಿ ಅಂಶಗಳನ್ನು ಕೇಳಿದಾಗ ಮಾನ್ಯ ರಾಮಕೃಷ್ಣ ಅವರು ನಮ್ಮ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ ಎಂಬುದನ್ನು ಒಪ್ಪುತ್ತೀರೆಂದು ನಂಬಿದ್ದೇನೆ. ಬೇರೆ ರಾಜ್ಯಗಳಲ್ಲಿ ಕುಟುಂಬ ಯೋಜನೆ ಕಾರ್ಯ ಫಲಪ್ರದವಾಗಿ ಆಗಿಲ್ಲ ಎಂಬುದನ್ನು ಅರಿತು ಮಾನ್ಯ ಪ್ರಧಾನಿಯವರು ಎಲ್ಲ ರಾಜ್ಯಗಳಿಗೂ ಪತ್ರ ಬರೆದು ನೀವು ಈ ಕೆಲಸವನ್ನು ಮಾಡಲೇಬೇಕು, ಇದು ರಾಷ್ಟ್ರದ ಮುಖ್ಯ ಸಮಸ್ಯೆ, ಈ ಕೆಲಸವನ್ನು ಸರಿಯಾಗಿ ಮಾಡದೇ ಇದ್ದರೆ

ನಾವು ಕೊಡತಕ್ಕ ಗ್ರಾಂಟನ್ನು ಕೂಡ ಕಡಿಮೆ ಮಾಡುತ್ತೇವೆ ಎಂದು ಪ್ರಸ್ತಾಪ ಮಾಡಿದ್ದಾರೆ ಅದನ್ನು ತಾವು ಒಪ್ಪಲಿಲ್ಲ. ನಾವು ನಮ್ಮ ರಾಜ್ಯದಮಟ್ಟಿಗೆ ಈ ಸಲಹೆಯನ್ನು ಅಂಗೀಕರಿಸುವುದಕ್ಕೆ ತಯಾರಿಲ್ಲ, ಏಕೆಂದರೆ ನಮ್ಮ ರಾಜ್ಯದಲ್ಲಿ ಈ ಪರಿಸ್ಥಿತಿ ಇಲ್ಲ. ನಾವು ಈಗಾಗಲೇ ಯಶಸ್ಸನ್ನು ಸಾಧಿಸಿದ್ದೇವೆ, ಇನ್ನು ಮುಂದೂ ಕೂಡ ಸಾಧಿಸುವವರಿದ್ದೇವೆ. ಆದ್ದರಿಂದ ದಯವಿಟ್ಟು ಇದಕ್ಕೂ ಗ್ರಾಂಟಿಗೂ ಲಿಂಕ್ ಮಾಡ ಬೇಡಿ ಎಂದು ಹೇಳಿದ್ದೇವೆ. ಕುಟುಂಬಯೋಜನೆ ಕಾರ್ಯಕ್ರಮ ನಮ್ಮ ರಾಜ್ಯದಲ್ಲಿ ಯಶಸ್ವಿಯಾಗಿ ನಡೆದು ಜನಸಂಖ್ಯಾ ನಿಯಂತ್ರಣ ಸಾಕಷ್ಟು ಚೆನ್ನಾಗಿ ಆಗಿದೆ. ಅದರ ಯಶಸ್ಸು ದೊರೆತಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಈ ವಿಷಯದಲ್ಲಿ ಸರ್ಕಾರದ ಅಧಿಕಾರಿಗಳು ನಿಜವಾಗಿ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರು ಹೆಚ್ಚು ಹೆಚ್ಚು ಸಕ್ರಿಯ ಪಾತ್ರ ವಹಿಸಿದರೆ ನಾವು ಈಗ ಏನು ಯಶಸ್ಸನ್ನು ಸಾಧಿಸಿದ್ದೇವೆ. ಇದರ ಎರಡು ಪಟ್ಟು ಯಶಸ್ಸನ್ನು ಸಾಧಿಸಬಹುದು, ಆ ದಿಸೆಯಲ್ಲೂ ಕೂಡ ಪ್ರಚಾರ ಕಾರ್ಯ ನಡೆಯುತ್ತಿದೆ ಸಾರ್ವಜನಿಕರು ಮತ್ತು ಸಾರ್ವಜನಿಕ ಸಂಸ್ಥೆಗಳು ಸಕ್ರಿಯ ಪಾತ್ರ ವಹಿಸಿ ಈ ದಿಸೆಯಲ್ಲಿ ಕೆಲಸ ಮಾಡುವುದಾದರೆ compulsion&Co-ertion ಇಲ್ಲದೇ ಈ ಸಮಸ್ಯೆಯನ್ನು ಬಗೆಹರಿಸಬಹುದು. ಈ ಜನಸಂಖ್ಯಾ ಸಮಸ್ಯೆ, ರಾಷ್ಟ್ರದ ಸಮಸ್ಯೆ ಸುಖವಾಗಿ ಬಾಳ ಬೇಕಾದರೆ ಈ ಒಂದು ತತ್ವವನ್ನು ನಾವು ಒಪ್ಪಲೇಬೇಕು ಎಂದು ಸ್ವಯಂಪ್ರೇರಣೆಯಿಂದ ಜನರು ಮುಂದೆ ಬಂದಾಗ ಇದರ ಯಶಸ್ಸನ್ನು ನೂರಕ್ಕೆ ನೂರರಷ್ಟು ಸಾಧಿಸಬಹುದು ಎಂದು ಧೈರ್ಯವಾಗಿ ಹೇಳಬಲ್ಲೆ. ಈ ಇಲಾಖೆಯಲ್ಲಿ ವರ್ಷೇ ವರ್ಷೇ ಹೆಚ್ಚವಾಗುತ್ತ ಇರತಕ್ಕ ಹಣದ ಅಂಕಿ ಅಂಶವನ್ನು ನಾನು ಹೇಳುವುದಾದರೆ ೧೯೭೪-೭೫ರಲ್ಲಿ ಅಲಾಟ್‌ಮೆಂಟ್ ೩,೪೦೮ ಲಕ್ಷ ರೂಪಾಯಿ, ೧೯೭೫-೭೬ರಲ್ಲಿ ೩,೪೬೭ ಲಕ್ಷ ರೂಪಾಯಿ, ೧೯೭೬-೭೭ರಲ್ಲಿ ೫.೩೮೪ ಲಕ್ಷ ರೂಪಾಯಿಗಳು, ೧೯೭೭-೭೮ರಲ್ಲಿ ಒದಗಿಸಿರುವ ಹಣ ೬,೨೮೪ ಲಕ್ಷ ರೂಪಾಯಿ. ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕು ಎಂದು ಹೇಳುವುದು ಸರಿ, ಆದರೆ ನಮಗೆ ಇರತಕ್ಕ ಸಂಪನ್ಮೂಲಗಳ ದೃಷ್ಟಿಯನ್ನೂ ಗಮನದಲ್ಲಿಟ್ಟುಕೊಳ್ಳಲಾಗಿದೆ. ಸರ್ಕಾರ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಗ್ರಾಮಾಭಿವೃದ್ಧಿಗೆ, ರಸ್ತೆ ಕಾಮಗಾರಿ, ಬಡವರಿಗೆ ಮನೆಗಳು, ೨೦ ಅಂಶದ ಕಾರ್ಯಕ್ರಮ ಇದೆಲ್ಲಾ ಫಲಪ್ರದವಾಗಿ ಕಾರ್ಯಗತವಾಗಬೇಕು ಎಂಬ ಕಾಲದಲ್ಲಿ ಈ ಆರೋಗ್ಯ ಇಲಾಖೆಗೆ ಇಷ್ಟು ಹಣವನ್ನು ಒದಗಿಸಿರುವುದಕ್ಕಾಗಿ ಎಲ್ಲರೂ ಸರ್ಕಾರವನ್ನು ಮೆಚ್ಚಬೇಕಾಗಿದೆ ಈ ವೈದ್ಯಕೀಯ ವಿದ್ಯಾಭ್ಯಾಸದ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಕುಟುಂಬಯೋಜನೆ ಕಾರ್ಯಕ್ರಮವನ್ನು ಶೇಕಡ ೭೫ರಷ್ಟು ಹರಿಜನರ ಮೇಲೆ ಪ್ರಯೋಗ ಮಾಡಿದ್ದಾರೆಂಬುದು ನಿಜವೇ?

ಶ್ರೀ ಎಂ. ಮಲ್ಲಪ್ಪ.—ಇದು ಸತ್ಯಕ್ಕೆ ದೂರವಾದ ಮಾತು. ಆಯೋಗ ರಚನೆಯಾಗಿದೆ. ಆಯೋಗದ ಮುಂದೆ ಯಾರಾದರೂ ಸ್ವಯಂಪ್ರೇರಿತರಾಗಿ ತಮ್ಮ ಕಷ್ಟಗಳನ್ನು ಆ ಕಾಲದಲ್ಲಿ ಹೇಳಬೇಕಾಗಿತ್ತು. ತಾವು ಹರಿಜನ ಬಂಧುಗಳೂ ಹೌದು, ಹರಿಜನ ನಾಯಕರೂ ಹೌದು. ಹರಿಜನ ಕೇರಿಗಳಲ್ಲಿ ಎಲ್ಲರಿಗೂ ತಿಳುವಳಿಕೆ ಹೇಳಿ ಬಲಪ್ರಯೋಗ ಮಾಡಿ ಈ ರೀತಿ ಮಾಡಿದ್ದರೆಂದು ರುಜುವಾತು ಮಾಡಿದ್ದರೆ ಸರ್ಕಾರ ಖಂಡಿತವಾಗಿ ಆ ಸತ್ಯವನ್ನು ಒಪ್ಪುತ್ತಿತ್ತು. ಆ ರೀತಿ ಎಲ್ಲೂ ಆಗಿಲ್ಲ. ನಾನು ಇರತಕ್ಕ ಊರಿನಲ್ಲಿ ೨೦೦೦ ಜನ ಹರಿಜನರಿದ್ದಾರೆ. ತಾವು ನಾಳೇನೇ ಹೋಗಿ ನೋಡಬಹುದು, ಎಲ್ಲಾದರೂ ಅಧಿಕಾರಿಗಳು ಬಲವಂತ ಮಾಡಿದ್ದರೆ ತಾವು ರುಜುವಾತು ಮಾಡಿಕೊಡಿ. ಹರಿಜನರೂ ಕೂಡ ಬುದ್ಧಿವಂತರಾಗಿದ್ದಾರೆ. ಅವರಿಗೂ ಪ್ರಜ್ಞೆ ಇದೆ. ಹೆಚ್ಚು ಜನಸಂಖ್ಯೆಯನ್ನು ಬೆಳೆಸಿಕೊಂಡರೆ ಉತ್ತಮ ಜೀವನ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಅವರೂ ತಿಳಿದುಕೊಂಡಿದ್ದಾರೆ.

ಶ್ರೀ ವೈ. ರಾಮಕೃಷ್ಣ,—ಆಯೋಗದ ಮುಂದೆ ಕಳುಹಿಸುವುದು ಬೇಡ, ತಮಗೆ ಕಳುಹಿಸುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ರಾಮಕೃಷ್ಣ ಅವರು ಮೆಡಿಕಲ್ ಎಜುಕೇಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೆಡಿಕಲ್ ಕಾಲೇಜುಗಳಲ್ಲಿರತಕ್ಕಂಥ ಸೀಟುಗಳ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಕಡಿಮೆಯಾಗಿರುವುದು ನಿಜ. ಇದಕ್ಕೆ ಕಾರಣ ಏನೆಂದರೆ, ಪಿ.ಯು.ಸಿ. ಪಿ.ಪಿ.ಸಿ. ಕೋರ್ಸ್ ಆಗಿ ನಂತರ ಮೆಡಿಕಲ್ ಪ್ರಾರಂಭವಾಗುತ್ತದೆ. ಇದನ್ನು ೨ ವರ್ಷದ ಕೋರ್ಸ್ ಮಾಡಿರುವುದರಿಂದ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಸೀಟುಗಳನ್ನು ನಿಗದಿಮಾಡಬೇಕು ಎಂದು ನಿಗದಿ ಮಾಡಿ ಸೀಟುಗಳನ್ನು ಕಡಿಮೆಮಾಡಿಕೊಟ್ಟಿದ್ದಾರೆಯೇ ಹೊರತು ಸರ್ಕಾರ ಉದಾಸೀನದಿಂದ ಈ ರೀತಿ ಮಾಡಿಲ್ಲ ಇವತ್ತೂ ಕೂಡ ಸೀಟುಗಳನ್ನು ಹೆಚ್ಚು ಮಾಡಿ ಎಂದರೆ ಮಾಡಬಹುದು. ಡಾಕ್ಟರುಗಳಲ್ಲಿ ನಿರುದ್ಯೋಗ ವರ್ಷೇ ವರ್ಷೇ ಹೆಚ್ಚು ಹೆಚ್ಚು ಬೆಳೆಯುತ್ತಾ ಇದೆ. ಮೆಡಿಕಲ್ ಕಾಲೇಜುಗಳಿಂದ ಹೊರಗೆ ಬರತಕ್ಕಂಥ

ಡಾಕ್ಟರುಗಳಿಗೆ ಉದ್ಯೋಗವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇವತ್ತು ೨೦೦೦ಕ್ಕೂ ಮೇಲ್ಪಟ್ಟು ಡಾಕ್ಟರುಗಳಿದ್ದಾರೆ. ನಾನು ಈ ಒಂದು ಇಲಾಖೆಯನ್ನು ವಹಿಸಿಕೊಂಡ ನಂತರ ೨೦೦ ಜನ ಹರಿಜನ ಡಾಕ್ಟರುಗಳು ನನ್ನ ಹತ್ತಿರ ಬಂದು ನಾವು ಅನ್‌ಎಂಪ್ಲಾಯ್ಡ್ ಡಾಕ್ಟರುಗಳಿದ್ದೇವೆ, ನಮಗೆ ಕೆಲಸ ಒದಸಗಿಬೇಕು ಎಂದು ಹೇಳಿದರು. ನಾನು ಸೆಕ್ರೆಟರಿಯನ್ನು ಕರೆದು ಇವರಿಗೆ ಏನಾದರೂ ಪ್ರೋತ್ಸಾಹ ಕೊಡಬೇಕು ಎಂದು ಹೇಳಿದಮೇಲೆ ಡೈರೆಕ್ಟಾಗಿ ಲೋಕಲ್ ಅಪಾಯಿಂಟ್‌ಮೆಂಟ್ ಮಾಡಿ ಸುಮಾರು ೯ ಜನರನ್ನು ಕಳೆದ ತಿಂಗಳು ತೆಗೆದುಕೊಂಡಿದ್ದೇವೆ, ಈ ತಿಂಗಳಲ್ಲಿ ೧೦೦ ಜನರನ್ನು ತೆಗೆದು ಕೊಳ್ಳಲಿಕ್ಕೆ ಏರ್ಪಾಟು ಮಾಡಿದ್ದೇವೆ. ದಿನೇ ದಿನೇ ಡಾಕ್ಟರುಗಳ ನಿರುದ್ಯೋಗ ಬೆಳೆಯುತ್ತಾ ಇರ ಬೇಕಾದರೆ ಸೀಟುಗಳನ್ನು ಹೆಚ್ಚು ಮಾಡಿ, ನಿರುದ್ಯೋಗ್ಯವನ್ನು ಹೆಚ್ಚು ಮಾಡುವುದು ಸಾಧುವೇ ಎನ್ನು ವುದನ್ನು ನಾವು ನೀವೂ ಆಲೋಚನೆ ಮಾಡಬೇಕಾಗಿದೆ. ಮತ್ತೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಮಾರಿಕೊಳ್ಳುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ಮೇಲೆ ಸರ್ಕಾರ ಹಂತಹಂತವಾಗಿ ತನ್ನ ಹಿಡಿತವನ್ನು, ಬಿಗಿಮುಷ್ಟಿಯನ್ನು ಬಲ ಗೊಳಿಸುತ್ತಾ ಇದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ತಾವು ಅಂಕಿಅಂಶಗಳನ್ನು ಹೇಳುತ್ತಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ೨೯೦೦ ಜನಸಂಖ್ಯೆಗೆ ಒಬ್ಬ ಡಾಕ್ಟರ್ ಇದ್ದಾರೆ. ಆಲ್ ಇಂಡಿಯಾ ಲೆವೆಲ್‌ನಲ್ಲಿ ೫೦೮೦ ಪ್ರಜಾಸಂಖ್ಯೆಗೆ ಒಬ್ಬ ಡಾಕ್ಟರ್ ಬ್ರಿಟನ್‌ನಲ್ಲಿ ೧೦೦೦೦ ಜನಸಂಖ್ಯೆಗೆ ಒಬ್ಬ ಡಾಕ್ಟರ್, ಅಮೆರಿಕಾದಲ್ಲಿ ೧೦೦೦೦ ಜನಸಂಖ್ಯೆಗೆ ಒಬ್ಬ ಡಾಕ್ಟರ್. ರಾಜ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದಕ್ಕಿಂತ ದೇಶವನ್ನು ಮನಸ್ಸಿನಲ್ಲಿಟ್ಟು ಕೊಂಡರೆ ಇನ್ನೂ ಹೆಚ್ಚು ಡಾಕ್ಟರುಗಳು ಬೇಕಾಗುವುದಿಲ್ಲವೇ.

ಶ್ರೀ ಎಂ. ಮಲ್ಲಪ್ಪ.—ಕೇಂದ್ರ ಸರ್ಕಾರ ತಮ್ಮ ಪಕ್ಷದ್ದೇ ಇದೆ, ಅನೇಕ ರಾಜ್ಯಗಳಲ್ಲಿ ಜನತಾ ಸರ್ಕಾರ ಇದೆ. ನಮ್ಮಲ್ಲಿರತಕ್ಕ ಡಾಕ್ಟರುಗಳನ್ನು ಅವರು ಅಪಾಯಿಂಟ್ ಮಾಡಿಕೊಂಡರೆ ನಾವು ಅದನ್ನು ಸ್ವಾಗತಿಸುತ್ತೇವೆ. ಡಾಕ್ಟರುಗಳೂ ಹೋಗುವುದಕ್ಕೆ ತಯಾರಾಗಿದ್ದಾರೆ. ಒರಿಸ್ಸಾ, ವೆಸ್ಟ್ ಬೆಂಗಾಲ್ ನಲ್ಲಿ ನಮ್ಮ ಡಾಕ್ಟರುಗಳನ್ನು ಸ್ವಾಗತಿಸುತ್ತಾರೆ. ತಾವು ಪ್ರಚೋದನೆಮಾಡಿ ಕೇಂದ್ರಕ್ಕೆ ಮತ್ತು ಜನತಾ ಸರ್ಕಾರಗಳು ಇರುವ ಕಡೆ ನಮ್ಮಲ್ಲಿ ದಕ್ಷ ಡಾಕ್ಟರುಗಳನ್ನು ತಯಾರು ಮಾಡುತ್ತಿದ್ದೇವೆ, ದಯವಿಟ್ಟು ನೀವು ಅಪಾಯಿಂಟ್ ಮಾಡಿಕೊಳ್ಳಿ ಎಂದು ಹೇಳಿ, ಅದಕ್ಕೆ ನಾವು ಅಡ್ಡಿಬರುವುದಿಲ್ಲ.

ಇನ್ನು ಮೆಡಿಕಲ್ ಯೂನಿವರ್ಸಿಟಿ ಆಗಬೇಕು ಎಂಬ ಇಚ್ಛೆಯನ್ನು ಅನೇಕ ಜನ ಶಾಸಕರು ವ್ಯಕ್ತ ಪಡಿಸಿದ್ದಾರೆ. ೧೯೭೩ರಲ್ಲಿ ನಮ್ಮ ಸರ್ಕಾರ ಮೆಡಿಕಲ್ ಯೂನಿವರ್ಸಿಟಿ ಆಗಬೇಕು ಎನ್ನತಕ್ಕ ಕಾರ್ಯ ಕ್ರಮವನ್ನು ಕೈಗೊಂಡು ಆ ಬಗ್ಗೆ ಒಂದು ಬಿಲ್ ತಯಾರಾಗಿ, ಈ ಸದನದಲ್ಲಿ ಆ ಬಿಲ್ ಪಾಸಾಗಿ ಆನಂತರ ಮೇಲ್ಮನೆಯಲ್ಲಿ ಆ ಬಿಲ್ ಮೂವ್ ಆಗಲಿಲ್ಲ. ಐ.ಎಂ.ಸಿ. ಯು.ಜಿ.ಸಿ., ಭಾರತ ಸರ್ಕಾರ ದವರು ಸದ್ಯಕ್ಕೆ ಇದರ ಅವಶ್ಯಕತೆ ಇಲ್ಲ ಎಂದು ತಿಳಿಸಿದ ಮೇಲೆ ಅಲ್ಲಿಗೆ ನಿಂತುಹೋಯಿತು. ಭಾರತ ಸರ್ಕಾರದವರು ಬೆಂಬಲ ಕೊಡುವುದಾದರೆ ಮೆಡಿಕಲ್ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನಮಾಡೋಣ, ಈಗ ಭಾರತ ಸರ್ಕಾರದವರು ನಮಗ ಬೆಂಬಲ ಕೊಡುತ್ತಾರೆ ಎನ್ನುವುದರಲ್ಲಿ ಸಂಶಯ ಇದೆ. ಆಗ ಶ್ರೀಮಾನ್ ರಾಜನಾರಾಯಣ್ ಅವರು ಇದ್ದರು. ಕಳೆದ ತಿಂಗಳು ನಾನು ಅವರನ್ನು ಭೇಟಿ ಮಾಡಿದಾಗ, ಈ ವಿಷಯವನ್ನು ಹೇಳಿದೆ, ಆಗ ಅವರು ಯು.ಪಿ.ಯಲ್ಲಿ ಇಂತಹ ಒಂದು ಯೂನಿವರ್ಸಿಟಿ ಸ್ಥಾಪನೆ ಮಾಡಬೇಕು ಎಂದು ಇದೆ. ಆದು ಆದರೆ ನಿಮ್ಮದೂ ಆಗೇ ಆಗುತ್ತದೆ ಎಂದು ಹೇಳಿದರು. ಈಗ ಅವರು ಇಲ್ಲ, ಕಾದು ನೋಡೋಣ ಮಾನ್ಯ ಸದಸ್ಯರು ಇನ್ನೊಂದು ವಿಷಯವನ್ನು ಹೇಳಿದರು. ಇಷ್ಟೊಂದು ನಿರುದ್ಯೋಗ ಇದೆ ಆದುದರಿಂದ ಪ್ರೈವೇಟ್ ಡಾಕ್ಟರುಗಳಿಗೆ ನಸಿನಂಗ್ ಹೋಂ ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಡಬೇಕು—ಎಂದು ಹೇಳಿದರು. ಸರ್ಕಾರ ನಿಜವಾಗಿಯೂ ಪ್ರೋತ್ಸಾಹ ಕೊಡುತ್ತಿದೆ. ನರ್ಸಿಂಗ್ ಹೋಂ ಬಿಲ್ಲನ್ನು ಏನು ತಂದಿದ್ದೇವೆ ಇದು ೮ ಪಟ್ಟಣಗಳಿಗೆ ಅಂದರೆ ಒಂದು ಲಕ್ಷ ಜನಸಂಖ್ಯೆ ಇರತಕ್ಕ ಪ್ರದೇಶಗಳಿಗೆ ಮಾತ್ರ ಅನ್ವಯಿಸುತ್ತದೆ. ಸಣ್ಣ ಪುಟ್ಟ ಗ್ರಾಮಗಳಿಗೆ, ತಾಲ್ಲೂಕು ಹೆಡಾಕ್ವಾಟರ್ಸ್ ಮತ್ತು ಜಿಲ್ಲಾ ಹೆಡ್‌ಕ್ವಾಟರ್ಸ್‌ಗಳಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇದ್ದರೆ ಅಂಥಾದ್ದಕ್ಕೆ ಇದು ಅನ್ವಯಿಸುವುದಿಲ್ಲ, ದಿವಂಗತ ಪುಟ್ಟಸ್ವಾಮಿಯವರು ಮಾಜಿ ಮಂತ್ರಿಗಳಾಗಿದ್ದರು; ಅವರು ತುಂಬಾ ಅನುಭವಸ್ಥರು. ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಿ ಅವರು ಈಗಾಗಲೇ ತಮ್ಮ ಶಿಫಾರಸ್‌ನ್ನು ಕೊಟ್ಟಿದ್ದಾರೆ, ಅದು ಅಂಗೀ ಕಾರವಾಗುವುದಕ್ಕೆ ಯೋಗ್ಯವಾಗಿಯೋ ಇಲ್ಲವೋ ಎನ್ನುವುದನ್ನು ಸರ್ಕಾರ ಪರಿಶೀಲಿಸುತ್ತಿದೆ. ಸಂಬಂಧ

ಪಟ್ಟವರೊಡನೆ ಸಮಾಲೋಚನೆ ನಡೆಸಿದೆ. ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ, ನರ್ಸಿಂಗ್ ಹೋಂ ಬಿಲ್ ಆಕ್ಟ್ ಆಗಿದೆ. ಆದಕ್ಕೆ ಅಮೆಂಡ್‌ಮೆಂಟ್ ತರುವುದಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರಾದ ತಮ್ಮಯ್ಯನವರು ಒಂದು ಮಾತನ್ನು ಹೇಳಿದರು. ಸಾರ್ವಜನಿಕ ಸಂಸ್ಥೆಗಳಾದ ಲಯನ್ಸ್ ಕ್ಲಬ್, ವಾಲೆಂಟರಿ ಕ್ಲಬ್‌ಗಳು ಮುಂದೆ ಬಂದರೆ ಅವರ ಸಹಾಯ ಪಡೆದು ಜನಗಳಿಗೆ ಮೆಡಿಕಲ್ ಚೆಕ್ ಆಫ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೋ ಎಂದು ಕೇಳಿದರು. ಈ ರೀತಿ ಸಹಕಾರ ವನ್ನು ಮೊದಲಿನಿಂದಲೂ ಕೊಟ್ಟುಕೊಂಡು ಬರುತ್ತಿದ್ದೇವೆ. ಇನ್ನು ಮುಂದೆಯೂ ಕೊಡುತ್ತೇವೆ. ಯಾವರೀತಿ ಸಹಾಯ ಕೊಡಬೇಕು ಎಂದು ಕೇಳಿದರೆ ಕಾನೂನಿನ ಚೌಕಟ್ಟಿಗೆ ಒಳಪಟ್ಟು ಸಹಾಯ ಮಾಡಲಿಕ್ಕೆ ಸರ್ಕಾರ ತಯಾರಿದೆ.

ಇನ್ನು ವೈದ್ಯಕೀಯ ಇಲಾಖೆಯಲ್ಲಿ ಇರತಕ್ಕ ಪೋಸ್ಟ್‌ಗಳನ್ನು ಇನ್ನೂ ಭರ್ತಿ ಮಾಡಿಲ್ಲ, ಬಹಳ ತೊಂದರೆಯಾಗಿದೆ ಎಂದು ಹೇಳಿದರು. ಕೆಲವು ಪೋಸ್ಟ್‌ಗಳನ್ನು ಫಿಲಪ್ ಮಾಡಿಲ್ಲ, ಆದ್ದರಿಂದ ಇಲಾಖೆಗೆ ತೊಂದರೆಯಾಗಿದೆ ನಿಜ, ಇದಕ್ಕೆ ಕಾರಣವೇನೆಂದರೆ, ಎಕಾನಮಿ ಆರ್ಡರ್ ಬಂತು, ನಂತರ ಪ್ರೆಸಿಡೆಂಟ್ ರೂಲ್ ಬಂತು. ಆ ಕಾಲದಲ್ಲಿ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಆದಕ್ಕಾಗಿ ಕೆಲವು ಪೋಸ್ಟ್‌ಗಳು ಖಾಲಿ ಇವೆ. ಈಗ ಮಲೇರಿಯಾ ಕಂಟ್ರೋಲ್ ಮಾಡುವುದಕ್ಕೆ ಪ್ಯಾರಾ ಮೆಡಿಕಲ್ ಸ್ಟಾಫ್ ಅವಶ್ಯಕವಾಗಿದೆ. ಇದರ ಬಗ್ಗೆ ಸಂಬಂಧಪಟ್ಟರೊಡನೆ ಸಮಾಲೋಚನೆಮಾಡಿ ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಎಲ್ಲಾ ಪೋಸ್ಟ್‌ಗಳನ್ನು ಫಿಲಪ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ರಾಮಕೃಷ್ಣರವರು ಒಂದು ಆಪಾದನೆ ಮಾಡಿದರು. ಸರ್ವೀಸ್ ಕಂಡೀಷನ್ಸ್ ಬಗ್ಗೆ ಹೇಳುತ್ತಾ ಡೈರಕ್ಟರ್ ರವರು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಕಳಿಸಿ ಅದರ ಅಂಗೀಕಾರ ಪಡೆದು ಇನ್ನೂ ಬಿಗಿ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದರು. ಡೈರಕ್ಟರ್ ನೇರವಾಗಿ ಪಬ್ಲಿಕ್ ಸರ್ವಿಸ್ ಕಮೀಷನ್‌ಗೆ ಈ ವಿಷಯ ವನ್ನು ತರಲಿಕ್ಕೆ ಸಾಧ್ಯವಿಲ್ಲ ಪ್ರತಿಯೊಂದೂ ಸರ್ಕಾರದ ಮುಂದೆ ಬರಬೇಕು. ಸೆಕ್ರೆಟರಿಗಳು ನೋಡ ಬೇಕು, ನಂತರ ವಿಷಯ ಹೋಗಬೇಕು. ಡೈರಕ್ಟರ್ ನೇರವಾಗಿ ಮಾಡಿದ್ದಾರೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಮಾನ್ಯ ಸದಸ್ಯರು ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿದರು.

ಇವತ್ತು ತಾವು ಏನು ಆಡಳಿತ ವಿಕೇಂದ್ರೀಕರಣವಾಗಬೇಕು ಮತ್ತು ಪುನರ್ ವಿಂಗಡಣೆಯಾಗಬೇಕು ಮತ್ತು ಹೆಚ್ಚು ದಕ್ಷತೆಯಿಂದ ಆಡಳಿತವನ್ನು ನಡೆಸಬೇಕೆಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಆ ದಿಶೆಯಲ್ಲಿ ಯಾವ ರೀತಿಯಾಗಿ ಯಾವ ಕಾಲದಲ್ಲಿ ಅದನ್ನು ಪುನರ್ ವಿಂಗಡಣೆ ಮಾಡಿ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟು ಇನ್ನು ಹೆಚ್ಚು ದಕ್ಷತೆಯಿಂದ ಕೆಲಸ ಮಾಡಲು ಅನುಕೂಲವಾಗುವಂತೆ ಸರ್ಕಾರ ಪ್ರಯತ್ನ ಮಾಡುತ್ತಿದೆಂದು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ ಒನ್ ಮ್ಯಾನ್ ಶೋ ಆಗಿದೆಂದು ಹೇಳಿದರು ಆ ರೀತಿ ಒಬ್ಬರೇ ಮಂತ್ರಿಗಳು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಇಲಾಖೆಯಲ್ಲಿ ೪ ಸಾವಿರ ಡಾಕ್ಟರ್‌ಗಳು ಇದ್ದಾರೆ ಅಲ್ಲದೆ ೩ ಸಾವಿರ ಜನ ವರ್ಕರ್ಸ್ ಇದ್ದಾರೆ ೧೪ ಸಾವಿರ ಜನ ಕ್ಲಾಸ್ (೪) ಎಂಪ್ಲಾಯಿಸ್ ಇದ್ದಾರೆ ಅವರ ಯೋಗ ಕ್ಷೇಮವನ್ನು ನೋಡಿಕೊಳ್ಳುವುದು ಮತ್ತು ಅವರಿಂದ ಸಕ್ರಿಯವಾಗಿ ದೇಶಕ್ಕೆ ಸೇವೆ ಸೌಲಭ್ಯವನ್ನು ದೊರೆಯುವಂತೆ ನೋಡಿಕೊಳ್ಳಬೇಕಾದರೆ ಒಬ್ಬರಿಂದಲೇ ಸಾಧ್ಯವಾಗುತ್ತದೆಯೋ ? ಎಂಬುದನ್ನು ತಾವು ಆಲೋಚಿಸಬೇಕು. ಅದಕ್ಕಾಗಿಯೇ ನಾವು ಈಗಾಗಲೇ ಅಧಿಕಾರದ ವಿಕೇಂದ್ರೀಕರಣವನ್ನು ಮಾಡಿದ್ದೇವೆ ಪುನರ್ ವಿಂಗಡಣೆ ಮಾಡಿ ಇನ್ನು ಹೆಚ್ಚಿನ ದಕ್ಷತೆಯಲ್ಲಿ ಕೆಲಸ ಕಾರ್ಯಗಳು ಆಗಬೇಕು, ಜನತೆಗೆ ಹೆಚ್ಚಿನ ಸೌಲಭ್ಯಗಳು ದೊರೆಯಬೇಕು ಎನ್ನುವ ಕಾರ್ಯದಲ್ಲಿ ತೊಡಗಿದ್ದೇವೆ. ಐ.ಎಸ್.ಐ. ಮತ್ತು ಇ.ಎಸ್.ಐ. ಡೈರೆಕ್ಟರ್‌ಗಳವರ ಅಂಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಅವರಿಗೆ ಡೆಲಿಗೇಷನ್ ಆಫ್ ಪವರ್ ಕೊಡಬೇಕೆಂದು ಮಾಡಿದ್ದೇವೆ. ತಮಗೆಲ್ಲಾ ಗೊತ್ತಿರುವಂತೆ ಈಗಾಗಲೇ ರಾಜ್ಯ ಸರ್ಕಾರದವರು ಜಿಲ್ಲಾ ಮಟ್ಟದಲ್ಲಿ ಡೆಪ್ಯುಟಿ ಡೈರೆಕ್ಟರ್‌ರವರಿಗೆ. ಮತ್ತು ಅವರ ಜೊತೆಗೆ ಅಸಿಸ್ಟೆಂಟ್ ಡೈರೆಕ್ಟರ್ ಗೆಜೆಟೆಡ್ ರ್‍ಯಾಂಕ್‌ನವರಿಗೆ ಯೋಗ್ಯ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಒಪ್ಪಿಕೊಂಡಿದೆ. ಆ ರೀತಿಯ ಪುನರ್ ವಿಂಗಡಣೆ ಆದಾಗ ನಿಜವಾಗಿಯೂ ಇನ್ನು ಹೆಚ್ಚಿನ ಸಮರ್ಪಕವಾದ ರೀತಿಯಲ್ಲಿ ಜನಗಳಿಗೆ ಸಹಾಯ ಮತ್ತು ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ,

೧೧–೩೦ ಎ.ಎಂ.

ಓಬ್ಬ ಸದಸ್ಯರು.—ಆಯುರ್ವೇದಕ್ಕೆ ಎಷ್ಟು ಡೈರೆಕ್ಟರ್‌ಗಳನ್ನು ಹಾಕಿದ್ದೀರಿ?

ಶ್ರೀ ಎಂ. ಮಲ್ಲಪ್ಪ.—ಆಮೇಲೆ ಆ ವಿಷಯದ ಬಗ್ಗೆ ಬರುತ್ತೇನೆ, ಇನ್ನು ನಮ್ಮ ಯುವ ಡಾಕ್ಟರ್‌ಗಳ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಾನು ಹೇಳುತ್ತೇನೆ ನಮ್ಮ ರಾಜ್ಯದಲ್ಲಿ ಡಾಕ್ಟರ್‌ಗಳ ಸ್ಥಿತಿಗತಿ ನಿಜವಾಗಿಯೂ ಚೆನ್ನಾಗಿದೆ ಅದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ, ಇವತ್ತು ಅವರುಗಳನ್ನು ನಾವು ನೇರವಾಗಿ ಗೆಜೆಟೆಡ್ ಆಫೀಸರ್‌ಗಳನ್ನಾಗಿಯೇ ನೇಮಕ ಮಾಡುತ್ತಿದ್ದೇವೆ. ಅವರಿಗೆ ಒಂದು ಸಾವಿರ ರೂಪಾಯಿಗಳವರೆಗೆ ಸಂಬಳ ಬರುತ್ತಿದೆ. ಅದೂ ಕೂಡ ಇನೂ ಅವರಿಗೆ ಹೆಚ್ಚಿಗೆ ಕೊಡಬೇಕು ಎನ್ನುವುದನ್ನು ನಾನೂ ಒಪ್ಪುತ್ತೇನೆ. ಆದರೆ ಕೊಡಲಿಕ್ಕೆ ನಮಗೆ ಶಕ್ತಿ ಬೇಕಲ್ಲ. ಇವತ್ತು ನಮ್ಮಲ್ಲಿರತಕ್ಕ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಂಡು ಕೊಡಬೇಕಾಗುತ್ತದೆ. ಆದರೆ ಇವತ್ತು ಹಳ್ಳಿಯಲ್ಲಿ ಹುಟ್ಟಿದವರು ಕೇವಲ ಐದೂವರೆ ವರ್ಷಗಳ ಕಾಲ ಪಟ್ಟಣಕ್ಕೆ ಬಂದು ಅವರು ಎಂ.ಬಿ.ಬಿ.ಎಸ್. ಪಾಸ್ ಆದಕ್ಷಣ ಪುನಃ ಅವನು ಹಳ್ಳಿಗೆ ಹೋಗುವುದಿಲ್ಲ ನಾನು ಪಟ್ಟಣದಲ್ಲಿಯೇ ಇರುತ್ತೇನೆ, ಪಟ್ಟಣದಲ್ಲಿರುವ ಎಲ್ಲಾ ಸೌಕರ್ಯವನ್ನೂ ಒದಗಿಸಿ ಕೊಡಬೇಕು ಎಂದರೆ ಹೇಗೆ? ಒದಗಿಸಿ ಕೊಡುವುದಕ್ಕೆ ಹೇಗೆ ಸಾಧ್ಯ? ಅವನು ಮೊದಲು ಹಳ್ಳಿಗೆ ಹೋಗಲಿ ಹೋಗಿ ಅಲ್ಲಿಯ ವಾತಾವರಣವನ್ನು ಮತ್ತು ಸುಸಂಸ್ಕೃತ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಲಿ. ಹಳ್ಳಿಯಲ್ಲಿ ಬೇಕಾದರೆ ಅವನು ಪಟ್ಟಣದಲ್ಲಿರುವ ಹಾಗೆ ಕಕ್ಕಸ್ಸು ಕಟ್ಟಿಕೊಂಡು ಹಳ್ಳಿಯವರಿಗೂ ಅದೇ ರೀತಿ ಕಟ್ಟಿಕೊಳ್ಳಲು ತಿಳಿಸಿ ಅವರೂ ಸುಧಾರಿಸುವಂತೆ ಮಾಡಿ ಪಟ್ಟಣದಲ್ಲಿರುವ ಹಾಗೆ ಎಲ್ಲಾ ಸೌಕರ್ಯವನ್ನು ಅವನು ಅಲ್ಲಿ ಮಾಡಿಕೊಳ್ಳಲು ಆಗ ಸಾಧ್ಯವಾಗುತ್ತದೆ. ಆದುದರಿಂದ ಹಳ್ಳಿಗಳಿಗೆ ನಾವು ಹೋಗುವುದಿಲ್ಲ ವೆಂದು ಹೇಳಿದರೆ ಅದು ಸಾಧ್ಯವೇ ಇಲ್ಲ. ಸರ್ಕಾರಿ ನೌಕರರಾಗಿ ಡಾಕ್ಟರ್ ಆಗಿ ನೇಮಕ ಹೊಂದ ತಕ್ಕ ಎಲ್ಲಾ ಡಾಕ್ಟರ್‌ಗಳೂ ಕೂಡ ಇನ್ನು ಮುಂದೆ ಕಡ್ಡಾಯವಾಗಿ ಹಳ್ಳಿಗಳಿಗೆ ಹೋಗಿ ಕೆಲಸ ಮಾಡಲೇ ಬೇಕು. ಇಲ್ಲದಿದ್ದರೆ ಅವನ ಮೇಲೆ ಉಗ್ರವಾದ ಕ್ರಮ ತೆಗೆದುಕೊಂಡು, ಅವರ ಸ್ಥಾನವೇನಿದೆ ಅದನ್ನು ಪರ್ಮನೆಂಟ್ ಮಾಡದೇ, ಅವರೇನಾದರೂ ಪಿ.ಜಿ.ಗೆ ಅಪ್ಲೈ ಮಾಡಿದರೆ ಅವರಿಗೆ ರೂರಲ್ ಸರ್ವಿಸ್ ಆಗಿದೆಯೋ ಎನ್ನುವುದನ್ನು ಸಹ ನೋಡುವಂತ ಕಡ್ಡಾಯ ಮಾಡಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಆ ರೀತಿ ಒಂದು ರೂಲೇ ಮಾಡಿ ಬಿಡಿ.

ಶ್ರೀ ಎಂ. ಮಲ್ಲಪ್ಪ. ಸುಮಾರು ಇಲ್ಲಿಯವರೆಗೆ ೬೦೦-೭೦೦ ಡಾಕ್ಟರ್‌ಗಳನ್ನು ಈಗಾಗಲೇ ಟ್ರಾನ್ಸ್‌ಫರ್ ಮಾಡಿದ್ದೇನೆ. ಡಾಕ್ಟರ್‌ಗಳಲ್ಲಿ ಒಳ್ಳೆಯವರೂ ಇದ್ದಾರೆ ಕೆಟ್ಟವರೂ ಇದ್ದಾರೆ. ಒಳ್ಳೆಯವರು ಇಲ್ಲವೆಂದು ನಾನು ಹೇಳುವುದಿಲ್ಲ. ಸೇವಾ ಮನೋಭಾವ ಇರತಕ್ಕಂಥವರನ್ನು ನಾವು ಎಲ್ಲಿಗೇ ಹಾಕಲಿ ಹೋಗತ್ತಾರೆ. ಅವರಿಗೆ ಕೆಲಸದ ಮೇಲೆ ಗೌರವವಿದೆ. ಇನ್ನು ಕೆಲವು ಜನರಿದ್ದಾರೆ ಅವರಲ್ಲಿ ೧೦೦ ಜನ ಮಾತ್ರ ವಿಧಾನ ಸೌಧದ ಸುತ್ತಮುತ್ತ ಮತ್ತು ಲೆಜಿಸ್ಲೇಚರ್ ಹೋಂ ಸುತ್ತಮುತ್ತ ಸುತ್ತುವರಿಯುತ್ತಲಿದ್ದಾರೆ, ಅದಕ್ಕೋಸ್ಕರವಾಗಿ ನಾವು ಈಗಾಗಲೇ ಡೈರೆಕ್ಟರ್‌ರವರಿಗೆ ಸೂಚನೆ ನೀಡಿದ್ದೇವೆ. ನಾವು ಎಲ್ಲಿಗೆ ಹಾಕುತ್ತೇವೆ ಅವರು ಅಲ್ಲಿಗೆ ಹೋಗಲೇಬೇಕು ಅಂಥವರಿಗೆ ಯೋಗ್ಯ ಸೌಕರ್ಯ, ಸೌಲಭ್ಯ ಮತ್ತು ಸೌಲತ್ತು ಕೊಡಿ ಎಂದು ಹೇಳಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರೆಲ್ಲರ ಸಹಕಾರವೂ ಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆ ಮೇಲೆ ಮಾನ್ಯ ಸದಸ್ಯರು ಮಾತನಾಡುತ್ತಾ ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಸಿಕ್ಕಾಬಟ್ಟೆ ದುಡ್ಡಿಗೆ ಹರಾಜು ಹಾಕುತ್ತಿದ್ದಾರೆ ಅವುಗಳನ್ನು ಸರ್ಕಾರದವರೇ ಏತಕ್ಕೆ ತೆಗೆದುಕೊಳ್ಳಬಾರದೆಂದು ಸಲಹೆ ಮಾಡಿದರು. ವಾಸ್ತವಿಕ ದೃಷ್ಟಿಯಿಂದ ತಮಗೆ ಹೇಳುವುದಾದರೆ; ಅವರು ನಮಗೆ ೪೫ ಪರ್ಸೆಂಟ್ ಸೀಟುಗಳನ್ನು ಮೆರಿಟ್ ಮೇಲೆ ಬರತಕ್ಕಂಥವರಿಗೆ ಕೊಡಲು ಬಿಟ್ಟು ಕೊಟ್ಟಿದ್ದಾರೆ. ಒಟ್ಟು ಆ ರೀತಿ ೨೪೮ ಸೀಟುಗಳನ್ನು ಬಿಟ್ಟು ಕೊಟ್ಟಿದ್ದಾರೆ. ಅವೆಲ್ಲಾ ಯಾರೇ ಆಗಲೀ ಅವನು ಹಳ್ಳಿಯಿಂದ ಬಂದಿರಲಿ ಪಟ್ಟಣದಿಂದ ಬಂದಿರಲಿ ಮೆರಿಟ್ ಬಂದಿರತಕ್ಕಂಥವರಿಗೆ ಹೋಗುತ್ತದೆ. ಇನ್ನೊಂದು ಅನುಕೂಲವನ್ನು ಮಾಡುವುದಕ್ಕೋಸ್ಕರವಾಗಿ ನಾವು ಒಂದು ಪೂಲನ್ನು ಮಾಡಿದ್ದೇವೆ. ಏತಕ್ಕೆಂದರೆ ಎಲ್ಲಾ ಕಾಲೇಜುಗಳನ್ನು ಒಟ್ಟಿಗೆ ಸೇರಿಸಿದರೆ ಯಾವ ಒಂದು ಜಿಲ್ಲೆಯಿಂದ ಸಮರ್ಥನೀಯ ಹುಡುಗರು ಬಂದಿದ್ದಾರೋ ಅವರೆಲ್ಲಾ ಆ ಜಿಲ್ಲೆಗೆ ಹೋಗುತ್ತಾರೆ ಅವರಿಗೆ ಅಲ್ಲಿ ಸೀಟು ಸಿಗುತ್ತದೆ. ಹಾಗೆ ಮಾಡಿರುವುದರಿಂದ ಬೆಳಗಾಂನಲ್ಲಿರುವವರಿಗೇ ಅಲ್ಲಿ ಸಿಗುತ್ತದೆ, ದಾವಣಗೆರೆ ಸುತ್ತಮುತ್ತ ಲಿರುವವರಿಗೆ ದಾವಣಗೆರೆಯಲ್ಲಿಯೇ ಸಿಗುತ್ತದೆ. ಈ ರೀತಿಯಾಗಿ ಅವರು ನಮ್ಮೊಡನೆ ಸಹಕರಿಸಿ ಮಾಡುತ್ತಿರುವಾಗ ಈಗಾಗಲೇ ಅರ್ಧ ಭಾಗ ನ್ಯಾಶನಲೈಜ್' ಆದ ಹಾಗೆ ಆಗಿದೆ. ಇನ್ನು ಅರ್ಧ ಭಾಗವನ್ನು ಹಂತ ಹಂತವಾಗಿ ಮಾಡುತ್ತೇವೆ. ಇಲ್ಲ ಒಂದಲ್ಲ ಒಂದು ದಿನ ಆ ಕಾಲೇಜುಗಳವರೇ ಬಿಟ್ಟು

ಕೊಟ್ಟರೂ ಕೊಡಬಹುದು ಅಥವಾ ಸರ್ಕಾರದವರೇ ತೆಗೆದುಕೊಳ್ಳಬಹುದು. ಆದರೆ ಇವತ್ತು ಅವರು ನಮ್ಮ ರಾಜ್ಯಕ್ಕೆ ಮಾಡಿರತಕ್ಕ ಸೇವೆಯನ್ನು ನಾವು ಎಂದಿಗೂ ಮರೆಯಬಾರದು ಕೃತಜ್ಞರಾಗಿರಬೇಕು. ಅವರು ಕಷ್ಟಪಟ್ಟು ಸ್ಥಾಪನೆ ಮಾಡಿದ ಸಂಸ್ಥೆಗಳಲ್ಲಿ ನಮಗೂ ಕೆಲವೊಂದು ಸೀಟುಗಳನ್ನು ಬಿಟ್ಟುಕೊಟ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ಒಳ್ಳೆಯ ಕೆಲಸ ಮಾಡದೇ ಕೆಟ್ಟ ಕೆಲಸವನ್ನು ಮಾಡಿದ್ದರೆ, ಹಣ ದುರುಪಯೋಗ ಮಾಡಿಕೊಂಡಿದ್ದರೆ, ಆಗ ಸರ್ಕಾರ ಯಾವ ರೀತಿಯಲ್ಲಿ ಹತೋಟಿಯಲ್ಲಿ ತರಬೇಕೋ ಆಗ ತರುವುದಕ್ಕೆ ಅವಕಾಶವಿದೆ. ೫೦ ಸಾವಿರ ಕ್ಯಾಪಿಟೇಷನ್ ಫೀ ಎಂದು ನಿಗದಿ ಮಾಡಿದ್ದರೂ ೧ ಲಕ್ಷ ೨೫ ಸಾವಿರ ರೂಪಾಯಿಗಳವರೆಗೆ ಹರಾಜು ಮಾಡಿದ್ದಾರೆಂದು ತಾವು ಹೇಳಬಹುದು. ಇಲ್ಲದಿದ್ದರೆ ಅವರು ಕಾಲೇಜುಗಳನ್ನು ನಡೆಸುವ ಬಗೆಯಾದರೂ ಹೇಗೆ ಸ್ವಾಮಿ ? ನಾವು ಯಾವ ರೀತಿಯಲ್ಲೂ ಅವರಿಗೆ ಹಣ ಸಹಾಯವನ್ನು ಕೊಡುತ್ತಿಲ್ಲ. ಅವರಿಗೆ ಎಷ್ಟೆಷ್ಟು ಹಣ ಖರ್ಚಾಗುತ್ತದೆ ಅಷ್ಟು ಹಣವನ್ನು ಸರ್ಕಾರದವರು ಕೊಡುವ ಹಾಗಿದ್ದರೆ ಆಗ ಪರಿಸ್ಥಿತಿಯೇ ಬೇರೆಯಾಗುತ್ತಿತ್ತು. ಆದರೆ ಆ ರೀತಿ ಇಲ್ಲ ಇವತ್ತಿನ ದಿವಸ ಯಾರಿಗೆ ಕೊಡಲು ಶಕ್ತಿ ಇದೆಯೊ ಅವರು ಕೊಡುತ್ತಿದ್ದಾರೆ. ಆ ರೀತಿ ಪರದೇಶದವರು ಕೊಡಲು ಶಕ್ತಿ ಇದ್ದರೆ ಕೊಡಲಿ ಬಿಡಿ.

ಶ್ರೀ ವೈ. ರಾಮಕೃಷ್ಣ.—ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ಪ್ರೈವೇಟ್ ಮೆಡಿಕಲ್ ಕಾಲೇಜ್‌ಗಳನ್ನು ಈಗಾಗಲೇ ಸರ್ಕಾರದವರೇ ವಹಿಸಿಕೊಂಡಿದ್ದಾರೆಂದು ನಿನ್ನೆಯ ದಿವಸವೇ ನಾನು ಹೇಳಿದ ಆ ರೀತಿ ತಾವು ಏತಕ್ಕೆ ಮಾಡಬಾರದು?

ಶ್ರೀ ಎಂ. ಮಲ್ಲಪ್ಪ.—ನಮ್ಮ ರಾಜ್ಯದಲ್ಲಿ ಪ್ರೈವೇಟ್ ಮೆಡಿಕಲ್ ಕಾಲೇಜ್‌ಗಳು ೪ ಸರ್ಕಾರಿ ಮೆಡಿಕಲ್ ಕಾಲೇಜ್‌ಗಳು ೪ ಇವೆ. ಸರ್ಕಾರಿ ಕಾಲೇಜ್‌ಗಳ ಜೊತೆಗೆ ಅವುಗಳನ್ನೂ ಸರ್ಕಾರದವರೇ ವಹಿಸಿಕೊಂಡು ನಡೆಸುವುದಾದರೆ ಎಷ್ಟು ಖರ್ಚಾಗುತ್ತದೆ? ಅಷ್ಟು ಹಣ ನಮ್ಮಲ್ಲಿ ಇಲ್ಲ. ಅದಕ್ಕೋಸ್ಕರ ಕೆಲವೊಂದು ಸೀಟುಗಳಿಗೆ ಹೊರಗಡೆಯಿಂದ ಬರತಕ್ಕಂಥವರು ಯಾರು ಶಕ್ತಿವಂತರಿದ್ದಾರೆ ಅವರಿಂದ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಪಿ. ರಾಮದೇವ್.—ಶಕ್ತಿ ಇದೆ ಎಂದು ಬೇರೆಯವರಿಗೆ ನಮ್ಮ ದೇಶವನ್ನೇ ಮಾರಿ ಬಿಡುತ್ತೀರಾ ?

SRI B. B. SAYANAK.—Sri H, M Chennabasappa, the former Health Minister during the course of the budget discussion, while referring to the private managements of Medical Colleges, had assured on the floor of this House that he was going to nationalise all the private medical colleges. Now the present Health Minister is not going to take the responsibility of nationalising the medical colleges—Belgaum and the Udupi Medical Colleges.

SRI M. MALLAPPA.—I do not deny that statement.

SRI B. B. SAYANAK.—In view of the statement made by his predecessor, why he is shirking the responsibility of taking-over the private Medical Colleges, is not understandable.

ಶ್ರೀ ಎಂ. ಮಲ್ಲಪ್ಪ.—ಬೆಳಗಾಂ ಮೆಡಿಕಲ್ ಕಾಲೇಜಿನ ಬಗ್ಗೆ ಮಾನ್ಯ ಸಯನಕ್‌ರವರು ಬಹಳವಾಗಿ ಹೇಳಿದ್ದಾರೆ. ಬೆಳಗಾಂ ಕಾರ್ಪೊರೇಷನ್ ಏರಿಯಾದಲ್ಲಿರತಕ್ಕಂಥವರಿಗೆ ೧೦ ಸೀಟುಗಳನ್ನು ಅಲ್ಲಿ ರಿಸರ್ವ್ ಮಾಡಬೇಕು ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳುವುದು ಏನೆಂದರೆ...

SRI B. B. SAYANAK.—I don't know Kannada. You can reply in English.

SRI C. M. ARUMUGAM.—He is making a policy statement about private Medical Colleges, Let us know from the Government whether they are going to nationalise these Colleges or whether they are per-

mitting to continue them as it is? When the Minister is making a statement, let him say that at least for five years they are not going to nationalise the private Medical Colleges. I want to know what exactly is the stand of Government about these private Medical Colleges?

SRI M. MALLAPPA.—It is a step towards nationalisation. Effective con rol has been inflicted upon them. I can't give the time-limit, because it depends upon the availability of funds.

ಆಮೇಲೆ ರಿಟೈರ್‌ಮೆಂಟ್ ಏಜ್ ಆಫ್ ಡಾಕ್ಟರ್ಸ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಈಗ ೫೫ ವರ್ಷ ಏನಿದೆ ಅದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ ಈಗಿನ ಪರಿಸ್ಥಿತಿಯಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಾ ಇರಬೇಕಾದರೆ ಹೊಸ ಜನಗಳಿಗೆ ಹೆಚ್ಚಿನ ಅವಕಾಶಗಳನ್ನು ನಾವು ಕಲ್ಪಿಸಿಕೊಡಬೇಕಾಗಿದೆ. ಈ ಒಂದು ದೃಷ್ಟಿಯಿಂದ ರಿಟೈರ್‌ಮೆಂಟ್ ಏಜ್ ಆಫ್ ಡಾಕ್ಟರ್ಸ್, ಇದನ್ನು ಹೆಚ್ಚು ಮಾಡಬಾರದೆಂದು ಹೇಳುತ್ತೇನೆ. ಅವರು ಇಲ್ಲಿ ೫೫ ವರ್ಷದವರೆಗೆ ಕೆಲಸಮಾಡಿ ರಿಟೈರ್ ಆದಮೇಲೆ ಪ್ರವೇಟ್ ಆಗಿ ಕೆಲಸ ಮಾಡುವುದಕ್ಕೆ ಅವರಿಗೆ ತೊಂದರೆಯಾಗುವುದಿಲ್ಲ. ಆದ್ದರಿಂದ ಡಾಕ್ಟರ್‌ಗಳಿಗೆ ರಿಟೈರ್ ಆದಮೇಲೆ ಖಾಸಗಿ ಷಾಪ್ ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಅವಕಾಶವಿರುವುದರಿಂದ ಅವರ ರಿಟೈರ್‌ಮೆಂಟ್ ಏಜನ್ನು ೫೫ರ ಮೇಲೆ ಹೆಚ್ಚಿಸುವುದು ಸೂಕ್ತವಲ್ಲವೆಂದು ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ಈ ಬೇಡಿಕೆಯ ಮೇಲೆ ಮಾತನಾಡಿದ ಎಲ್ಲಾ ಮಾನ್ಯ ಸದಸ್ಯರುಗಳು ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚಿನ ವೈದ್ಯಕೀಯ ಸೌಕರ್ಯವನ್ನು ಹೆಚ್ಚಿಸಬೇಕೆಂಬುದರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚಿನ ವೈದ್ಯಕೀಯ ಸೌಕರ್ಯವನ್ನು ಒದಗಿಸಬೇಕೆನ್ನುವ ದೃಷ್ಟಿಯಿಂದ ಅಲ್ಲಿ ಹೆಚ್ಚು ಹೆಚ್ಚು ವೈದ್ಯಕೀಯ ಉಪಕೇಂದ್ರಗಳನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಈ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಒದಗಿಸಿರುವ ಅಂಕಿ ಅಂಶಗಳನ್ನು ಅವರು ನೋಡುವುದಾದರೆ ನಿಜವಾಗಿಯೂ ಕೂಡ ಹಿಂದೆ ಇಂತಹ ಸಂಸ್ಥೆಗಳು ಎಷ್ಟು ಇತ್ತು, ಈಗ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಈಗ ಅಂತಹ ಸಂಸ್ಥೆಗಳು ಹೆಚ್ಚು ಹೆಚ್ಚಾಗಿ ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆಯಾಗಿವೆ. ಇನ್ನು ಮಾನ್ಯ ರಾಮಕೃಷ್ಣರವರು ಮಾತನಾಡುತ್ತಾ ಬೆಂಗಳೂರು ನಗರದಲ್ಲಿರತಕ್ಕಂಥ ವಿಕ್ಟೋರಿಯಾ ಆಸ್ಪತ್ರೆ, ಬೋರಿಂಗ್ ಆಸ್ಪತ್ರೆ ಮತ್ತು ಇನ್ನಿತರ ಮೆಡಿಕಲ್ ಇನ್ಸ್‌ಟಿಟ್ಯೂಟ್‌ಗಳು ಇನ್ನೂ ಹೆಚ್ಚು ಹೆಚ್ಚು ವಿಸ್ತಾರವಾಗಬೇಕು, ಈ ವಿಚಾರವನ್ನು ಸರ್ಕಾರದವರು ಗಣನೆಗೆ ತೆಗೆದುಕೊಂಡು ಕೆಲಸಮಾಡಬೇಕು ಎಂದು ಹೇಳಿದ್ದಾರೆ. ಈಗಾಗಲೇ ನಾವು ಆ ಆಸ್ಪತ್ರೆಗಳನ್ನು ವಿಸ್ತಾರ ಮಾಡುತ್ತಿದ್ದೇವೆ. ಅವರು ಮುಂದುವರಿದು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ವೈದ್ಯಕೀಯ ಸೌಕರ್ಯವನ್ನು ಒದಗಿಸುವುದು ಸರ್ಕಾರದ ಕರ್ತವ್ಯ; ಜಾಗ್ರತೆಯಾಗಿ ಇವತ್ತು ಅವರಿಗೆ ಸೌಕರ್ಯವನ್ನು ಕೊಡಬೇಕು; ಈ ದಿಶೆಯಲ್ಲಿ ಸರ್ಕಾರ ಕೆಲಸಮಾಡಬೇಕು ಎಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಇಲ್ಲಿ ಸ್ವಲ್ಪಮಟ್ಟಿಗೆ ಕೆಲಸ ಸ್ಥಗಿತವಾಗಿದೆ. ಇದನ್ನು ಮಾನ್ಯಸದಸ್ಯರು ಸ್ವಲ್ಪ ತಾಳ್ಮೆಯಿಂದ ನೋಡಬೇಕಾಗಿದೆ ಎಂದು ಹೇಳುತ್ತೇನೆ.

ಇನ್ನು ತಾಲ್ಲೂಕು ಕೇಂದ್ರಗಳಲ್ಲಿರತಕ್ಕಂಥ ಪಿ.ಎಚ್.ಸಿ. ಆಸ್ಪತ್ರೆಗಳಲ್ಲಿ ೪ರಲ್ಲಿ ಒಂದು ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯಾಗಿ ಪರಿವರ್ತಿಸಬೇಕೆಂದು ಹೇಳಿ ಈ ದಿಶೆಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುತ್ತಿದೆ. ಬಹಳ ಹಿಂದೆಯೇ ಸರ್ಕಾರ ತಾಲ್ಲೂಕಿನಲ್ಲಿರತಕ್ಕಂಥ ಎಲ್ಲಾ ಆಸ್ಪತ್ರೆಗಳನ್ನು ಕೂಡ ಜನರಲ್ ಆಸ್ಪತ್ರೆಗಳನ್ನಾಗಿ ಮಾಡಬೇಕೆಂಬ ನೀತಿಯನ್ನು ಒಪ್ಪಿದೆ. ಇದನ್ನು ಕಾರ್ಯಗತ ಮಾಡಬೇಕಾದರೆ ಸಾರ್ವಜನಿಕರು ಸರ್ಕಾರದ ಜೊತೆಯಲ್ಲಿ ಸಹಕರಿಸಬೇಕಾಗಿದೆ. ಇವತ್ತು ನಾವು ಹಣದ ಅಗತ್ಯತೆಯನ್ನು ನೋಡಿಕೊಂಡು ಅದನ್ನು ಕಾರ್ಯಗತ ಮಾಡಬೇಕಾಗಿದೆ. ಹಾಗೆ ಹಣದ ಅಗತ್ಯತೆಯನ್ನು ಅನುಸರಿಸಿ ಇವತ್ತು ಸರ್ಕಾರ ತಾಲ್ಲೂಕು ಆಸ್ಪತ್ರೆಗಳಲ್ಲಿ ೪ರಲ್ಲಿ ಒಂದು ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯನ್ನಾಗಿ ಮಾಡುವ ಉದ್ದೇಶ ಇಟ್ಟುಕೊಂಡು ಅದನ್ನು ಕಾರ್ಯಗತ ಮಾಡುತ್ತಿದೆ. ಈ ತಾಲ್ಲೂಕು ಆಸ್ಪತ್ರೆಗಳಿಗೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂಬುದಾಗಿ ಮಾನ್ಯ ತಿಮ್ಮಯ್ಯನವರು ಹೇಳಿದರು; ಮತ್ತು ಅಲ್ಲಿಗೆ ಎಕ್ಸ್‌ರೇ, ಡೆಂಟಿಸ್ಟ್ ಮತ್ತು

ಇತರೆ ಸ್ಟಾಫ್‌ಗಳನ್ನು ಕೊಡಬೇಕೆಂದು ಸಹ ಅವರು ಹೇಳಿದ್ದಾರೆ. ಈಗಾಗಲೇ ನಾವು ಆದಷ್ಟು ಮಟ್ಟಿಗೆ ಎಲ್ಲಾ ಕಡೆ ಇದನ್ನು ಕೊಡುತ್ತಿದ್ದೇವೆ. ಈ ವರ್ಷದಲ್ಲಿ ೩೦ ಎಕ್ಸ್‌ರೇ ಉಪಕರಣಗಳನ್ನು ಕೊಂಡು ಎಲ್ಲೆಲ್ಲಿ ಅದರ ಅಗತ್ಯವಿದೆ ಅಲ್ಲಿ ಆ ಎಕ್ಸ್‌ರೇ ಉಪಕರಣಗಳನ್ನು ಒದಗಿಸಬೇಕೆಂದು ಸರ್ಕಾರದ ಉದ್ದೇಶ ಇದೆ. ಈ ದಿಶೆಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಆದಷ್ಟು ಬೇಗ ಈ ಎಲ್ಲಾ ಸೌಲಭ್ಯಗಳನ್ನು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಅನೇಕ ಮಾನ್ಯ ಸದಸ್ಯರುಗಳು ಈ ಔಷಧಗಳ ಸರಬರಾಜಿನ ಬಗ್ಗೆ ಹೇಳುತ್ತಾ ಔಷಧಗಳ ಸರಬರಾಜು ಸಮರ್ಪಕವಾಗಿ ಆಗುತ್ತಾ ಇಲ್ಲ; ಅದು ಹೆಚ್ಚು ರೀತಿಯಲ್ಲಿ ಸರಬರಾಜು ಆಗಬೇಕು ಎಂದು ಹೇಳಿದ್ದಾರೆ. ಇವತ್ತು ಎಲ್ಲಾ ಆಸ್ಪತ್ರೆಗಳಿಗೂ ಕೂಡ ಆದಷ್ಟು ಮಟ್ಟಿಗೆ ಔಷಧಗಳನ್ನು ಸಕಾಲದಲ್ಲಿ ಒದಗಿಸಲಾಗುತ್ತಿದೆ. ಆ ರೀತಿ ಏನಾದರೂ ಕೂಡ ಸರಿಯಾಗಿ ಔಷಧಗಳನ್ನು ಸಕಾಲಕ್ಕೆ ಒದಗಿಸುತ್ತಿಲ್ಲ ಎಂದು ದೂರು ಇದ್ದಾರೆ ಅದನ್ನು ನನಗೆ ತಿಳಿಸಿದರೆ ೨೪ ಗಂಟೆಯೊಳಗೆ ಅದನ್ನು ಸರಿಪಡಿಸುವುದಕ್ಕೆ ನಾನು ಪ್ರಯತ್ನಪಡುತ್ತೇನೆ. ಈಗ ೪-೫ ವರ್ಷಗಳಲ್ಲಿ ನಾವು ಔಷಧಗಳಿಗಾಗಿ ಒದಗಿಸಿರತಕ್ಕಂಥ ಹಣದ ಒಂದು ಅಂಕಿಸಂಖ್ಯೆಗಳನ್ನು ತಾವು ನೋಡಿದರೆ ತಮಗೇ ಗೊತ್ತಾಗುತ್ತದೆ ಯಾವರೀತಿಯಲ್ಲಿ ಹೆಚ್ಚು ಸಮರ್ಪಕವಾಗಿ ಇದು ಒದಗುತ್ತಾ ಇದೆ ಎಂದು. ೧೯೭೩-೭೪ರಲ್ಲಿ ೨೫೮ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ೧೯೭೮-೭೯ರಲ್ಲಿ ೫೬೮ ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಒದಗಿಸಲಾಗಿದೆ. ಅಂದರೆ ಇದರಲ್ಲಿ ನೂರಕ್ಕೆ ನೂರು ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ಆದರೂ ಇನ್ನೂ ಹೆಚ್ಚು ಬೇಕು ಎಂದು ಕೇಳುತ್ತಿದ್ದಾರೆ. ನಿಜ, ಹೆಚ್ಚು ಔಷಧಗಳನ್ನು ಒದಗಿಸುವುದಕ್ಕೆ ಹೆಚ್ಚು ಹಣ ಬೇಕು. ಈಗ ಅದಕ್ಕಾಗಿ ಒದಗಿಸಿರುವ ಹಣವನ್ನು ನಾವು ಸಮರ್ಪಕವಾಗಿ ಉಪಯೋಗಿಸಬೇಕಾಗಿದೆ. ಆಮೇಲೆ ಸರ್ಕಾರ ಔಷಧಗಳನ್ನು ಕೊಳ್ಳುವ ನೀತಿಯನ್ನು ಬದಲಾಯಿಸಿದೆ. ಈಗ ಡೈರೆಕ್ಟಾಗಿ ಮಾರ್ಕೆಟ್‌ನಲ್ಲಿ ಏನು ಬೆಲೆ ಇದೆಯೋ ಅದರ ಎರಡರಷ್ಟು ಬೆಲೆಗೆ ಔಷಧಗಳು ಸಿಕ್ಕುತ್ತಾ ಇಲ್ಲ. ಆದರೂ ಅದಕ್ಕೋಸ್ಕರ ಈಗ ಏನೊಂದು ಪ್ರಮಾಣದಲ್ಲಿ ಹಣವನ್ನು ಒದಗಿಸಿದ್ದೇವೆ ಆ ಹಣವನ್ನೆಲ್ಲಾ ಉಪಯೋಗಿಸಿದರೆ ಹೆಚ್ಚಿನ ಮಟ್ಟದಲ್ಲಿ ಎಲ್ಲಾ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಆಮೇಲೆ ಪ್ರತಿಯೊಂದು ಸಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರತಕ್ಕಂಥ ಒಳರೋಗಿಗಳಿಗೆ ಪ್ರತಿನಿತ್ಯ ಅವರ ಔಷಧಕ್ಕಾಗಿ ೫ ರೂಪಾಯಿಗಳ ವರೆಗೆ ಖರ್ಚು ಮಾಡುತ್ತೇವೆ. ಹೊರರೋಗಿಗಳಿಗೆ ೨½ ರೂ.ಗಳನ್ನು ಖರ್ಚು ಮಾಡುತ್ತೇವೆ; ಮತ್ತು ಅವರ ಡೈಟ್‌ಗಾಗಿ ೫ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಎಷ್ಟು ಹಣ ಅಲಾಟ್‌ಮೆಂಟ್ ಆಗಿದೆಯೋ ಅದನ್ನು ಅನುಸರಿಸಿ ಸಮರ್ಥ ರೀತಿಯಲ್ಲಿ ಅವರಿಗೆ ಅನುಕೂಲ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಫ್ಲೂಯಿಡ್ಸನ್ನು ನಮ್ಮ ರಾಜ್ಯದಲ್ಲೇ ತಯಾರು ಮಾಡಬೇಕು ಈ ಬಗ್ಗೆ ಪ್ರಯತ್ನ ಮಾಡಬೇಕು ಎಂದು ಅನೇಕರು ಹೇಳಿದ್ದಾರೆ. ಈಗಾಗಲೇ ಜಿಲ್ಲಾ ಕೇಂದ್ರಗಳಲ್ಲಿ ಈ ಒಂದು ವ್ಯವಸ್ಥೆ ಇದೆ. ಮಂಗಳೂರು ಬೆಂಗಳೂರು ಮತ್ತು ಮೈಸೂರು, ಶಿವಮೊಗ್ಗ ಎಲ್ಲಾ ಕಡೆಗಳಲ್ಲೂ ಕೂಡ ಫ್ಲೂಯಿಡನ್ನು ತಯಾರು ಮಾಡಿ, ಈ ಬಗ್ಗೆ ಆಗುತ್ತಿದ್ದಂಥ ಖರ್ಚನ್ನು ಕಡಿಮೆ ಮಾಡಿ ಇದರಲ್ಲಿ ರೋಗಿಗಳಿಗೆ ಹೆಚ್ಚಿನ ಶುದ್ಧವಾದ ಔಷಧಿಯನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಜಿಲ್ಲಾ ಮಟ್ಟದ ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ಹಾಸಿಗೆ ಸಂಖ್ಯೆಯನ್ನು ೨೫೦ಕ್ಕೆ ಏರಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಬೀದರ್, ಕಾರವಾರ, ಧಾರವಾಡ ಮತ್ತು ರಾಯಚೂರು ಈ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಹಾಸಿಗೆ ಸಂಖ್ಯೆಯನ್ನು ೨೫೦ಕ್ಕೆ ಏರಿಸುವುದಕ್ಕೆ ಆಗಿಲ್ಲ. ಆದಷ್ಟು ಮಟ್ಟಿಗೆ ಎಲ್ಲಾ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಹಾಸಿಗೆ ಸಂಖ್ಯೆಯನ್ನು ೨೫೦ಕ್ಕೆ ಏರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಇನ್ನು ಬೆಂಗಳೂರಿನಲ್ಲಿರತಕ್ಕಂಥ ಮೇಜರ್ ಇನ್‌ಸ್ಟಿಟ್ಯೂಷನ್‌ಗಳಿಗೆ ಅಗತ್ಯ ಸೌಕರ್ಯಗಳನ್ನು ಒದಗಿಸಲಾಗಿದೆ. ಇಲ್ಲಿ ಒಂದು ಕಾರ್ಡಿಯಾಲಜಿ ಯೂನಿಟ್ ಮಾಡಬೇಕೆಂದು ಇದ್ದೇವೆ. ತಮಗೇ ತಿಳಿದಿರುವಂತೆ ಇದು ೭೫ ಲಕ್ಷ ರೂಪಾಯಿಗಳ ಯೂನಿಟ್ ಆಗಿದೆ. ಈಗಾಗಲೇ ೩೦-೩೫ ಲಕ್ಷ ರೂಪಾಯಿಗಳ ಮಿಷನರೀಸ್ ಬಂದಿದೆ. ಯೂನಿಟ್ ಕಟ್ಟಡವೂ ಮುಗಿದಿದೆ. ಅಲ್ಪ ಕಾಲದಲ್ಲಿಯೇ ಅದನ್ನು ಪ್ರಾರಂಭ ಮಾಡಿ ಜನಗಳಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ರೂರಲ್ ಹಾಸ್ಪಿಟಲ್‌ಗಳಲ್ಲಿ ಹೆಚ್ಚಿನ ಫೆಸಿಲಿಟೀಸ್‌ಗಳನ್ನು ಒದಗಿಸಿಕೊಡುವ ಉದ್ದೇಶದಿಂದ ಈಗಾಗಲೇ ೭೮ ಮೆಡಿಕಲ್ ಸಬ್‌ಸೆಂಟರ್ಸ್‌ನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ ಇವರಲ್ಲಿ ೩೮ ಸಬ್‌ಸೆಂಟರ್ಸ್ ಪ್ರಾರಂಭವಾಗಿ ಕೆಲಸಮಾಡುತ್ತಿವೆ.

ಸಬ್‌ಸೆಂಟರ್‌ಸ್‌ಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಣೆ ಮಾಡಿ ಗ್ರಾಮಾಂತರ ಪ್ರದೇಶದಲ್ಲಿರುವ ಎಲ್ಲಾ ಜನರಿಗೂ ಸಮರ್ಥನೀಯವಾದ ರೀತಿಯಲ್ಲಿ ಅನುಕೂಲಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಆರ್ಟಿಫಿಷಿಯಲ್ ಕಿಡ್ನಿ ಯೂನಿಟ್‌ಗೆ ಆರ್ಡರ್ ಕೊಟ್ಟಿದ್ದೇವೆ. ಅದು ಬರುವ ಹಂತದಲ್ಲಿದೆ. ಅದಕ್ಕಾಗಿ ಬಿಲ್ಡಿಂಗ್ ವ್ಯವಸ್ಥೆ ಕೂಡ ಆಗಿದೆ. ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಈಗ ಒಂದು ರೀಸರ್ಚ್ ಇನ್‌ಸ್ಟಿಟ್ಯೂಟ್‌ಗೂ ಮಂಜೂರಾತಿ ದೊರೆತಿದೆ, ಸರ್ಕಾರದ ಆಜ್ಞೆ ಹೊರಟಿದೆ.

ನಂತರ ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ಬಡವರು ಆಸ್ಪತ್ರೆಗಳಿಗೆ ಹೋಗಿ ಕಣ್ಣಿನ ಪೊರೆಯನ್ನು ತೆಗೆದುಕೊಂಡು ಹೋಗುವಾಗ ಅವರಿಗೆ ಉಚಿತವಾಗಿ ಕಣ್ಣಿನ ಕನ್ನಡಕಗಳನ್ನು ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಸೂಚನೆಯನ್ನು ಕೊಟ್ಟಮೇಲೆ ೩೫ ಸಾವಿರ ಬಡವರಿಗೆ ಉಚಿತವಾಗಿ ಕನ್ನಡಕಗಳನ್ನು ಕೊಡುವ ವ್ಯವಸ್ಥೆ ಇದೆ. ಅದಕ್ಕಾಗಿ ಹಣ ಕೂಡ ಮಂಜೂರಾಗಿದೆ. ಅತಿ ಶೀಘ್ರದಲ್ಲಿ ಜಾರಿಯಾಗುತ್ತದೆ.

ಕ್ಯಾಜುಯಾಲಿಟಿ ಮತ್ತು ಆಕ್ಸಿಡೆಂಟ್ ರಿಲೀಫ್‌ಗೆ ವ್ಯವಸೆ ಚೆನ್ನಾಗಿ ಆಗಬೇಕು. ಅದಕ್ಕೆ ಕಾಲೇಜು ಕೂಡ ಇದೆ. ಅದಕ್ಕಾಗಿ ೨೫ ಲಕ್ಷ ರೂಪಾಯಿಗಳ ಕಟ್ಟಡ ಕೂಡ ಕಟ್ಟುತ್ತಿದ್ದೇವೆ. ಅದನ್ನು ನ್ಯೂರೋ ಆರ್ಗ್ಯಾನಿಕ್ ಇನ್‌ಸ್ಟಿಟ್ಯೂಟಿನ ಪಕ್ಕದಲ್ಲಿ ಕಟ್ಟಬೇಕು, ವ್ಯವಸ್ಥಿತವಾಗಿ ಇದರ ಸೌಕರ್ಯ ಎಲ್ಲರಿಗೂ ಸಿಗಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ. ಅದಕ್ಕೆ ಈಗಾಗಲೇ ಮಂಜೂರಾತಿ ಕೂಡ ದೊರಕಿದೆ,

ಲೆಪ್ರಸಿ ವಿಚಾರದಲ್ಲಿ ಇವತ್ತು ನಮ್ಮ ದೇಶದಲ್ಲಿ ಈ ರೋಗ ಹೆಚ್ಚಾಗಿದೆ ಅದು ಇನ್ನೂ ವೃದ್ಧಿಯಾಗದಂತೆ ಅದನ್ನು ತಡೆಗಟ್ಟಬೇಕು, ಅದನ್ನು ಯಾವರೀತಿ ತಡೆಗಟ್ಟಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಸರ್ವೆ, ಎಜುಕೇಷನ್, ಟ್ರೀಟ್‌ಮೆಂಟ್ ಇವುಗಳಿಗಾಗಿ ನಮ್ಮ ರಾಜ್ಯದಲ್ಲಿ ೬೧೫ ಜನರಿದ್ದಾರೆ. ೨೮ ಸ್ಥಳಗಳಲ್ಲಿ ಇದರ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನೂ ಕೂಡ ಹೆಚ್ಚು ಹೆಚ್ಚಾಗಿ ಇದರ ಸೌಕರ್ಯವನ್ನು ಒದಗಿಸಿಕೊಟ್ಟು ಅಲ್ಲಿಯ ಜನರಿಗೆ ಎಲ್ಲ ತರಹದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ. ಈಗಾಗಲೇ ಇದರ ಬಗ್ಗೆ ಬೆಳಗಾಂನಲ್ಲಿರುವ ಲ್ಯಾಪ್ರಸಿ ಯೂನಿಟ್ ಇವುಗಳು ಕೆಲಸ ಮಾಡುತ್ತಿವೆ. ೨ ಸಾವಿರದ ಇಸವಿಯೊಳಗಾಗಿ ಇದನ್ನು ಕಂಟ್ರೋಲ್ ಮಾಡಬೇಕೆಂಬುದು ನಮ್ಮ ಸರ್ಕಾರದ ಇಚ್ಛೆಯಲ್ಲ. ಅದನ್ನು ಭಾರತ ಸರ್ಕಾರದವರೇ ಹಾಕಿರುವಂತಹ ಒಂದು ದಿನಾಂಕ. ನಾವು ಅದಕ್ಕಿಂತ ಮುಂಚೆಯೇ ಇದನ್ನು ಕಾರ್ಯಗತ ಮಾಡುತ್ತೇವೆಂಬ ನಂಬಿಕೆ, ವಿಶ್ವಾಸ ನನಗಿದೆ. ನಂತರ ಮಲೇರಿಯಾ ಹಾವಳಿ ಹೆಚ್ಚಾಗಿದೆ ಎಂಬುದಾಗಿ ಮಾನ್ಯ ಸದಸ್ಯರು ತಿಳಿಸಿದರು. ಅದು ನಿಜ. ಇಲ್ಲವೆಂದು ಹೇಳುತ್ತಿಲ್ಲ. ಇದು ನಮ್ಮ ರಾಜ್ಯಕ್ಕೇ ಸೀಮಿತವಾಗಿಲ್ಲ. ರಾಷ್ಟ್ರಕ್ಕೆ ಸೀಮಿತವಾಗಿಲ್ಲ, ಇಡೀ ಭಾರತಕ್ಕೆ ಸೀಮಿತವಾಗಿಲ್ಲ. ಇದು ಇಡೀ ಪ್ರಪಂಚದಲ್ಲೇ ಈ ವ್ಯಾಧಿ ಹೆಚ್ಚಾಗಿದೆ. ಇದನ್ನು ತಡೆಗಟ್ಟುವುದಕ್ಕಾಗಿ ಪ್ರಪಂಚದ ಆರೋಗ್ಯ ಕೇಂದ್ರದವರು ಅದಕ್ಕಾಗಿ ಬೆಂಗಳೂರನ್ನು ಆರಿಸಿಕೊಂಡು ಬೆಂಗಳೂರಿನಲ್ಲಿ ಒಂದು ಮಲೇರಿಯಾ ವರ್ಕ್‌ಷಾಪನ್ನು ಮಾಡಿ ಅದರಲ್ಲಿ ಸಂಶೋಧನೆ ಮಾಡಿ, ಇದನ್ನು ಹೇಗೆ ತಡೆಗಟ್ಟಬಹುದು, ಯಾವರೀತಿ ಇದನ್ನು ಕಂಟ್ರೋಲ್ ಮಾಡಬಹುದೆಂಬುದರ ಬಗ್ಗೆ ಅವರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈಗಾಗಲೇ ಇದರ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಅವರು ಇದಕ್ಕೆ ಉತ್ತಮ ಪರಿಹಾರವನ್ನು ಕಂಡು ಹಿಡಿಯುತ್ತಾರೆಂಬ ನಂಬಿಕೆ ನನಗಿದೆ. ಇದರ ಬಗ್ಗೆ ಅಂಕಿ ಅಂಶಗಳನ್ನು ತಮಗೆ ಒದಗಿಸುವುದಾದರೆ, ೭೪ ರಿಂದ ಈಚೆಗೆ, ೧೯೭೬ರಲ್ಲಿ ೬,೨೯,೯೨೭ ಜನರಿಗೆ ಇದು ಅಟಾಕ್ ಆಗಿತ್ತು. ಅದು ೧೯೭೭ರಲ್ಲಿ ೪,೬೮,೯೪೫ ಜನರಿಗೆ ಇದು ಅಟಾಕ್ ಆಗಿದೆ. ಆದಮೇಲೆ ಸ್ವಲ್ಪ ಕಡಿಮೆಯಾಗಿದೆ ಎಂಬ ತೀರ್ಮಾನಕ್ಕೆ ಬರಬಹುದು. ಈ ರೋಗವನ್ನು ತಡೆಗಟ್ಟುವುದಕ್ಕಾಗಿ ಭಾರತ ಸರ್ಕಾರದವರು ೩,೧೬,೦೦,೦೦೦-೦೦ ರೂಪಾಯಿಗಳನ್ನು ಒದಗಿಸಿಕೊಟ್ಟಿದೆ. ಇದಕ್ಕೆ ನಮ್ಮ ರಾಜ್ಯ ಸರ್ಕಾರದವರೂ ಕೂಡ ೧,೮೦,೦೦,೦೦೦-೦೦ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದರೂ ಇವೆಲ್ಲಾ ಸಾಕಾಗುವುದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಇದರ ಬಗ್ಗೆ ನಮ್ಮ ಗಮನವನ್ನು ಹರಿಸುತ್ತೇವೆ.

ಪ್ಯಾರಾ ಮೆಡಿಕಲ್ ಸ್ಟಾಫ್‌ನ ಉದ್ದೇಶವನ್ನು ಪೂರ್ತಿ ಮಾಡದಿದ್ದರೆ ಅವರು ಯಾವ ರೀತಿಯಾಗಿಯೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ಇದನ್ನು ಮನಗಂಡು ಸಂಬಂಧಪಟ್ಟ ಇಲಾಖೆಯವರನ್ನು ಸಮಾಲೋಚಿಸಿದ್ದಾಗಿದೆ. ಅದಕ್ಕೆ ಇಲಾಖೆಯವರು ಇದಕ್ಕೆ ಆದ್ಯತೆ ಕೊಡಬೇಕೆಂದು

ಒಪ್ಪಿದ್ದಾರೆ. ಪ್ಯಾರಾ ಮೆಡಿಕಲ್ ಸ್ಟಾಫ್‌ಗೆ ಇರತಕ್ಕಂಥ ಕಟ್ಟಡದ ಕೊರತೆಯನ್ನು ಕೂಡಲೇ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಂತರ ಅವರೆಲ್ಲರ ಸೇವೆಯನ್ನು ತೆಗೆದುಕೊಂಡು ಮಲೇರಿಯಾ ಹಾವಳಿಯನ್ನು ಕಡಿಮೆ ಮಾಡಲು ಶೀಘ್ರವಾಗಿ ಕಾರ್ಯಕ್ರಮವನ್ನು ತೆಗೆದುಕೊಂಡು ಕೆಲಸ ಮಾಡುತ್ತೇವೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಮತ್ತೆ ದೇಶಿಯ ವೈದ್ಯಕೀಯ ಪದ್ಧತಿ ಅಂದರೆ ಆಯುರ್ವೇದ, ಯುನಾನಿ, ಹೋಮಿಯೋಪತಿ ಹಾಗೂ ನ್ಯಾಚುರೋಪತಿ ಇವೆಲ್ಲವೂ ಕೂಡ ನಮ್ಮ ದೇಶದಲ್ಲಿ ಅಭಿವೃದ್ಧಿ ಆಗಬೇಕೆಂಬ ಕಾರ್ಯಕ್ರಮವನ್ನು ಹೇಗೆ ಆಗಬೇಕೆಂಬುದರ ಬಗ್ಗೆ ಮೋಲುಜೋಟೆ ಎಂಬುವರ ಸಮಿತಿಯನ್ನು ನೇಮಕಮಾಡಿದೇವೆ. ಅವರಿಂದ ವರದಿಯನ್ನು ತರಿಸಿಕೊಂಡಿದೆ. ಸರ್ಕಾರ ಅದಕ್ಕೆ ಒಪ್ಪಿಕೊಂಡಿದೆ. ಆದನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರದ ಇಚ್ಛೆ ಇದೆ. ಅದರೆ ಅದಕ್ಕೆ ಹಣ ಬೇಕು. ಅದನ್ನೂ ಖರ್ಚು ಮಾಡಿ ಇವತ್ತು ಆಯುರ್ವೇದ ಕಾಲೇಜ್, ಪಿ. ಜಿ. ಕೋರ್ಸ್, ಹಾಗೂ ಹೋಮಿಯೋಪತಿ ಕಾಲೇಜು ಇವೆಲ್ಲವೂ ಕೂಡ ನಡೆಯುತ್ತಿವೆ. ಇಷ್ಟೆಲ್ಲಾ ಹಣವನ್ನು ಒದಗಿಸಿದ್ದರೂ ಅದು ಕಡಿಮೆ ಎಂಬುದಾಗಿ ಹೇಳುತ್ತಿದ್ದಾರೆ. ಪ್ರತಿ ವರ್ಷ ಹೆಚ್ಚು ಹೆಚ್ಚಾಗಿ ಹಣವನ್ನು ದೇಶಿಯ ವೈದ್ಯಕೀಯ ಪದ್ಧತಿಗಾಗಿ ಒದಗಿಸಿದ್ದೇವೆ. ೧೯೭೬–೭೭ರಲ್ಲಿ ೭೭ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ, ೧೯೭೭–೭೮ರಲ್ಲಿ ೯೫ ಲಕ್ಷ ರೂಪಾಯಿಗಳನ್ನು ಇದಕ್ಕೆ ಒದಗಿಸಿದ್ದೇವೆ. ಹಾಗೆ ೧೯೭೮–೭೯ನೇ ಸಾಲಿಗೆ ೧೧೬ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇನ್ನೂ ಹೆಚ್ಚು ಹೆಚ್ಚು ಹಣವನ್ನು ಒದಗಿಸಿ ಈ ಒಂದು ದೇಶಿಯ ವೈದ್ಯಕೀಯ ಪದ್ಧತಿಗೆ ಪ್ರೋತ್ಸಾಹವನ್ನು ಸರ್ಕಾರ ಕೊಡುತ್ತಿದೆ. ಈ ದೇಶೀಯ ವೈದ್ಯಕೀಯ ತರಪೇತಿಯನ್ನು ಯಾರು ತೆಗೆದುಕೊಳ್ಳುತ್ತಾರೋ ಅವರಿಗೆ ವಿಶ್ವಾಸ ಉಳಿಯಬೇಕು. ಏಕೆಂದರೆ ಅವರಿಗೆ ಡಾಕ್ಟರ್ ಪದವಿ ಸಿಕ್ಕುವವರೆಗೂ ಇರುತ್ತಾರೆ. ಆಮೇಲೆ ಸಿರಿಂಜ್ ಹಿಡಿದುಕೊಂಡು ಅಲೋಪತಿ ಔಷಧಿಗೆ ಹೋಗುತ್ತಾರೆ. ಅವರ ಬಗ್ಗೆ ವಿಶ್ವಾಸ ಜನತೆಯಲ್ಲೂ ಮೂಡಬೇಕು. ಇದಕ್ಕೆ ಎಲ್ಲ ರೀತಿಯ ಪ್ರೋತ್ಸಾಹವನ್ನು ಕೊಟ್ಟು ಆಲೋಪತಿ ಆಸ್ಪತ್ರೆಗಳನ್ನು ಒದಗಿಸುವುದಕ್ಕೆ ಬದಲಾಗಿ ಸಣ್ಣ ಪುಟ್ಟ ಚಿಕಿತ್ಸೆಗಾಗಿ ಈ ಒಂದು ದೇಶೀಯ ವೈದ್ಯಕೀಯ ಪದ್ಧತಿಯನ್ನು ಹಂತ ಹಂತವಾಗಿ ಜಾರಿಗೆ ತರುತ್ತೇವೆ. ಈಗ ನಮ್ಮ ತಾಲ್ಲೂಕು ಬೋರ್ಡ್ ನಡೆಸುತ್ತಿದ್ದಂತಹ ಆಸ್ಪತ್ರೆಗಳನ್ನೆಲ್ಲಾ ಸರ್ಕಾರದ ವಶಕ್ಕೆ ತೆಗೆದುಕೊಂಡ ಕಾಲದಲ್ಲಿ ಆಯುರ್ವೇದ ಡಿಸ್‌ಪೆನ್ಸರೀಸ್ ಬಹಳ ಇವೆ. ಇವುಗಳೆಲ್ಲವನ್ನೂ ಐ.ಎಂ.ಎಸ್. ವಶಕ್ಕೆ ಕೊಟ್ಟಿದ್ದೇವೆ. ಹೆಚ್ಚು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರಿಂದ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದಂತಾಗಿದೆ.

ನಂತರ ಇಂಡಿಯನ್ ಪಾಪ್ಯುಲೇಷನ್ ಪ್ರಾಜೆಕ್ಟ್ ವಿಷಯದಲ್ಲಿ ಬರೀ ಬಿಲ್ಡಿಂಗ್ ಕಟ್ಟಿಕೊಂಡು ಹೋಗಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ಪ್ರಪಂಚ ಬ್ಯಾಂಕಿನವರು ನಮಗೆ ಕೊಟ್ಟಿರುವ ಹಣವನ್ನು ಸಮರ್ಪಕವಾಗಿ ಖರ್ಚು ಮಾಡಿ ಒಳ್ಳೆಯ ಕೆಲಸ ಮಾಡಿದ್ದಾರೆ. ಬಿಲ್ಡಿಂಗ್ ಕಟ್ಟಬೇಕು, ಅದನ್ನು ಕಟ್ಟದಿದ್ದರೆ ಆಸ್ಪತ್ರೆ ಹಾಗೂ ದಾದಿಯವರು ಹೇಗೆ ಇರುತ್ತಾರೆ? ಫ್ಯಾಮಿಲಿ ಪ್ಲಾನಿಂಗ್ ಮತ್ತು ಬರ್ತ್ ಕಂಟ್ರೋಲ್ ಮಾಡುವುದಕ್ಕೆ ಹೇಗೆ ಸಾಧ್ಯ? ಆದ್ದರಿಂದ ಬರೀ ಬಿಲ್ಡಿಂಗ್ ಕಟ್ಟಿಕೊಂಡು ಹೋಗಿದ್ದಾರೆಂದು ಟೀಕೆ ಮಾಡಿರುವಂತಾದ್ದು ಸರಿಯಲ್ಲ. ಬಿಲ್ಡಿಂಗ್ ಕಟ್ಟದಿದ್ದರೆ ಪಕ್ಕದಲ್ಲಿ ಆಸ್ಪತ್ರೆ ಹೇಗಾಗುತ್ತಿತ್ತು. ನಮ್ಮ ಅಧಿಕಾರಿಗಳು ನಿಜಕ್ಕೂ ಬಹಳ ಬುದ್ಧಿವಂತಿಕೆಯಿಂದ ಹಣವನ್ನು ಖರ್ಚು ಮಾಡಿ ಶಾಶ್ವತವಾದ ಅನುಕೂಲತೆಗಳನ್ನು ಒದಗಿಸಿದ್ದಾರೆ. ಬೆಂಗಳೂರು ಡಿವಿಜನ್‌ನಲ್ಲಿ ಎಲ್ಲಾ ಆಸ್ಪತ್ರೆಗಳಿಗೂ ನೀರಿನ ವ್ಯವಸ್ಥೆ ಮಾಡಲಾಗಿದೆ. ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಸಾಮಾನ್ಯವಾಗಿ ಅವರ ವಾಸಕ್ಕೆ ಮನೆಗಳನ್ನು ಕೂಡ ಮಾಡಿಕೊಡಲಾಗಿದೆ. ಅವರಿಗೆ ಮನೆಗಳನ್ನು ಒದಗಿಸಿ ಕೊಟ್ಟಿರುವುದು ತಪ್ಪೇ? ಕೊಟ್ಟ ಹಣವನ್ನು ಸಮರ್ಪಕವಾಗಿ ಖರ್ಚು ಮಾಡಿ ಕುಟುಂಬ ಯೋಜನೆ ಮತ್ತು ಬರ್ತ್ ಕಂಟ್ರೋಲ್‌ನ ವಿಚಾರದಲ್ಲಿ ಐ.ಪಿ.ಪಿ.ಯ ಪ್ರಾಜೆಕ್ಟಿನ ಮೇಲೆ ಮಾಡಿರುವಂತಹ ಕೆಲಸ ಶ್ಲಾಘನೀಯವಾದುದೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ೧೩ ಕೋಟಿ ರೂಪಾಯಿಗಳು ೩೧–೩–೧೯೭೯ಕ್ಕೆ ಮುಗಿಯುತ್ತದೆ. ಇನ್ನು ಒಂದು ಕೋಟಿ ರೂಪಾಯಿಗಳು ಉಳಿದಿದೆ. ಅದನ್ನೂ ಖರ್ಚು ಮಾಡಿಬಿಟ್ಟು ಅಲ್ಲಿ ಪರಿಣಾಮಕಾರಿಯಾದ ಕೆಲಸ ಮಾಡಿದರೆ ನಿಜವಾಗಿಯೂ ನಮಗೆ ಒಳ್ಳೆಯದಾಗುತ್ತದೆಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಮತ್ತು ನಮ್ಮ ಮಾನ್ಯ ಆರ್ಮುಗಂರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಡೈರೆಕ್ಟರ್ ಆಫೀಸ್ ಒನ್‌ಮ್ಯಾನ್ ಶೋ ಆಗಿದೆ ಎಂಬುದಾಗಿ ಹೇಳಿದರು. ಅದರ ಬಗ್ಗೆ ನಾವು ಪೂರ್ಣವಾಗಿ ಯೋಚನೆ ಮಾಡುವುದಾದರೆ ಬಹಳ ಕಷ್ಟವಾಗುತ್ತದೆ. ಏತಕ್ಕೆಂದರೆ ಇವತ್ತು ಜನ ವಿಕೇಂದ್ರೀಕರಣವಾಗತಕ್ಕಂಥ ಕಾಲದಲ್ಲಿ ಒಬ್ಬರೆ ಏನು ಮಾಡುವುದಕ್ಕೆ ಸಾಧ್ಯ ? ಎಲ್ಲರೂ ಕೂಡ ಒಟ್ಟಾಗಿ ಕೆಲಸ ಮಾಡಬೇಕು. ಆ ರೀತಿ ಒಬ್ಬರೇ ಮಾಡುವಂತಹ ಕೆಲಸ ಅಲ್ಲ. ಅವರಿಗಾಗಿ ಈ ಬೇಡಿಕೆ ಬಂದಿದೆಯೆಂದು ಹೇಳಿದರೆ ನಾನು ಒಪ್ಪುವುದಿಲ್ಲ. ಏಕೆಂದರೆ ಆರೋಗ್ಯ ಇಲಾಖೆಯಲ್ಲಿ ಬಹಳ ಪ್ರಗತಿಯಾಗಿದೆ. ಇದಕ್ಕೆ ಅಲ್ಲಿರತಕ್ಕಂಥ ಎಲ್ಲರೂ ಹಾಗೂ ಸಾರ್ವಜನಿಕರ ಸಹಕಾರ ಮುಖ್ಯವಾಗಿ ಬೇಕಾಗುತ್ತದೆ. ತಾವು ಆ ರೀತಿ ಅಭಿಪ್ರಾಯ ಪಡುವುದು ಬೇಡ. ಇಲಾಖೆಯಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ಸರಿಪಡಿಸುವುದಕ್ಕೆ ನಾವೂ ನೀವು ಸೇರಿ ಶೀಘ್ರವಾಗಿ ಪ್ರಯತ್ನ ಮಾಡೋಣ ಎಂಬತಕ್ಕಂಥ ಮಾತನ್ನು ಹೇಳುತ್ತೇನೆ. ಹಾಗೆ ಮತ್ತೊಬ್ಬ ಸದಸ್ಯರು ಶುದ್ಧ ನೀರನ್ನು ಒದಗಿಸಬೇಕು, ಶುದ್ಧ ಗಾಳಿಯನ್ನು ಒದಗಿಸಬೇಕೆಂದು ಹೇಳಿದರು. ಪರೀಕ್ಷೆ ಮಾಡಿ ಶುದ್ಧವಾದ ನೀರನ್ನು ಒದಗಿಸುವುದಕ್ಕೆ ಸಾಧ್ಯ. ಆದರೆ ಶುದ್ಧ ಗಾಳಿಯನ್ನು ಒದಗಿಸಬೇಕೆಂದರೆ ಕಷ್ಟ. ಏಕೆಂದರೆ ಗಾಳಿಯು ಪರಿಸರ ಕೆಡದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಇದೆ. ಆ ಬಗ್ಗೆ ಕೂಡ ಬೇಕಾದಷ್ಟು ಕಾನೂನು ಬಂದಿದೆ. ಆ ರೀತಿ ನಾವೆಲ್ಲರೂ ಕೆಲಸ ಮಾಡೋಣ ಎಂಬುದಾಗಿ ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.— ದೇವರ ದಯೆಯಿಂದ ಗಾಳಿ ನಿಮ್ಮ ಕೈಯಲ್ಲಿ ಇಲ್ಲ. ಗಾಳಿಯೂ ನಿಮ್ಮ ಕೈಯಲ್ಲಿದ್ದಿದ್ದರೆ ನಮ್ಮ ಗತಿ ಏನಾಗುತ್ತಿತ್ತೊ;

ಶ್ರೀ ಎಂ. ಮಲ್ಲಪ್ಪ.—ಅದು ಭಾರತ ಸರ್ಕಾರದವರ ಕೈಯಲ್ಲೂ ಇಲ್ಲ ಮತ್ತು ಕೆಲವು ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಂತಹ ನನ್ನ ಸರ್ವ ಮಿತ್ರರಿಗೂ ಮತ್ತೊಮ್ಮೆ ಹೃತ್ಪೂರ್ವಕವಾಗಿ ವಂದನೆಗಳನ್ನು ಅರ್ಪಿಸುತ್ತಾ, ತಾವು ದಯಮಾಡಿ ಈ ಬೇಡಿಕೆಯನ್ನು ಒಪ್ಪಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

12-00 Noon

ಶ್ರೀ ಕೆ. ಎಂ. ತಮ್ಮಯ್ಯ.—ನಮ್ಮ ತಾಲ್ಲೂಕ್‌ನಲ್ಲಿರತಕ್ಕಂಥ ರೋಟರಿ ಮತ್ತು ಲಯನ್ಸ್ ಕ್ಲಬ್‌ನವರು ಒಂದು ಸಲ ಐ-ಕ್ಯಾಂಪನ್ನು ಏರ್ಪಡಿಸಿದ್ದರು. ಇದಕ್ಕೆ ಆಗುವ ಖರ್ಚಿನಲ್ಲಿ ಅರ್ಧ ಭಾಗವನ್ನು ರಾಯಲ್ ಸೊಸೈಟಿ, ಇಂಗ್ಲೆಂಡ್ ಅವರು ಕೊಡುತ್ತಾರೆ. ಆದರೆ ಬೇರೆ ಕ್ಯಾಂಪ್‌ಗಳನ್ನು ನಡೆಸಿದರೆ ಅವರು ಹಣ ಕೊಡುವುದಿಲ್ಲ. ಅದಕ್ಕೋಸ್ಕರ ಸರ್ಕಾರದವರೇ ಕೊಡಬೇಕೆಂದು ನಾನು ಕೇಳಿದ್ದು. ಮುಖ್ಯವಾಗಿ ನಮಗೆ ಹಣದ ಸಹಾಯ, ವಾಹನಗಳ ಸಹಾಯ ಮತ್ತು ಡಾಕ್ಟರ್ಸ್ ಸಹಾಯ ಬೇಕಾಗುತ್ತದೆ. ಮತ್ತೆ ರೋಟರಿ ಪ್ರಾಜೆಕ್ಟ್ ಎಂದು ಎಂಬ್ಲಮ್ ಹಾಕಿದರೆ ಪಾಶ್ಚಾತ್ಯ ಕ್ಲಬ್‌ಗಳಿಂದ ಸಹಾಯ ಸಿಗುತ್ತದೆ. ಈಗ ಮಧುಗಿರಿ ಮತ್ತು ಉಡುಪಿಗೆ ಒಂದೊಂದು ಆಂಬುಲೆನ್ಸ್ ಕೊಟ್ಟಿದ್ದಾರೆ. ಇತರೇ ಎಕ್ವಿಪ್‌ಮೆಂಟ್ಸ್ ಕೊಟ್ಟಿದ್ದಾರೆ. ಅದರಂತೆ ನಾವು ಸಹ ಎಂಬ್ಲಮ್ ಹಾಕಲು ಹೊರಟಾಗ ನಾವು ರಾಜಕೀಯ ಮಾಡಲು ಹೊರಟಿದ್ದೇವೆಂದು ಅಲ್ಲಿ ನಡೆದ ಆಸ್ಪತ್ರೆಯ ಪ್ರಾರಂಭೋತ್ಸವಕ್ಕೆ ಲಯನ್ಸ್ ಕ್ಲಬ್‌ನವರನ್ನು ಕರೆಯಲಿಲ್ಲ. ಹೀಗೆ ಮಾಡಬಾರದು. ನಮಗೆ ಎಲ್ಲ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಟ್ಟರೆ ನಾವು ಜನರಿಗೆ ಸಹಾಯ ಮಾಡುತ್ತೇವೆ. ಮುಖ್ಯವಾಗಿ ನಾವು ಕ್ಯಾಂಪ್‌ಗಳಿಗೆ ಖರ್ಚು ಮಾಡಿದ ಹಣವನ್ನು ನೀವು ವಾಪಸ್‌ಕೊಟ್ಟರೆ ಅನುಕೂಲವಾಗುತ್ತದೆ. ಈಗ ನೀವು ಮಾಡದಿರುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಜನರಿಗೆ ಸಹಾಯ ಮಾಡುತ್ತಿದ್ದೇವೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಂ. ಮಲ್ಲಪ್ಪ.— ಅಲ್ಲಿ ಜನರಲ್ ಆಸ್ಪತ್ರೆ ಪ್ರಾರಂಭವಾದಾಗ ನಾನು ಹೋಗಿದ್ದೆ. ಮುಖ್ಯಮಂತ್ರಿಗಳು ಬಂದಿದ್ದರು. ರೋಟರಿ ಕ್ಲಬ್‌ನವರು ಬಂದಿದ್ದರು. ಆದರೆ ಇವರು ಮಾತ್ರ ಏಕೆ ಬರಲಿಲ್ಲವೆಂದು ನನಗೆ ಗೊತ್ತಾಗಲಿಲ್ಲ. ವಾಲಂಟರಿ ಅಸೋಸಿಯೇಷನ್ ಅವರು ಏನಾದರು ಕೆಲಸ ಮಾಡಿದರೆ, ಅವರಿಗೆ ಏನು ಸಹಾಯ ಬೇಕೋ ಅದನ್ನು ಕೊಡುತ್ತೇವೆ. ಅದರಲ್ಲಿ ಮುಚ್ಚು ಮರೆ ಏನಿಲ್ಲ. ಆದಕಾರಣ ತಮ್ಮ ಯೋಜನೆ ಏನಿದೆ ಎಂಬುದರ ವಿವರಗಳನ್ನು ಕಳುಹಿಸಿಕೊಡಿ.

ಶ್ರೀ ವೈ. ರಾಮಕೃಷ್ಣ.—ಹಿಮಾಚಲ ಪ್ರದೇಶದಲ್ಲಿರುವ ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟಿರುವ ವೈದ್ಯಕೀಯ ಸೌಲಭ್ಯಗಳನ್ನು ನಮ್ಮ ರಾಜ್ಯದಲ್ಲಿರುವ ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟಿಲ್ಲವೆಂದು ಹೇಳುತ್ತೇನೆ. ಅಲ್ಲಿ ಯಾವ ರೀತಿ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

> " With a view to meet the challenge of providing medical facilities in rural areas, the Government has formulated the scheme of starting 1000 Health Sub-Centres in the State forthwith. It is proposed to establish 10–15 sub-centres in each block keeping in view its area and population. Public co-operation would be requested for getting the buildings completed for these sub-centres. "

ಇದನ್ನು ತಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ೩೪ ಲಕ್ಷ ಪ್ರಜಾಸಂಖ್ಯೆ ಇರತಕ್ಕಂಥ ಹಿಮಾಚಲ ಪ್ರದೇಶದಲ್ಲಿ ಒಂದು ವರ್ಷದಲ್ಲಿ ಒಂದು ಸಾವಿರ ಸಬ್-ಸೆಂಟರ್‌ಗಳನ್ನು ಕೊಟ್ಟಿರುವಾಗ ಮೂರೂವರೆ ಕೋಟಿ ಜನಸಂಖ್ಯೆ ಇರತಕ್ಕಂಥ ನಮ್ಮ ರಾಜ್ಯದಲ್ಲಿ ಒಂದು ಲಕ್ಷ ಸಬ್-ಸೆಂಟರ್‌ಗಳನ್ನು ಕೊಡಬೇಕಾಗುತ್ತದೆ. ಆದರೆ ತಮ್ಮ ಉತ್ತರದಲ್ಲಿ ಹೇಳಿದಂತೆ ನೂರನ್ನು ಸಹ ಕೊಟ್ಟಿಲ್ಲ. Not even Hundred. Is it justsfiable ?

ಶ್ರೀ ಎಂ. ಎಂ. ನದಾಫ್.—ಹುಬ್ಬಳ್ಳಿಯಲ್ಲಿಯೂ ಒಂದು ಕರ್ನಾಟಕ ಮೆಡಿಕಲ್ ಕಾಲೇಜು ಇದೆ ಎಂಬುದನ್ನು ತಾವು ಮರೆತುಬಿಟ್ಟದ್ದೀರಿ. ಅಲ್ಲಿ ಇವೊತ್ತು ೮ ಪ್ರೊಫೆಸರ್‌ಗಳ ಪೋಸ್ಟ್‌ಗಳು ಖಾಲಿ ಇವೆ. ಅವುಗಳನ್ನು ಇನ್ನೂ ಭರ್ತಿ ಮಾಡಿಲ್ಲ. They are as follows :—

2 Professors Posts of Medicines,
4 Assistant Professors of Medicines,
1 Professor of Tuberculosis, &
1 Professor of Forensic Medicine.

In Bangalore, there are 7 Professors in Medicine, 8 Assistant Professors and 2 Professors in Forensic Medicine. ಇದನ್ನು ತಾವು ಗಮನಕ್ಕೆ ತೆಗೆದುಕೊಂಡು, ಈ ಒಂದು ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಇನ್ನು ತಾವು ಐ. ಪಿ. ಪಿ. ಪ್ರಾಜೆಟನ್ನು ಅನೇಕ ಕಡೆಗಳಲ್ಲಿ ಜಾರಿಯಲ್ಲಿ ತಂದಿದ್ದೀರಿ. ಆದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಎಲ್ಲಿಯೂ ಜಾರಿಯಲ್ಲಿ ತಂದಿಲ್ಲ ಇದಕ್ಕೆ ಕಾರಣವೇನು ? ಅದರಂತೆ ನಮ್ಮ ಕೆ. ಎಂ. ಸಿ ಸಿಗುವ ಔಷಧಗಳನ್ನು ತೆಗೆದುಕೊಳ್ಳಬೇಡಿ ಎಂದು ಅಲ್ಲಿಯ ಡಾಕ್ಟರ್ ಹೇಳುತ್ತಾರೆ. ಫಾರ್ಮಸಿಗೆ ಹೋಗಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಅಂದರೆ ಆಸ್ಪತ್ರೆಯಲ್ಲಿರುವ ಔಷಧಗಳ ಗುಣಮಟ್ಟ ಕಡಿಮೆ ಇದೆ ಎಂದು ಅರ್ಥವೇ ? ಈ ಬಗ್ಗೆ ಏನು ಕ್ರಮ ಕೈಕೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು ?

ಶ್ರೀ ಎಂ. ಮಲ್ಲಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಲ್ಲವೆಂದು ಮಾನ್ಯ ರಾಮಕೃಷ್ಣ ಅವರು ಹೇಳಿದರು. ಈಗ ನಮ್ಮಲ್ಲಿ ೩೦೭೨ ಮೆಡಿಕಲ್ ಸಬ್-ಸೆಂಟರ್‌ಗಳಿವೆ. ೧೨೫೦ ಸಬ್-ಸೆಂಟರ್‌ಗಳಿಗೆ ಕಟ್ಟಡಗಳನ್ನು ಒದಗಿಸಿದ್ದೇವೆ. ೧೦೨೭ ಜಾಗಗಳಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ೨೪೯ ಮೆಡಿಕಲ್ ಸೆಂಟರ್‌ಗಳು ರೂರಲ್ ಏರಿಯಾಕ್ಕೆ ಮಂಜೂರಾಗಿವೆ. ೧೯೭೭-೭೮ ರಲ್ಲಿ ೫೭ ಪ್ರಾರಂಭವಾಗಿವೆ. ಒಂದು ಮಾತನ್ನು ತಾವು ತಿಳಿದುಕೊಳ್ಳಬೇಕು, ಏನೆಂದರೆ, ನಮ್ಮ ಕರ್ನಾಟಕದ ಜನತೆ ಅವರು ಹಳ್ಳಿಗಳಲ್ಲಿಯೇ ಇರಲಿ, ಪಟ್ಟಣದಲ್ಲಿಯೇ ಇರಲಿ, ಎಲ್ಲರೂ ಇಂದು ಪ್ರಜ್ಞಾವಂತರಾಗಿದ್ದಾರೆ. ಕಡೂರಿನಲ್ಲಿ ೫ ವರ್ಷಗಳ ಹಿಂದೆ ಎಲ್. ಎಫ್. ಡಿಸ್ಪೆನ್ಸರಿ ಇತ್ತು. ಈಗ ಅದು ಜನರಲ್ ಆಸ್ಪತ್ರೆಯಾಯಿತು. ಅಲ್ಲಿಗೆ ಕಟ್ಟಡ ಬಂತು. ಎಂ. ಬಿ. ಬಿ. ಎಸ್. ಆದಂಥ ಡಾಕ್ಟರನ್ನು ಅಲ್ಲಿಗೆ ಹಾಕಿದ್ದೇವೆ. ಆದರೂ ಸಹ ಅಲ್ಲಿನವರು ನಮಗೆ ಎಂ. ಎಸ್. ಆದವರು ಬೇಕು, ಡೆಂಟಿಸ್ಟ್ ಬೇಕು, ಒಳ್ಳೆಯ ಎಕ್ಸ್‌ಪರ್ಟ್ ಆದವರು ಬೇಕು

ಎಂದು ಕೇಳುತ್ತಿದ್ದಾರೆ. ಅಂದರೆ ಜನರಲ್ಲಿ ಒಂದು ರೀತಿಯ ಪ್ರಜ್ಞೆ ಬೆಳೆಯುತ್ತಿದೆ. ಮಾನ್ಯ ಸದಸ್ಯರು ಹಿಮಾಚಲ ಪ್ರದೇಶದ ಉದಾಹರಣೆ ಕೊಟ್ಟರು. ಆದರೆ ಅಲ್ಲಿ ಬೇರೆ ಫುಟ್ ಡಾಕ್ಟರ್ಸ್ ಇದ್ದಾರೆ. ನಮ್ಮಲ್ಲಿಯೂ ಅದೇರೀತಿ ಮಾಡಿದರೆ ಜನರು ಒಪ್ಪುವುದಿಲ್ಲ. ಬೇಡ ಎಂದು ಹೇಳುತ್ತಾರೆ. They say "we want Graduate Doctors". That is the quality of Karnataka; Don't compare Karnataka with other States in the matter of medical standards. Here, the medical standards and the people standards are very high when compared to other parts. I am very proud to say that.

I had been to Asian countries. Can you imagine a situation wherein a graduate nurse having undergone a training for 18 months doing vascetomy operation. Do you tolerate it ? They have tolerated and it has become the policy of the Government. So, we cannot adopt from them. They will have to learn from us.

ಇನ್ನು ಮಾನ್ಯ ನದಾಫ್ ಅವರು ಖಾಲಿ ಇರುವ ಪೋಸ್ಟ್‌ಗಳನ್ನು ಭರ್ತಿ ಮಾಡಬೇಕೆಂದು ಹೇಳಿದ್ದಾರೆ. ಆ ಪೋಸ್ಟ್‌ಗಳನ್ನು ಆದಷ್ಟು ಬೇಗ ಭರ್ತಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಅಲ್ಲಿ ಪರ್ಮನೆಂಟ್ ಪ್ರಿನ್ಸಿಪಾಲ್ ಇರಲಿಲ್ಲ. ಈಗ ಅಲ್ಲಿಗೆ ಪರ್ಮನೆಂಟ್ ಪ್ರಿನ್ಸಿಪಾಲರನ್ನು ಹಾಕಿದ್ದೇವೆ.

ಇನ್ನು ಇದೇ ಮಾನ್ಯ ಸದಸ್ಯರು ಔಷಧದ ಬಗ್ಗೆ ಡಾಕ್ಟರ್ ಒಬ್ಬರು ಹೇಳಿದ ಬಗ್ಗೆ ಕಂಪ್ಲೈಂಟ್ ಮಾಡಿದ್ದಾರೆ. If the details are given, I will get it enquired and if it is true, we are going to take action against them.

SRI M. M NADAF.—They get the medicines of below standard and outdated injection tubes are supplied to them.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಸದಸ್ಯರು ಹತ್ತಾರು ಸಲ ನನ್ನನ್ನು ಬಂದು ನೋಡಿದ್ದಾರೆ. ಆದರೆ ಈ ವಿಷಯವನ್ನು ಮಾತ್ರ ಅವರು ನನಗೆ ಹೇಳಲಿಲ್ಲ. ಈಗ ಹೇಳಿದ್ದಾರೆ. ಅದನ್ನು ನಾನು ತನಿಖೆ ಮಾಡಿಸುತ್ತೇನೆ. Let us punish the persons who are responsible.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ಕಡೆಯಿಂದ ಮಾತನಾಡುವಾಗ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದು ಏನು ಎಂದರೆ ನಮ್ಮ ಸರ್ಕಾರದವರು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿಯೂ ಅದರಲ್ಲೂ ಪಿಡಬ್ಲ್ಯುಡಿನಲ್ಲಿ ಬೇಕಾದಷ್ಟು ಜನ ಚೀಫ್ ಇಂಜಿನೀಯರ್‌ಗಳನ್ನು ಮಾಡಿ ಅವರಿಗೆ ಒಂದೊಂದು ಭಾಗವನ್ನು ಒಬ್ಬೊಬ್ಬರಿಗೆ ವಹಿಸಿದ್ದಾರೆ. ಆದೇ ರೀತಿ ಪೋಲೀಸ್ ಇಲಾಖೆಯಲ್ಲೂ ಅಡಿಷನಲ್ ಐ.ಜಿ.ಪಿ.ಗಳನ್ನು ಮಾಡಿದ್ದೀರಿ. ಪರಿಣಾಮಕಾರಿಯಾಗಿ ಕೆಲಸ ಕಾರ್ಯಗಳು ನಡೆಯುವ ಸಲುವಾಗಿ ಏತಕ್ಕೆ ಈ ಆರೋಗ್ಯ ಇಲಾಖೆಯಲ್ಲಿಯೂ ಅದೇರೀತಿ ಮಾಡಬಾರದು ? ಈ ಇಲಾಖೆಯಲ್ಲಿಯೂ ಸಮರ್ಥ ಅಧಿಕಾರಿಗಳು ಇದ್ದಾರೆ. ಆದ್ದರಿಂದ ಇದನ್ನು ಬೈಫರ್‌ಕೇಟ್ ಮಾಡಿ ಮೆಡಿಕಲ್ ಎಜುಕೇಷನ್ ಮೆಡಿಕಲ್ ಸರ್ವೀಸ್, ಪಬ್ಲಿಕ್ ಹೆಲ್ತ್ ಹಾಗೂ ಪಬ್ಲಿಕ್ ಹೆಲ್ತ್ ಅಡ್ಮಿನಿಸ್ಟ್ರೇಷನ್ ಎಂದು ಮಾಡಿ ಕೆಲಸಗಳನ್ನು ಹಂಚಿದರೆ ಅನುಕೂಲವಾಗುವುದಿಲ್ಲವೆ ? ನಾವು ಸುಮಾರು ೫೩ ಕೋಟಿ ರೂಪಾಯಿಗಳನ್ನು ಈ ಒಂದು ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನು ?

ಇನ್ನು ಕೆ.ಎಂ.ಸಿ. ಆಸ್ಪತ್ರೆಯಲ್ಲಿರುವ ತೊಂದರೆಗಳ ಬಗ್ಗೆ ಮಾನ್ಯ ಶ್ರೀ ನಾಡಾಫ್‌ರವರು ಕೆಲವು ಪ್ರಶ್ನೆಗಳನ್ನು ಕೇಳಿದರು. ಕಳೆದ ೨ ವರ್ಷಗಳಿಂದ ಈ ವಿಚಾರವನ್ನು ನಾವು ಕೇಳುತ್ತಲೇ ಇದ್ದೇವೆ. ಮಾನ್ಯ ಚೆನ್ನಬಸಪ್ಪನವರು ಹಾಗೂ ಮಾನ್ಯ ಸಿದ್ಧವೀರಪ್ಪನವರು ಇದ್ದಾಗಲಿಂದಲೂ ಅಲ್ಲಿನ ಪ್ರಿನ್ಸಿಪಾಲ್ ಹುದ್ದೆಯನ್ನು ಅಂದರೆ ಕಳೆದ ೨ ವರ್ಷಗಳಿಂದ ತುಂಬಿಲ್ಲ. ಅಲ್ಲಿರುವ ಟೆಂಪರರಿ ಮನುಷ್ಯರನ್ನೇ ಕಂಟಿನ್ಯೂ ಮಾಡುತ್ತಿದ್ದೀರಿ. ಇದು ನಮ್ಮ ಕರ್ನಾಟಕ ರಾಜ್ಯದಲ್ಲೇ ಅಲ್ಲದೇ ಇಡೀ ಪ್ರಪಂಚದಲ್ಲೇ ಒಂದು ಪೋಸ್ಟ್ ಗ್ರಾಜುಯೇಟ್ ಆಸ್ಪತ್ರೆಯಾಗಿದೆ. ಪೋಸ್ಟ್ ಗ್ರಾಜುಯೇಟ್ ಸೆಂಟರ್ ಬಹಳ ಚೆನ್ನಾಗಿ ಇತ್ತು. ಇನ್ನು ಈ ಆಸ್ಪತ್ರೆಗೆ ತಾವು ಯಾವ ಮೇಧಾವಿಗಳನ್ನು ಟ್ರಾನ್ಸ್‌ಫರ್ ಮಾಡಿದರೂ

ಅವರು ಅಲ್ಲಿಗೆ ಬರುತ್ತಿಲ್ಲ. ಎಲ್ಲರೂ ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಉಳಿದು ಬಿಟ್ಟಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಹಾಗೂ ಎಷ್ಟು ದಿವಸಗಳಲ್ಲಿ ತೆಗೆದುಕೊಳ್ಳುತ್ತೀರೆಂದು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಬೊಮ್ಮಾಯಿಯವರು ಹೇಳುವುದನ್ನು ನಾನು ಒಪ್ಪುತ್ತೇನೆ. ಕೆ.ಎಂ.ಸಿ. ಆಸ್ಪತ್ರೆ ಚೆನ್ನಾಗಿ ಬೆಳೆದಿದೆ, ನಾನು ಕೂಡ ನೋಡಿದ್ದೇನೆ ಅಲ್ಲಿ ಏನು ಹುದ್ದೆಗಳು ಖಾಲಿ ಇವೆ ಅವನ್ನು ತುಂಬುವುದಕ್ಕೆ ಆದಷ್ಟು ಜಾಗ್ರತೆ ಪ್ರಯತ್ನ ಮಾಡುತ್ತೇನೆ. ಈಗಾಗಲೇ ಪ್ರಿನ್ಸಿಪಾಲ್ ಹುದ್ದೆಯನ್ನು ತುಂಬಿದ್ದೇನೆ.

Sri C. M. Arumugam.—Sir, of course, the Hon. Minister gave a convincing reply. But so far as this department is concerned I will become hoter in the future also. That is a different question. Sir, I have suggested that this department must be bifurcated into four divisions. One for medical education, one for medical services, one for public health and another for general administration. I would bring to the notice of the Government that in Tamil Nadu and Maharashtra they have bifurcated the Health Department into 4 divisions. Therefore, I want a specific reply from the Government or is there any proposal by the Government so far as this department is concerned. And then, I may also bring to the notice of the House that there are several vacancies in the Directorate of Health & Medical Services, like Joint Director, Deputy Directors and several key posts. Is it possible to run the administration without these Directors ? I would like to know from the Government what action they propose to take to fill these vacancies.

Sri B. B. Sayanak.—Sir, the X ray machins at Belgaum Civil Hospital is not working for the last 6 months. Another thing, I would like to bring to the notice of the Government is, there are 5 deep-cut X Ray machines in Karnataka. Out of this 4 X Ray machines are not working for the last 6 or 7 years. I request the Hon. Minister to take suitable action to repair those machines. In Belgaum Corporation area and also in some of the villages of Belgaum, number of Doctors posts are vacant. I would like to know when these posts are going to be filled up ?

Sri Jeevaraj Alva.—Sir, I shall bring to the notice of the Hon. Minister, the alarming incident of dysentry in Bangalore City. This will become more alarming because the Water Supply & Sewerage Board have not taken suitable steps to prevent this disease by not supplying clean water. There have been several deaths and wards in Government Hospital is filled with patience complaining of dysentry. Unless suitable precautionary measures are taken I think this may spread to the whole of Bangalore City and even outside the city. Therefore, I request the Hon. Minister to take precautionary measures to control the disease.

SRI A. LAKSHMISAGAR.—Sir, the application fee for admission is fixed as Rs. 100/- in Medical Colleges. This is too high. It must be nominal. Why do you want to penalise the students? It should be not more then Rs. 10/-.

ಶ್ರೀ ಯು. ಟಿ. ಫರೀದ್.—ನಮ್ಮ ಮಂಗಳೂರಿನಲ್ಲಿ ಒಂದು ರಿಲೀಫ್ ಕಮಿಟಿ ಫಾರಂ ಮಾಡಿಕೊಂಡು ೨–೩ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಮಕ್ಕಳ ಆಪರೇಷನ್ ಥಿಯೇಟರ್ ಮಾಡಿದ್ದೇವೆ. ಅದಕ್ಕೆ ಒಂದ ಟೆಕ್ನಿಕಲ್ ಯೂನಿಟ್ ಬೇಕೆಂದು ಕೇಳಿದ್ದೇವೆ ಅದನ್ನು ಮಂಜೂರು ಮಾಡಿ ಅಲ್ಲಿಗೆ ಒಬ್ಬರು ಟೀಚಿಂಗ್ ಡಾಕ್ಟರ್ ಕೊಟ್ಟರೆ ಅವರಿಗೆ ಕೆಎಂಸಿಯವರು ಸಂಬಳ ಕೊಡುತ್ತಾರೆ. ಸರ್ಕಾರದವರು ಒಂದು ಎಕ್ಸರೇ ಪ್ಲಾಂಟನ್ನು ಇಲ್ಲಿಯವರೆಗೂ ಏತಕ್ಕೆ ಕೊಡಲಿಲ್ಲ ಎಂದು ಕೇಳುತ್ತೇನೆ. ಇದೇ ರೀತಿಯಲ್ಲಿ ಪ್ಲಾಸ್ಟಿಕ್ ಸರ್ಜರಿ ಯೂನಿಟ್‌ನ್ನು ಕೇಳಿದ್ದೇವೆ. ಅದಕ್ಕೂ ಕೂಡ ಆ ಡಾಕ್ಟರಿಗೆ ಕೆಎಂಸಿಯವರೇ ಸಂಬಳ ಕೊಡುತ್ತಾರೆ. ಇನ್ನು ಮೂರನೆಯದಾಗಿ ನಮ್ಮ ರಾಜ್ಯದಲ್ಲಿ ಓಪನ್ ಹಾರ್ಟ್ ಸರ್ಜರಿ ವ್ಯವಸ್ಥೆ ಇಲ್ಲ, ಅದು ಕೇರಳದಲ್ಲಿ ಇದೆ. ಅದೇ ರೀತಿ ನಮ್ಮಲ್ಲಿಯೂ ವ್ಯವಸ್ಥೆ ಮಾಡಬೇಕೆಂದು, ನಮ್ಮ ಜಿಲ್ಲೆಯ ರಿಲೀಫ್ ಕಮಿಟಿಯವರು ೪–೫ ವರ್ಷಗಳಿಂದಲೂ ಸ್ವಲ್ಪ ಧನ ಸಹಾಯವನ್ನು ಕೇಳುತ್ತಿದ್ದೇವೆ, ಆದರೆ ಇಲ್ಲಿಯವರೆಗೂ ಸ್ವಲ್ಪವಾದರೂ ಧನ ಸಹಾಯ ಕೊಡಲಿಲ್ಲ. ಒಟ್ಟಿಗೆ ಕೊಡುವುದಕ್ಕೆ ಆಗದೆ ಇದ್ದರೂ ಸ್ಟೇಜ್ ಬೈ ಸ್ಟೇಜ್ ಆದರೂ ಕೊಟ್ಟರೆ ನಮಗೆ ಬೇಕಾಗಿರುವ ಎರಡು ಮೆಷಿನ್‌ಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿ ಕೆಲವು ಜನ ದುಡ್ಡು ಇರುವವರು ಇಲ್ಲಿಗೆ ದುಡ್ಡು ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಅದೇ ವಾಲಂಟರಿಯಾಗಿ ವೆಲ್ಲೂರು ಆಸ್ಪತ್ರೆಗೆ ಕೊಡುತ್ತಾರೆ. ಆದ್ದರಿಂದ ಸರ್ಕಾರದವರು ಈ ಎರಡು ಮೆಷನರಿಗಳನ್ನು ಕೊಂಡು ಕೊಳ್ಳುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಸ್ವಾಮಿ, ಇವೊತ್ತು ಹಳ್ಳಿ, ತಾಲ್ಲೂಕು, ಮತ್ತು ಜಿಲ್ಲಾ ಮಟ್ಟಗಳಿಗೆ ಔಷಧಿಗಳನ್ನು ತೀವ್ರಗತಿಯಿಂದ ಒದಗಿಸತಕ್ಕ ವ್ಯವಸ್ಥೆ ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ಈ ಸದನಕ್ಕೆ ಹೊಸಬ. ಅವರೂ ಕಳೆದ ಎರಡು ಮೂರು ವರ್ಷಗಳ ಪ್ರೊಸೀಡಿಂಗ್ಸ್ ನೋಡಿದರೆ ಈಗ ಮಾನ್ಯ ಮಂತ್ರಿಗಳು ಏನು ಉತ್ತರ ಹೇಳಿದ್ದಾರೆ ಅದೇ ರೀತಿಯ ಉತ್ತರವನ್ನು ಹಿಂದೆ ಇದ್ದ ಮಂತ್ರಿಗಳು ಹೇಳಿದ್ದಾರೆ. ಈ ಔಷಧಿಗಳನ್ನು ಒದಗಿಸುವುದಕ್ಕಾಗಿಯೇ ಒಂದು ಪ್ರತ್ಯೇಕ ಸ್ಟೋರ್ ಕೂಡ ಇದೆ. ಅದಕ್ಕೆ ಒಬ್ಬ ಡೈರೆಕ್ಟರ್ ಕೂಡ ಇದ್ದಾರೆ. ಇವೊತ್ತು ಎಲ್ಲಾ ಹಳ್ಳಿಗಳಿಗೂ ಔಷಧ ಹೋಗಿದೆಯೋ ಎನ್ನುವುದನ್ನು ತಿಳಿಸಬೇಕು.

ಶ್ರೀ ಕೆ. ವೆಂಕಟರಾಮಯ್ಯ.—ಸ್ವಾಮಿ, ನಾನು ಎರಡು ಸಲಹೆಗಳನ್ನು ಮಾತ್ರ ಕೊಟ್ಟಿದ್ದೆ. ದೇಶೀಯ ವೈದ್ಯ ಹೋಮಿಯೋಪತಿಯ ಬಗ್ಗೆ ಮಾನ್ಯ ಮಂತ್ರಿಗಳು ಹಣ ಇಲ್ಲದ್ದರಿಂದ ಈ ರೀತಿ ಇದೆ ಎಂದು ಹೇಳಿದರು, ಅದನ್ನು ನಾನು ಒಪ್ಪುವುದಿಲ್ಲ. ಇವೊತ್ತು ದಕ್ಷ ಆಡಳಿತಗಾರರು ಇಲ್ಲದೇ ಇರುವುದರಿಂದ ಆಯುರ್ವೇದ ಹಿಂದೆ ಬಿದ್ದಿದೆ. ಆಯುರ್ವೇದ ಡೈರೆಕ್ಟರ್ ಏನಿದ್ದಾರೆಅವರಿಗೆ ಅದರಲ್ಲಿ ಕ್ವಾಲಿಫಿಕೇಷನ್ ಇಲ್ಲದೇ ಇರುವುದರಿಂದ ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟಿಲ್ಲ. ಇವರ ಸಲಹೆ ಎಂತಹದು ಎಂದರೆ ಒಬ್ಬ ಜವಾನನಿಗೆ ಸೈಕಲ್ ಕೊಡುವುದಕ್ಕೆ ಸಲಹೆ ಮಾಡುತ್ತಾರೆ. ಆದುದರಿಂದ ಈ ಹೋಮಿಯೋಪತಿ ಹೆಚ್ಚು ಮುಂದೆ ಬರಲಿಕ್ಕೋಸ್ಕರ ತಜ್ಞರ ಒಂದು ಸಮಿತಿಯನು ನೇಮಕ ಮಾಡಬೇಕು ಎಂದು ಮಾನ್ಯ ಮಂತ್ರಿಗಳಿಗೆ ಹೇಳಿದ್ದೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಕೊಡದೇ ಇರುವುದರಿಂದ ನಾನು ಈಗ ಕೇಳುತ್ತಿದ್ದೇನೆ.

ಶ್ರೀಮತಿ ಅನಸೂಯ ಗಜಾನನಶರ್ಮ.—ಮಾನ್ಯ ಅಧ್ಯಕ್ಷರೆ. ಲೇಡಿ ಡಾಕ್ಟರ್ ಕೊರತೆ ಇದೆ ಎಂದು ಹೇಳಿದಾಗ ೫೫ ವರ್ಷ ಆದಮೇಲೆ ರಿಟೈರ್ ಮಾಡುವಂತಹ ಲೇಡಿ ಡಾಕ್ಟರ್‌ಗಳಿಗೆ ಪ್ರಮೋಷನ್ ಕೊಡುವ ಬಗ್ಗೆ ಸರ್ಕಾರದಲ್ಲಿ ಕೇಳುತ್ತೇನೆ. ಇನ್ನು ರೂರಲ್ ಮೆಡಿಕಲ್ ಸ್ಕೀಮ್‌ನಲ್ಲಿ ಹೆಚ್ಚಿಸುತ್ತೇವೆ ಎಂದು ಹೇಳಿದಿರಿ. ಇವೊತ್ತು ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಎಷ್ಟು ದವಾಖಾನೆಗಳನ್ನು ಕೊಟ್ಟಿದ್ದೀರಿ? ಇನ್ನು ಎಸ್.ಎಂ.ಪಿ. ಸೆಂಟರ್ ಬಗ್ಗೆ ಹೇಳಿದ್ದೆ. ಹಳ್ಳಿಗಳಲ್ಲಿ ನಿಜವಾಗಿ ಸೇವೆ ಮಾಡತಕ್ಕ ಒಂದು ವ್ಯವಸ್ಥೆ ಇದೆ. ಆದರೆ ಡಾಕ್ಟರುಗಳಿಗ ಸರಿಯಾಗಿ ಪಗಾರ ಕೊಡುತ್ತಿಲ್ಲ. ಪೆನ್‌ಷನ್ ಸಿಕ್ಕುವುದಿಲ್ಲ. ಇಂತಹ ಸೆಂಟರ್‌ಗಳು ಅಗತ್ಯ ಇದೆ ಎಂದು ಹೇಳಿದ್ದೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ. ಇನ್ನು ನಮ್ಮ ಜಿಲ್ಲೆಯಲ್ಲಿ ಎಷ್ಟು ಡಾಕ್ಟರುಗಳ ಜಾಗ ಖಾಲಿ ಇದೆ? ಅವುಗಳನ್ನು ಯಾವಾಗ ತುಂಬುತ್ತೀರಾ?

ಶ್ರೀ ಪಿ. ಬಸವನಗೌಡ.—ಅಧ್ಯಕ್ಷರೆ, ಇವೊತ್ತು ಖಾಯಿಲೆಗಳ ಬಗ್ಗೆ ತಾಲ್ಲೋಕಿನಲ್ಲಿ ಸಮಸ್ಯೆಯೇ ಬೇರೆ ಇರುತ್ತದೆ, ಜಿಲ್ಲೆಯ ಸಮಸ್ಯೆಯೇ ಬೇರೆ ಇರುತ್ತದೆ. ಅಲ್ಲಿಗೆ ಬೇಕಾಗತಕ್ಕಂತಹ ಔಷಧಿಗಳನ್ನು ಕಳುಹಿಸುತ್ತಾ ಇಲ್ಲ ಎಂದು ಆಪಾದನೆಗಳು ಇವೆ. ತಾವು ಆಸ್ಪತ್ರೆಗಳಿಗೆ ಅವರು ಇಂಡೆಂಟ್ ಹಾಕಿದಂತಹ ಔಷಧಿಗಳನ್ನು ಕಳುಹಿಸುತ್ತಿದ್ದೀರೋ ಅಥವಾ ನೀವು ಪರ್ಚೇಸ್ ಮಾಡಿದ್ದನ್ನು ಡಮ್ಪ್ ಮಾಡುತ್ತಿದ್ದೀರೋ ?

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ, ಒಂದು ಸ್ಥಳದಲ್ಲಿ ಆಸ್ಪತ್ರೆ ತೆಗೆಯಬೇಕಾದರೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಆದುದರಿಂದ ಪ್ರತಿಯೊಂದು ಜಿಲ್ಲೆಯಲ್ಲೂ ನ್ಯಾಚುರೋಪತಿ ಕಾಲೇಜು ತೆಗೆದರೆ ಖರ್ಚು ಕಡಿಮೆಯಾಗುತ್ತದೆ. ಇದಕ್ಕೆ ಹೆಚ್ಚು ಹಣ ಖರ್ಚಾಗುವುದಿಲ್ಲ. ಆದುದರಿಂದ ಈ ನ್ಯಾಚುರೋಪತಿ ಆಸ್ಪತ್ರೆಗಳನ್ನು ತೆಗೆಯಬೇಕು ಎಂದು ಹೇಳುತ್ತೇನೆ.

ಶ್ರೀ ಕಡಿದಾಳ್ ದಿವಾಕರ್.—ಸ್ವಾಮಿ, ಮಾನ್ಯ ಸಚಿವರು ಪ್ರಮಾಣ ಸ್ವೀಕಾರ ಮಾಡಿದ ನಂತರ ಈಗ ಹೊರ ರೋಗಿಗಳ ಶುಲ್ಕ ೨೫ ಪೈಸೆ ಏನು ವಸೂಲು ಮಾಡುತ್ತಿದ್ದಾರೆ ಅದನ್ನು ರದ್ದು ಮಾಡುತ್ತೇನೆಂದು ಹೇಳಿದ್ದರೂ ಇಲ್ಲಿಯವರೆಗೆ ಯಾವ ಆಸ್ಪತ್ರೆಯಲ್ಲೂ ರದ್ದು ಮಾಡಿಲ್ಲ. ತಾವು ಮೊದಲು ಹೊರಡಿಸಿದಂತಹ ಆಜ್ಞೆಯನ್ನು ಏನಾದರೂ ರದ್ದು ಮಾಡಿ ಹೊಸ ಆಜ್ಞೆಯನ್ನು ಏನಾದರೂ ಹೊರಡಿಸಿದ್ದೀರಾ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಮೈಖೇಲ್ ಬಿ. ಫರ್ನಾಂಡೀಸ್.—ಸ್ವಾಮಿ, ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಕೆಲವು ನೌಕರರ ಬಗ್ಗೆ ಒಂದು ಪ್ರಶ್ನೆ ಹಾಕಬೇಕು ಎಂದು ಇಷ್ಟಪಡುತ್ತಿದ್ದೇನೆ. ಈ ಡಾಕ್ಟರುಗಳಿಗೆ ಟ್ರಾನ್ಸ್‌ಫರ್ ಮಾಡುವ ಬಗ್ಗೆ ನನ್ನದೇನೂ ವಿಶೇಷ ಆಕ್ಷೇಪಣೆ ಇಲ್ಲ. ಅವರು ದೊಡ್ಡ ಮಟ್ಟದಲ್ಲಿರುವುದರಿಂದ ಬಹುಶಃ ಅವರು ಬೇರೆ ಜಾಗಕ್ಕೆ ಹೋದರೂ ಅಡ್ಜಸ್ಟ್ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಈ ನರ್ಸ್‌ಸ್ ದೊಡ್ಡ ಪ್ರಮಾಣದಲ್ಲಿ ಟ್ರಾನ್ಸ್‌ಫರ್ ಮಾಡಿದರೆ ಅವರ ಮನೆಯಲ್ಲಿ ದುಸ್ಥಿತಿ ಬರುತ್ತದೆ, ಅವರು ಬಹಳ ಅಸಮಾಧಾನಪಡುತ್ತಾರೆ. ಆದುದರಿಂದ ಅವರನ್ನು ಟ್ರಾನ್ಸ್‌ಫರ್ ಮಾಡುವ ಬಗ್ಗೆ ಕೆಲವು ನಿರ್ದಿಷ್ಟ ಕಾನೂನು ಮಾಡಬೇಕು. The are supposed to bring cheer to the patients whom they nurse. Instead of that they themselves become a sort of mental patients in the sense that they are totally unhappy. They are not with their husbands and not with their children. ಇವೊತ್ತು ತಾವು ಅವರನ್ನು ಅವರ ಮನೆಯಿಂದ ಸುಮಾರು ೧೫೦ ಮೈಲಿ ದೂರ ಅಪಾಯಿಂಟ್ ಮಾಡುವುದರಿಂದ, ಆ ಸ್ಥಳದವರು ಕೀಟಲೆ ಮಾಡಿ ಅವರಿಗೆ ಬಹಳ ಕಾಟ ಕೊಡುತ್ತಿದ್ದಾರೆ. ಪೊಲಿಟಿಕಲ್ ಲೀಡರ್ಸ್ ಅವರಿಗೆ ಮಾನ ಭಂಗ ಮಾಡುವ ಸ್ಥಿತಿಗೆ ಹೋಗಿದೆ. ಆದ್ದರಿಂದ ಈ ಟ್ರಾನ್ಸ್‌ಫರ್ಸ್ ಮಾಡುವಾಗ ಅವರ ಮನೆಯಿಂದ ಸುಮಾರು ೩೦ ಮೈಲಿ ದೂರಕ್ಕೆ ಮಾಡಿದರೆ ಈ ಲೋಕಲ್ ಪುಡಾರಿಗಳಿಗೆ ಅಷ್ಟೊಂದು ಧೈರ್ಯ ಇರುವುದಿಲ್ಲ. ಅಲ್ಲದೇ ಅವರು ಬಸ್ಸಿನಲ್ಲಿ ಹೋಗಿ ಬರುವುದಕ್ಕೂ ಅನುಕೂಲ ಇರುತ್ತದೆ. ತಾವು ೧೫೦ ಮೈಲಿ ದೂರಕ್ಕೆ ಟ್ರಾನ್ಸ್‌ಫರ್ ಮಾಡಿದರೆ, ಸ್ಥಳದಲ್ಲಿರತಕ್ಕವರು ಇವರು ೧೫೦ ಮೈಲಿ ದೂರದಿಂದ ಬಂದಿದ್ದಾರೆ ಎಂದು ತಿಳಿದುಕೊಂಡ ರಾತ್ರಿ ವೇಳೆಯಲ್ಲಿ ಗಲಾಟೆ ಮಾಡತಕ್ಕಂತಹ ಆಪಾದನೆಗಳು ತಿಳಿದು ಬರುತ್ತಿವೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಗಮನಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎನ್. ಬಾಚೆಗೌಡ.—ಸ್ವಾಮಿ, ಇವೊತ್ತು ಬೆಂಗಳೂರು ನಗರದಲ್ಲಿ ಅನೇಕ ಆಕ್ಸಿಡೆಂಟ್‌ಗಳು ಆಗುತ್ತಾ ಇರುತ್ತವೆ. ನ್ಯೂರೋಸೈನ್ಸ್ ವಿಭಾಗ ಮೆಂಟಲ್ ಆಸ್ಪತ್ರೆಯಲ್ಲಿ ಮಾತ್ರ ಇದೆ. ಅದು ತುಂಬಾ ದೂರ ಇರುವುದರಿಂದ ತಲೆಗೆ ಏಟು ಬಿದ್ದವರನ್ನು ಅಷ್ಟು ದೂರ ಸಾಗಿಸಬೇಕಾದರೆ ಬಹಳ ಕಷ್ಟ ಆಗುತ್ತದೆ. ಆದುದರಿಂದ ಈ ನ್ಯೂರೋಸೈನ್ಸ್ ವಿಭಾಗವನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲೂ ತೆರೆಯಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಮೊದಲನೆಯದಾಗಿ ಮಾನ್ಯ ಬೊಮ್ಮಾಯಿಯವರು ಕೆ.ಎಂ.ಸಿ. ಆಸ್ಪತ್ರೆ ಬಗ್ಗೆ ಹೇಳಿದ್ದಾರೆ. ಅಲ್ಲಿ ಒಬ್ಬ ಪರ್ಮನೆಂಟ್ ಪ್ರಿನ್ಸಿಪಾಲ್ ಪೋಸ್ಟ್ ಮಾಡಿದ್ದೇವೆ. ಇನ್ನು ಅಲ್ಲಿ ಎಷ್ಟು ಪೋಸ್ಟ್‌ಗಳು ಖಾಲಿ ಇವೆ ಅವನ್ನು ಕೂಡಲೆ ಭರ್ತಿ ಮಾಡುತ್ತೇನೆ. ಇನ್ನು ಮಾನ್ಯ ಆಮ್ರಾಗಂ ಅವರು ಒಂದು ಪ್ರಶ್ನೆ ಹಾಕಿದರೂ. ಈಗ ಏನಾಗಿದೆ ಹಿಂದೆ ರೀ ಆರ್ಗನೈಸ್ ಆದಾಗ ಗೌರ್ನಮೆಂಟ್

ಆಫ್ ಇಂಡಿಯಾದವರು ಒಬ್ಬರೇ ಇರಬೇಕೆಂದು ಹೇಳಿದ್ದರು. ನಮ್ಮಲ್ಲಿ ಬಹಳ ಕೆಲಸ ಆಗುತ್ತಿದೆ. ಈಗ ರೀ ಆರ್ಗನೈಸ್ ಮಾಡಬೇಕೆಂದು ಸಲಹೆ ಹೇಳುತ್ತಿದ್ದೀರಿ. ಈ ಸಲಹೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

SRI C M. ARUMUGHAM.—Tamilandu, Maharashtra and Gujarath have bifurcated and there is a separate Director for Medical Education. Do the Government feel that they can manage like this.

SRI M. MALLAPPA.—Government will consider and take suitable action as early as possible.

The hon. Member Sri Sayank came out with the propostion that the deep X Ray are out of order. Where they are out of order, they will be repaired and where they are beyond repair they will be condemned and new X Ray machines will be supplied.

12-30 P.M.

So far as Belgaum district is concerned, it was stated that posts of doctors were vacant. I have got the latest list according to which only the posts of lady medical officers are vacant. There is no hospital where male doctor is not posted. In regard to lady doctors also, we are hoing to secruit locally. The hon'bl member Sri Jeevaraj Alva said the paedratic diseases are prominent in Bangalore. It will be examined and due action will be taken as soon as possible.

ಮಂಡ್ಯ ಶಾಸಕರು ಹೇಳಿದರು. ಎಲ್ಲೂ ಕೂಡ ಸರಿಯಾಗಿ ಔಷಧಿ ಸರಬರಾಜು ಆಗುತ್ತಿಲ್ಲ ಎಂದು ತಾವು ದಯಮಾಡಿಟ್ಟು ತಿಳಿದುಕೊಳ್ಳಬೇಕು. ಶೇಕಡ ೫೦ ರಷ್ಟನ್ನು ಸರ್ಕಾರಿ ಸ್ಟೋರುಗಳಿಂದ ಒದಗಿಸುತ್ತೇವೆ. ಅಷ್ಟೇ ಅಲ್ಲ ಡಿ ಹೆಚ್ ಓ. ರವರು ಇಂಡೆಂಟ್ ಹಾಕಿ ಕಳುಹಿಸಿದರೆ ಅದನ್ನು ಒದಗಿಸುತ್ತೇವೆ. ಅಮೇಲೆ, ಪ್ಯಾಕೇಜಸ್ ಸ್ಕೀಂನಲ್ಲಿ ಅದನ್ನು ಕೊಡುತ್ತಿದ್ದೇವೆ. ಮಂಗಳೂರು ಸದಸ್ಯರು ಬಹಳ ಕಳಕಳಿಯಿಂದ ಹೇಳಿದರು. ಮಂಗಳೂರಿನಲ್ಲಿರತಕ್ಕ ಅನುಕೂಲ ಎಲ್ಲಾ ಆಸ್ಪತ್ರೆಗಳಿಗೂ ದೊರಕಿದರೆ ಬಹಳ ಹೆಮ್ಮೆಯಾಗುತ್ತದೆ. ಅವರು ಮಂಗಳೂರು ಪಟ್ಟಣಕ್ಕೆ ಸಂಬಂಧಿಸಿದಂತೆ ಮಾತ್ರ ಹೇಳುತ್ತಾರೆ. ಮಂಗಳೂರು ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳ ಬಗ್ಗೆಯೂ ಗಮನಕೊಡಬೇಕು.

ಶ್ರೀ ಯು. ಟಿ. ಫರೀದ್.—ಪ್ಲಾಸ್ಟಿಕ್ ಸರ್ಜರಿ ಯೂನಿಟ್ ಮತ್ತು ಓಪನ್ ಹಾರ್ಟ್ ಸರ್ಜರಿ ಯೂನಿಟ್ ಬಗ್ಗೆ ಸ್ಪೆಸಿಫಿಕ್ ಬಗ್ಗೆ ಆಗಿ ಸ್ಯಾಂಕ್ಷನ್ ಕೊಡುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಪ್ಪ.—ಇದು ಬಹಳ ದೊಡ್ಡ ಜಿಲ್ಲೆ. ಒಬ್ಬರು ಮೇಲ್ ಡಾಕ್ಟರು ನಾಲ್ಕು ಜನ ಲೇಡಿ ಡಾಕ್ಟರು ಕೊಡಬೇಕು. ಯೂನಿಟ್‌ಗಳ ಬಗ್ಗೆ ನೋಡೋಣ.

ಶ್ರೀಮತಿ ಅನುಸೂಯರವರು ೫೫ ವರ್ಷಕ್ಕೆ ನಿವೃತ್ತಿಹೊಂದುವಂತಹ ಲೇಡಿ ಡಾಕ್ಟರುಗಳನ್ನು ಪುನರ್ ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಿದರು. ನಾವು ಹಾಕಿದ ಕಡೆ ಹೋಗುವುದಾದರೆ ಅದರ ಬಗ್ಗೆ ವಿಚಾರ ಮಾಡಲಾಗುವುದು. ಕಾರಣ ಇವತ್ತು ೧೧೬ ಕಡೆ ಲೇಡಿ ಡಾಕ್ಟರುಗಳು ಇಲ್ಲ. ೨೩ ಕಡೆ ಪುರುಷ ಡಾಕ್ಟರುಗಳು ಇಲ್ಲ. ಮತ್ತೆ ಎಸ್.ಎಂ.ಪಿ. ಡಾಕ್ಟರುಗಳನ್ನು ಸರ್ಕಾರಿ ನೌಕರರು ಅಲ್ಲ ಅಂತ ಪರಿಗಣಿಸಿದ್ದಾರೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—೫-೬ ತಿಂಗಳಿಂದ ಆನರೇರಿಯಂ ಕೊಡುತ್ತಿಲ್ಲ.

ಶ್ರೀ ಎಂ. ಮಲ್ಲಪ್ಪ.—ಅವರು ಸರ್ಕಾರಿ ನೌಕರರು ಅಲ್ಲವೆಂದು ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಪರಿಶೀಲನೆ ಮಾಡಿಲ್ಲ. ಇದರ ಬಗೆ ಯೋಚನೆ ಮಾಡೋಣ.

ಭೀಮಣ್ಣ ಖಂಡ್ರೆಯವರು ಪ್ರಕೃತಿ ಚಿಕಿತ್ಸೆ ಬಹಳ ಯೋಗ್ಯವಾದುದು ಎಂದು ಹೇಳಿದರು. ಅದರಲ್ಲಿ ಅವರಿಗೆ ಸಾಕಷ್ಟು ಅನುಭವ ಇದೆ, ಈಗ ಬೆಂಗಳೂರಿನಲ್ಲಿ ಎರಡು ಕಡೆ ಇದೆ. ಅದಕ್ಕೆ ಯೋಗ್ಯ ಪುರಸ್ಕಾರ ದೊರೆಯುತ್ತಿವೆ, ಇನ್ನು ಹೆಚ್ಚಿನ ಪುರಸ್ಕಾರ ಕೊಡೋಣ. ಎಲ್ಲಾ ಕಡೆ ಇದನ್ನು ಆರಂಭ ಮಾಡುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಆಮೇಲೆ ಆಸ್ಪತ್ರೆಗಳಲ್ಲಿ [illegible] ಪೈಸೆ ವಸೂಲು ಮಾಡುತ್ತಾರೆಂದು ಮಾನ್ಯ ಸದಸ್ಯರುಗಳು ಹೇಳಿದರು, ಇದರ ಬಗ್ಗೆ ಆಜ್ಞೆ ಇನ್ನೂ ಹೊರಟಿಲ್ಲ, ಬಡವರು ಕೊಡುವುದು ಬೇಡ, ಶ್ರೀಮಂತರು ಏತಕ್ಕೆ ಕೊಡಬಾರದು? ಬಡವರ ಹೆಸರಿನಲ್ಲಿ ಶ್ರೀಮಂತರು ಹಣ ಉಳಿಸಿಕೊಳ್ಳುವುದು ಬೇಡ ಎನ್ನುವುದು ನನ್ನ ಅಭಿಪ್ರಾಯ.

ಮತ್ತೆ ಫರ್ನಾಂಡಿಸ್‌ರವರು ಡಾಕ್ಟರುಗಳು ಮತ್ತು ನರ್ಸುಗಳ ವರ್ಗಾವಣೆ ಬಗ್ಗೆ ಹೇಳಿದ್ದಾರೆ. ಅವರುಗಳಿಗೆ ಏನಾದರೂ ತೊಂದರೆ ಇದ್ದರೆ ಯೋಗ್ಯ ಅಂತ ಕಂಡುಬಂದರೆ ವರ್ಗಾವಣೆ ಮಾಡತಕ್ಕ ಅಧಿಕಾರಿಗಳು ಮಾನವೀಯ ದೃಷ್ಟಿಯಿಂದ ಅವರಿಗೆ ಸಹಾಯ ಮಾಡಿ ಎಂದು ಹೇಳುತ್ತೇನೆ. ಏನೋ ಒಂದು ಉದ್ದೇಶ ಇಟ್ಟುಕೊಂಡು ಮಾಡುತ್ತಾರೆಂದು ಏನು ಹೇಳಿದ್ದೀರಿ ಅದರ ಬಗ್ಗೆ ನಿರ್ದಿಷ್ಟ ಆಪಾದನೆಗಳು ಇದ್ದರೆ ದಯಮಾಡಿ ಕೊಡಿ ವಿಚಾರ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಗಂಡ ಹೆಂಡಿರನ್ನು ಅಗಲಿಸಬೇಡಿ ಸ್ವಾಮಿ.

ಶ್ರೀ ಎಂ. ಮಲ್ಲಪ್ಪ.—ಆದಷ್ಟು ಮಟ್ಟಿಗೆ ಒಂದೇ ಕಡೆ ಹಾಕುವುದಕ್ಕೆ ಹೇಳುತ್ತೇನೆ.

MR. SPEAKER.—I will put the Demand to the Vote of the House. The question is :

> "That a sum not exceeding Rs. 43,31,35,000 inclusive of the sum granted 'on account', be granted to the Government to defray the charges which will come in course of payment during the financial year ending 31st day of March 1979 in respect of Demand No. 27, "Medical Services and Family Welfare".
>
> That a sum not exceeding Rs. 8,02,75,000 inclusive of the sum granted 'on account', be granted to the Government to defray the charges which will come in course of payment during the financial year ending 31st day of March 1979 in respect of Demand No. 28, "Public Health and Sanitation".

*The motion was adopted and the Demands were granted*

## Demand No. 4—Animal Husbandry and Dairy Development

SRI DEVENDRAPPA GHALAPPA (Minister for Animal Husandry and Dairy Development).—Sir, On the recommendation of the Governor, I beg to move :

> "That a sum not exceeding Rs. 14,16,66,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 4, 'Animal Husbandry and Dairy Development.

*The question was proposed*

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಧ್ಯಕ್ಷರೆ, ಈ ಬೇಡಿಕೆ ಮೇಲೆ ಆ ಕಡೆ ನಾಲ್ಕು ಜನಕ್ಕೆ ಈ ಕಡೆ ನಾಲ್ಕು ಜನಕ್ಕೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಸಲಹೆ ಏನೆಂದರೆ ಐದು-ಐದು ಜನಕ್ಕೆ ಅವಕಾಶ ಕೊಡುವುದು ಒಳ್ಳೆಯದು.

† ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ ಇಂದು ಪ್ರಮುಖವಾದಂಥ ಬೇಡಿಕೆಯಮೇರ ಚರ್ಚೆ ಆರಂಭಿಸುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಅನಿಮಲ್ ಹಸ್ ಬೆಂಡ್ರಿ ಮತ್ತು ಡೈರಿ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನ ೧೪,೧೬,೬೬,೦೦೦ ರೂಪಾಯಿಗಳ ವೆಚ್ಚದ ಈ ಒಂದು ಬೇಡಿಕೆಯ ಮೇಲೆ ಮಾತನಾಡುವಾಗ ಇದು ಎಂಥ ಒಂದು ಪ್ರಮುಖವಾದ ವಿಷಯ ಎನ್ನುವುದನ್ನು ಗಮನಿಸಬೇಕಾಗಿದೆ, ಮನುಷ್ಯನ ಬದುಕಿಗೆ ಆಹಾರ ಬಹಳ ಮುಖ್ಯವಾಗಿ ಬೇಕಾದಂಥ ವಸ್ತುವಾಗಿರುತ್ತದೆ. ಈ ಆಹಾರದ ಉತ್ಪಾದನೆಯನ್ನು ಮೂರು ಕ್ಷೇತ್ರಗಳಲ್ಲಿ ಉತ್ಪಾದಿಸಬಹುದಾಗಿದೆ. ಅವು ಯಾವುವೆಂದರೆ ಭೂಮಿಯ ಒಳಭಾಗದಲ್ಲಿ, ಭೂಮಿಯ ಮೇಲ್‌ಭಾಗದಲ್ಲಿ ಮತ್ತು ಜಲದಲ್ಲಿ ಉತ್ಪತ್ತಿಯಾಗತಕ್ಕಂಥ, ಜಲಚರಗಳೂ ಮನುಷ್ಯನ ಆಹಾರವಾಗುವ ಸಂದರ್ಭ ಇರುತ್ತದೆ. ಭೂಮಿಯ ಮೇಲೆ ಉತ್ಪನ್ನವಾಗತಕ್ಕಂಥ ಆಹಾರವೆಂದರೆ ಸಸ್ಯ ಆಹಾರ ಅದರ ಜೊತೆಗೆ ಪ್ರಾಣಿ ಸಂಪತ್ತೂ ಕೂಡ ಇದರಲ್ಲಿ ಸೇರಿಕೊಳ್ಳುತ್ತದೆ. ಇದರ ಬಗ್ಗೆ ಬೇಕಾದಷ್ಟು ಗಮನಕೊಡಬೇಕಾದ್ದು ಈಗ ಇರುತ್ತದೆ. ಒಂದು ದೃಷ್ಟಿಯಿಂದ ಹೇಳುವುದಾದರೆ ನಮ್ಮ ಭಾರತಭೂಮಿ ಬಹಳ ಪುಣ್ಯಭೂಮಿ ಎಂದು ಹೇಳಬಹುದು. ಆರಂಭದಲ್ಲಿ ಒಂದು ಮಾತನ್ನು ವೇದದಲ್ಲಿ ಹೇಳಿರುತ್ತಾರೆ.—

''ಶನ್ನೋ ಅಸ್ತು ದ್ವಿಪದೇ ಶಂಚುತಂಷ್ಪದೆ''

ಅಂದರೆ ಎರಡು ಕಾಲಿನ ಜೀವಿಗಳಿಗೆ ಮತ್ತು ನಾಲ್ಕು ಕಾಲಿನ ಜೀವಿಗಳಿಗೆ ಕ್ಷೇಮವಾಗಲಿ ಎಂದರ್ಥ ಮತ್ತೆ ೧೨ನೇ ಶತಮಾನದಲ್ಲಿ ಬಸವಣ್ಣನವರೂ ಕೂಡ ಈ ರೀತಿ ಹೇಳಿದ್ದಾರೆ.

'ಸಕಲ ಜೀವಾತ್ಮರಿಗೆ
ಲೇಸನು ಬಯಸುವ
ನಮ್ಮ ಕೂಡಲ ಸಂಗನ ಶರಣರೇ
ಕುಲಜರಯ್ಯ' ಎಂದು ಹೇಳಿದ್ದಾರೆ.

ಇಡೀ ಮಾನವ ಜೀವನದ ಪ್ರಗತಿಗೆ ಆಹಾರವನ್ನು ಒದಗಿಸತಕ್ಕಂಥ ಮೂರನೆ ಒಂದರಷ್ಟು ಸಂಪತ್ತನ್ನು ಒದಗಿಸತಕ್ಕಂಥ ಈ ಇಲಾಖೆಗೆ ಕೇವಲ ೧೪ ಕೋಟಿ ರೂಪಾಯಿಗಳನ್ನು ವೆಚ್ಚಮಾಡುವುದಕ್ಕೆ ನಮ್ಮ ಸರ್ಕಾರ ಮುಂದಾಗಿರತಕ್ಕಂಥಾದ್ದು ನಿಜವಾಗಿಯೂ ಕೂಡ ಆಶ್ಚರ್ಯಪಡತಕ್ಕಂಥ ಸಂಗತಿಯಾಗಿರುತ್ತದೆಂದು ಹೇಳಲಿಕ್ಕೆ ವ್ಯಥೆಯಾಗಿರುತ್ತದೆ. ಅದರಲ್ಲೂ ಕನ್ನಡ ನಾಡಿನಲ್ಲಿ ಸರ್ಕಾರ ಒದಗಿಸಿರತಕ್ಕಂಥ ಲೆಕ್ಕದ ಪ್ರಕಾರ ೧,೦೦,೧೮,೭೧೫ ದನಕರುಗಳು ಜನರ ಆಹಾರ ಉತ್ಪನ್ನಕ್ಕಾಗಿ ಇರತಕ್ಕಂಥ ರಾಸುಗಳ ಪೈಕಿ ೩೨,೧೫,೮೭೩ ಎಮ್ಮೆಗಳು ಇರುತ್ತವೆ. ಇನ್ನಿತರ ಪ್ರಾಣಿಗಳೆಂದರೆ ಕುರಿ, ಆಡು ಮತ್ತು ಕುದುರೆ ಈ ಪ್ರಾಣಿಗಳೂ ಸೇರಿ ಒಟ್ಟು ೨ ಕೋಟಿ ಪ್ರಾಣಿಗಳರಾಸು ಇದೆ. ಈ ಎರಡು ಕೋಟೀ ರಾಸುಗಳು ಮೂರು ಕೋಟಿ ಜನರಿಗೆ ಆಹಾರವನ್ನು ಕೊಡತಕ್ಕಂಥ ಪ್ರಾಣಿಗಳ ಬಗ್ಗೆ ನಾವು ಖರ್ಚು ಮಾಡಿರತಕ್ಕಂಥ ಹಣ ಎಷ್ಟು ಎಂದರೆ ೧ ಕೋಟಿ ರೂಪಾಯಿ. ಇದು ಬಹಳ ಕಡಿಮೆ ಎಂದು ಹೇಳಿದರೆ ತಪ್ಪಾಗಲಾರದು. ಈ ಎರಡು ಕೋಟಿ ಪ್ರಾಣಿ ಸಮುದಾಯಕ್ಕೆ ನಮ್ಮ ಸರ್ಕಾರದವರು ಖರ್ಚು ಮಾಡಿರತಕ್ಕಂಥಹಣವನ್ನು ಲೆಕ್ಕ ತೆಗೆದುಕೊಂಡರೆ ತಲ ಒಂದು ಪ್ರಾಣಿಗೆ ಎಷ್ಟಾಗುತ್ತದೆ ಎಂದರೆ ೧-೨೫ ಪೈಸೆ ಖರ್ಚು ಮಾಡುತಿದ್ದಾರೆಂದು ಹೇಳಬಹುದು. ಯಾವುದು ದೇಶದ ಉತ್ಪನ್ನದಲ್ಲಿ ಮೂರನೆ ಒಂದು ಭಾಗದಷ್ಟು ಹಣವನ್ನು ಕೊಡುತ್ತದೆ ಅದಕ್ಕಾಗಿ ನಾವು ಖರ್ಚು ಮಾಡುತ್ತಿರತಕ್ಕಂಥಾದ್ದು ಕೇವಲ ೧-೨೫ ಪೈಸೆ. ಈ ಒಂದು ಪ್ರಮಾಣದಲ್ಲಿ ನಾವು ವೆಚ್ಚ ಮಾಡುತ್ತಿರುವುದು ನಿಜವಾಗಿಯೂ ಮೆಚ್ಚತಕ್ಕಂಥ ಮಾತಲ್ಲ. ಆದರೆ ನಾವು ಮಾಡತಕ್ಕಂಥ ವೆಚ್ಚ ಯಾವ ಮಾರ್ಗದಲ್ಲಿ ಹೋಗುತ್ತಿದೆ. ಅದರ ಬಗ್ಗೆ ಗಮನಹರಿಸಬೇಕಾಗಿದೆ. ಖರ್ಚು ಮಾಡತಕ್ಕಂಥಾದ್ದು ಇಲಾಖೆಯ ಸಿಬ್ಬಂಧಿವರ್ಗ ಅಂದರೆ ಡೈರೆಕ್ಟರ್ಸ್ ಆಸಿಸ್ಟೆಂಟ್ ಡೈರೆಕ್ಟರ್ಸ್, ಇವರಲ್ಲದೆ ೪೩೪ ಜನ ಆಫೀಸರ್ಸ್, ೫೬೦ ಜನ ಅಸಿಸ್ಟೆಂಟ್ ಸರ್ಜನ್ಸ್, ಇವರುಗಳಿಗೆ ೨೪.೩೨ ಲಕ್ಷ ರೂಪಾಯಿಗಳು ಖರ್ಚುಮಾಡುತಿದ್ದಾರೆ. ಎಲ್ಲಿ ಖರ್ಚಾಗಬೇಕೋ ಅಲ್ಲಿ ಖರ್ಚಾಗುತ್ತಿಲ್ಲ. ಅಧಿಕಾರಿಗಳನ್ನು ನೇಮಿಸಿ ಆಫೀಸಿನ ಕಾಗದಪತ್ರಗಳನು ಓಡಾಡಿಸು

ವುದರಲ್ಲಿ ಹೆಚ್ಚು ಹಣ ಖರ್ಚುಮಾಡುತ್ತಿದ್ದೀರಿ. ಈ ರೀತಿಯಲ್ಲಿ ಖರ್ಚುಮಾಡಿದರೆ ದೇಶದ ಬಹು ಸಂಪತ್ತನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವೇ ಎನ್ನುವುದನ್ನು ಕೇಳಬೇಕಾಗಿದೆ. ಈ ಒಂದು ಇಲಾಖೆಗೆ ಕುರಿ, ಕೋಳಿ, ಹಂದಿ ಇತರ ಪ್ರಾಣಿಗಳ ಬೆಳವಣಿಗೆಯ ಬಗ್ಗೆ ಸಾಕಷ್ಟು ಗಮನ ಹರಿಸಿಲ್ಲ. ಈವತ್ತಿನದಿವಸ ಪರಿಸ್ಥಿತಿ ಏನಾಗಿದೆ ಇಂದರೆ ಕುರಿ, ಕೋಳಿ, ಹಂದಿ ಇವುಗಳ ಸಾಕಾಣಿಕೆಗೆ ನಿಜವಾಗಿಯೂ ಎಷ್ಟು ಪ್ರೋತ್ಸಾಹವನ್ನು ಕೊಡಬೇಕೋ ಅಷ್ಟು ಪ್ರೋತ್ಸಾಹವನ್ನು ಕೊಡುತ್ತಾ ಇಲ್ಲ. ಜೊತೆಗೆ ಹಳ್ಳಿಗಳಲ್ಲಿ ಜಾನುವಾರು ಅಭಿವೃದ್ಧಿ ಪಡಿಸಬೇಕೆಂದು ಅಪೇಕ್ಷಿಸಿದ್ದರೂ ಈ ಒಂದು ಕ್ಷೇತ್ರದಲ್ಲಿ ಲೆಕ್ಕ ನೋಡಿದರೆ ಒಂದು ಪರ್ಸೆಂಟ್‌ಕೂಡ ಇದಕ್ಕಾಗಿ ಮೀಸಲಿಟ್ಟಂತೆ ಕಾಣುತ್ತಿಲ್ಲ. ಉತ್ತಮವಾದ ಗೋವುಗಳನ್ನು ಪಡೆದು ಹಾಲನ್ನು ಉತ್ಪಾದನೆ ಮಾಡತಕ್ಕಂಥ ರೈತರಿಗೆ ಯಾವುದೇರೀತಿಯಾದ ಸಬ್‌ಸಿಡಿ, ಸಾಲಸೌಲಭ್ಯವನ್ನು ಕೊಟ್ಟಿಲ್ಲ. ಕಾನೂನುಬದ್ಧವಾಗಿ ಇಂತಿಷ್ಟು ಎಕರೆ ಭೂಮಿಯನ್ನು ರಾಸುಗಳಿಗಾಗಿ ಮೇವನ್ನು ಉತ್ಪಾದಿಸಲು ನಿಗದಿ ಮಾಡಿಲ್ಲ. ಈ ಒಂದು ದೃಷ್ಟಿಯಿಂದ ಕೃಷಿಗೆ ಪ್ರೋತ್ಸಾಹ ಕೊಟ್ಟಿಲ್ಲವೆನ್ನತಕ್ಕಂಥಾದ್ದು ಈ ಸದನಕ್ಕೆ ವ್ಯಕ್ತವಾಗುತ್ತಿದೆ. ಎಲ್ಲಕಿಂತಲೂ ಹೆಚ್ಚಾಗಿ ಸರ್ಕಾರದವರು ಏನು ಮಾಡಬೇಕಾಗಿತ್ತು, ಆ ಕೆಲಸವನ್ನು ಮಾಡಿಲ್ಲವೆಂದು ತಮ್ಮ ವರದಿಯ ಮೂಲಕವೇ ತಿಳಿಯುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಉತ್ತಮ ತಳಿಗಳ ಅಭಿವೃದ್ಧಿಗಾಗಿ ತಾವು ಯಾವುದೇರೀತಿಯಾದ ಪ್ರೋತ್ಸಾಹ ಕೊಟ್ಟಿಲ್ಲ ಎನ್ನತಕ್ಕಂಥ ವಿಚಾರವನ್ನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರಲಿಕ್ಕೆ ಇಚ್ಛೆಪಡುತ್ತೇನೆ. ಅದರಲ್ಲೂ ಮುಖ್ಯವಾದ ಅಂಶವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ಸರ್ಕಾರದವರು ೨೪ ಲಕ್ಷ ರೂಪಾಯಿಗಳನ್ನು ಈ ಒಂದು ಬಾಬಿಗೆ ಖರ್ಚುಮಾಡಲು ಕೊಟ್ಟಿದ್ದರೂ ಕೂಡ ಇಲಾಖೆಯುವರು ಸಾಕಷ್ಟು ಪ್ರಯತ್ನ ಮಾಡುತ್ತಿಲ್ಲವೆಂದು ತಿಳಿಯಬೇಕಾಗಿರುತ್ತದೆ. ತಮ್ಮ ವರದಿಯಲ್ಲಿ ಹೇಳಿರುವಂತೆ ೯೭೭--೭೮ಕ್ಕೆ ಸರ್ಕಾರ ಮತ್ತು ಈ ಸದನ ಸಾಕಷ್ಟು ಹಣವನ್ನು ಮಂಜೂರು ಮಾಡಿರುತ್ತದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಬಿಜಾಪುರ ಡಿಸ್ಟ್ರಿಕ್ಟ್‌ನಲ್ಲಿ ಡ್ರಾಟ್ ಕಮ್ಯಾಂಡ್ ಏರಿಯಾ ಎಂದು ಸರ್ಕಾರ ಮಂಜೂರು ಮಾಡಿದಂಥ ಹಣ ೨೯ ಲಕ್ಷ ರೂಪಾಯಿಗಳಲ್ಲಿ ನಿಮ್ಮ ಇಲಾಖೆಯುವರು ಎಷ್ಟು ಖರ್ಚುಮಾಡಿದ್ದಾರೆಂದರೆ ೧೨.೬೪ ಲಕ್ಷ. ಇನ್ನಿತರೆ ಜಿಲ್ಲೆಗಳಿಗೆ ಕೊಟ್ಟಿರತಕಂಥಾದ್ದು ಎಷ್ಟು ಎಂದರೆ ೭೧.೭೦ ಲಕ್ಷ ರೂಪಾಯಿಗಳಲ್ಲಿ ಇಲಾಖೆಯುವರು ಖರ್ಚುಮಾಡಿರತಕಂಥಾದ್ದು ೪೮ ಲಕ್ಷ ರೂಪಾಯಿಗಳು. ಇಂಟಿಗ್ರೇಟೆಡ್ ಪ್ರೋಗ್ರಾಮ್‌ಗಾಗಿ ೧೪.೨೦ ಲಕ್ಷ ರೂಪಾಯಿಗಳಲ್ಲಿ ಖರ್ಚುಮಾಡಿರುವುದು ೨.೪೯ ಲಕ್ಷ ರೂಪಾಯಿ. ಕಮಾಂಡ್ ಏರಿಯಾ ಪ್ರೋಗ್ರಾಮ್‌ಗಾಗಿ ೧೦.೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಖರ್ಚು ಮಾಡಿರತಕ್ಕಥಾದ್ದು ೯.೨೫ ಲಕ್ಷ ರೂಪಾಯಿಗಳು, ಲೈವ್ ಸ್ಟಾಕ ಪ್ರೊಡಕ್ಷನ್ ಇದು ಬಹಳ ಪ್ರಾಮುಖ್ಯವಾದ ಒಂದು ಪ್ರೋಗ್ರಾಮ್ ಆಗಿರುತ್ತದೆ. ಇದರಬಗ್ಗೆ ಇಲಾಖೆಯು ಸಾಕಷ್ಟು ಶ್ರಮವಹಿಸಬೇಕಾಗಿದ್ದು ಇದಕ್ಕೆ ೫೬.೪೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಖರ್ಚುಮಾಡಿರತಕ್ಕಂಥಾದ್ದು ೩೭.೬೭ ಲಕ್ಷ ರೂಪಾಯಿಗಳು. ವೆಟರಿನರಿ, ಮೆಡಿಕಲ್ ಸ್ಟೋರ್ಸ್‌ಗೆ ಸಾಕಷ್ಟು ಹಣವನ್ನು ಖರ್ಚು ಮಾಡಿಲ್ಲ. ದನಕರುಗಳು ರೋಗಪೀಡಿತವಾಗಿ ಸಾಯುತಕ್ಕಂಥಪರಿಸ್ಥಿತಿ ಇರುತ್ತದೆ. ಇದಕ್ಕಾಗಿ ೨೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಇವರು ಖರ್ಚು ಮಾಡಿರತಕ್ಕಂಥಾದ್ದು ೧೭ ಲಕ್ಷ ರೂಪಾಯಿಗಳು. ಇಷ್ಟೊಂದು ಹಣವನ್ನು ಈ ಎಲ್ಲಾ ಬಾಬುಗಳಿಗೂ ಸರ್ಕಾರದವರು ಕೊಟ್ಟಿದ್ದರೂ ಈ ಇಲಾಖೆಯುವರು ಖರ್ಚುಮಾಡದೆ ಇರುವುದನ್ನು ನೋಡಿದರೆ ಇಲಾಖೆಯು ಎಷ್ಟು ಅಸಮರ್ಥತೆಯಿಂದ ಕೆಲಸಮಾಡುತ್ತಿದೆ ಎಂಬುದು ತಿಳಿಯುತ್ತದೆ. ೧೦೦ಕ್ಕೆ ೮೫ ಜನ ಈ ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡತಕ್ಕಂಥ ಜನರು ಈ ಒಂದು ಜಾನುವಾರುಗಳ ಆಧಾರದ ಮೇಲೆಯೇ ಬದುಕಿರ ಬೇಕಾದರೆ ಈ ಇಲಾಖೆಯಲ್ಲಿ ಬೇಜವಾಬ್ದಾರಿಯಿಂದ ಕೆಲಸಮಾಡತಕ್ಕಂಥ ಅಧಿಕಾರಿಗಳ ಮೇಲೆ ಯಾವವಿಧವಾದ ಕ್ರಮವನ್ನು ತೆಗೆದುಕೊಳ್ಳದಿರುವುದು ತುಂಬಾ ಶೋಚನೀಯವಾಗಿರುತ್ತದೆ.

ಇನ್ನೊಂದು ಮುಖ್ಯವಾದ ಅಂಶವೆಂದರೆ ೧೯೭೬—೭೭ನೇ ಸಾಲಿಗೆ ಆಡಿಟರ್ ಜನರಲ್ ಆಫ್ ಇಂಡಿಯಾದವರು ಒಪ್ಪಿಸಿರತಕ್ಕಂಥ ವರದಿಯ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇದರಲ್ಲಿ ಅವರು ಮುಖ್ಯವಾದ ಅನೇಕ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಗ್ರಾಮಾಂತರದಲ್ಲಿರತಕ್ಕಂಥಾ ದನಕರುಗಳ ವ್ಯವಸ್ಥೆ ಏನು ಇದೆ ಅದರ ಬಗ್ಗೆ ಒಂದು ಪ್ರಿಲಿಮಿನರಿ ಸರ್ವೆ ಮಾಡಬೇಕು ಎನುವ ಮಾತನ್ನು ೧೯೭೨ನೇ ಇಸವಿಯಲ್ಲಿ ಕೇಳಿದ್ದಾರೆ. ಆದರೆ ಇದು ೧೯೭೬ನೇ ಇಸವಿ

ಯಲ್ಲಿ ಸರ್ವೆ ನಡೆದಿದೆ. ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಪ್ರಾಣಿಗಳು ವಾಸ ಮಾಡತಕ್ಕಂಥಾದ್ದು ಯೋಗ್ಯವಾಗಿವೆ, ಯಾವ ಯಾವ ಕ್ಷೇತ್ರಗಳಲ್ಲಿ ಯಾವಯಾವ ಥಳಿಗಳು ಇವೆ ಅವಕ್ಕೆ ಆ ಕ್ಷೇತ್ರದಲ್ಲಿ ಸಿಗೆ ತಕ್ಕಂಥಾ ಆಹಾರ ಇವುಗಳ ಬಗ್ಗೆ ಅವರು ಮಾಡಿದ ಸರ್ವೆ ೧೯೭೬ ರಲ್ಲಿ ಏನು ಮಾಡಿದರೋ ಆ ಸರ್ವೆ ಸರಿಯಾಗಿ ನಡೆದಿಲ್ಲ ಅನ್ನುವ ಮಾತನ್ನು ಕಂಟ್ರೋಲರ್ ಅಂಡ್ ಆಡಿಟರ್ ಜನರಲ್‌ರವರ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಅವರು ತಮ್ಮ ರಿಪೋರ್ಟ್‌ನಲ್ಲಿ ಯಾವ ಯಾವ ಜಾತಿ ಹೋರಿ ಇರಬೇಕು ಎಂದು ಕೇಳಿದ್ದಕ್ಕೆ ಅದಕ್ಕೆ ಇವರು ವಿವರಣೆ ಕೊಟ್ಟಿಲ್ಲಾ. ಮತ್ತು ಯಾವ ಹೋರಿಗಳು ಬೆಳಕಿಗೆ ಬರುತ್ತದೆ ಮತ್ತು ಯಾವ ಹೋರಿಗಳಲ್ಲಿ ತಳಿ ಇರಬೇಕಾಗಿತ್ತು ಎನ್ನುವ ಬಗ್ಗೆ ವಿವರಣೆ ಕೇಳಿದ್ದಾರೆ ಇದಕ್ಕೂ ಕೂಡ ವಿವರಣೆ ಕೊಟ್ಟಿಲ್ಲ. ಇನ್ನೊಂದು ಕೆಲಸ ಏನ್ನು ಮಾಡಿದ್ದಾರೆ ಎಂದರೆ ಈ ವೀರ್ಯ ಸಂಗ್ರಹಣೆಗೆ ಬೆಂಗಳೂರಿನಲ್ಲಿ ಒಂದು ಪ್ರಾಜೆಕ್ಟ್ ಮಾಡಿದ್ದಾರೆ. ಇಲ್ಲಿ ೨೧ ಹೋರಿಗಳು ಇತ್ತು, ಆ ೨೧ ಹೋರಿಗಳಲ್ಲೂ ಸಹ ವೀರ್ಯ ಕೊಡುವ ಶಕ್ತಿ ಇಲ್ಲ ಎಂದು ತಿಳಿದುಕೊಂಡಿದ್ದೇನೆ ಏಕೆಂದರೆ ಡ್ಯೂ ಟು ಲ್ಯಾಕ್ ಆಫ್ ಲಿಬ್ಡೋ. ಆದುದರಿಂದ ಈ ೨೧ ಹೋರಿಗಳನ್ನೂ ಸಹ ಮಾರಿದ್ದಾರೆ. ಆದರೆ ಯಾರಿಗೆ ಮಾರಿದ್ದಾರೋ ಗೊತ್ತಿಲ್ಲ. ಇವರಿಗೆ ಇದರಲ್ಲಿ ವೀರ್ಯ ಸಂಗ್ರಹಣೆ ಮಾಡಿರುವುದು ನೋಡಿದರೆ ೦.೫೬ ಲಕ್ಷ, ಇದಕ್ಕೆ ಖರ್ಚು ಮಾಡಿ ರುವುದನ್ನು ನೋಡಿದರೆ ೬.೬ ಲಕ್ಷ ರೂಪಾಯಿ ಇದಕ್ಕೆ ಇಷ್ಟು ದುಡ್ಡನ್ನು ವ್ಯರ್ಥ ಮಾಡಿದ್ದಾರೆ ಇದು ಡಿಸ್‌ರಿಕಾರ್ಡೆಡ್ ಆಸ್ ಯೂಸ್‌ಲೆಸ್.

ಇನ್ನು ದನಗಳ ಹುಲ್ಲಿ ಗೋಸ್ಕರ ಮತ್ತು ಪಂಪ್‌ಸೆಟ್ಸ್ ಮತ್ತು ಬಾವಿಗಳಿಗೋಸ್ಕರ ಇವರು ೬.೧೫ ಲಕ್ಷ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿದೆ. ಅದರಲ್ಲಿ ೫.೩೬ ಲಕ್ಷ ರೂಪಾಯಿ ಲೋನ್ ಕೊಟ್ಟಿದ್ದಾರೆ. ಇದ್ನು ೦.೮೦ ಅಷ್ಟು ಸಬ್ಸಿಡಿ ಕೊಟ್ಟಿದ್ದಾರೆ. ಇದಕ್ಕೆ ವಿವರಣೆ ಕೇಳಿದ್ದಾರೆ ಅದಕ್ಕೂ ವಿವರಣೆ ಕೊಟ್ಟಿಲ್ಲಾ. ಹಳ್ಳಿಯಲ್ಲಿ ಎಷ್ಟು ಬಾವಿ ತೆಗೆದರು ಎಷ್ಟು ಪಂಪುಸೆಟ್ಸ್ ಹಾಕಿದರು ಅಂತ ಕೇಳಿದ್ದಾರೆ. ಅದಕ್ಕೂ ಸಹ ವಿವರಣೆ ಕೊಟ್ಟಿಲ್ಲಾ. ಇನ್ನು ಈ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ ೫ ಪವರ್ ಗ್ರಾಸ್ ಕಟರ್ಸ್‌ಗೆ ೦.೨೫ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇದರಲ್ಲಿ ಅಡ್ಮಿನಿಸ್ಟ್ರೇಷನ್‌ಗೆ ಸ್ವಲ್ಪ ಖರ್ಚು ಮಾಡಿದ್ದಾರೆ. ಇದರಲ್ಲಿ ಎರಡನ್ನು ಸೊಸೈಟಿಗೆ ಕೊಟ್ಟಿದ್ದಾರೆ. ಇದು ೧೦ ಸಹಸ್ರ ಬೆಲೆ ಬಾಳ ತಕ್ಕಂಥಾ ಗ್ರಾಸ್ ಕಟರ್ಸ್. ಇನ್ನು ೨ ಗ್ರಾಸ್ ಕಟರ್ಸ್ ೧೨ ವರ್ಷದಿಂದಲೂ ಕೂಡ ಐಡಲ್ ಆಗಿ ಬಿದ್ದಿದೆ. ಇದನ್ನು ಯೋಚನೆ ಮಾಡಿಲ್ಲಾ. ಹಾಗೆಯೇ ಇನ್ನು ೩ ಕೇನ್ ಕ್ರಷರ್ ಕಟರ್ಸ್ ತೆಗೆದುಕೊಂಡಿದ್ದಾರೆ. ಇದಕ್ಕೆ ೦.೧೯ ಲಕ್ಷ ಖರ್ಚು ಮಾಡಿದ್ದಾರೆ. ಇದರಲ್ಲಿ ಎರಡು ೧೧ ವರ್ಷದಿಂದಲೂ ಕೂಡ ಐಡಲ್ ಆಗಿದೆ. ಈಗ ನಾನು ಹೇಳುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಈ ವಿಷಯ ಪತ್ರಿಕೆಯಲ್ಲೂ ಸಹ ಬಂದಿದೆ. ಇಡೀ ಭಾರತದೊಳಗೆ ಕೇವಲ ಈ ಇಂಜನಿಯರಿಂಗ್ ಇಂಡಸ್ಟ್ರೀಸ್‌ಗೆ ೬೮೦೦ ಕೋಟಿ ರೂಪಾಯಿಗಳನ್ನು ಹಾಕಿದ್ದಾರೆ. ಅದರಲ್ಲಿ ೨೫೦೦ ಕೋಟಿರೂಪಾಯಿಗಳಷ್ಟು ಮೆಟೀರಿಯಲ್ಸ್ ಎಕ್ಸಲರಿ ಸ್ಪೇರ್ ಪಾರ್ಟ್ಸ್ ಆಗಿ ಉಳಿದಿದೆ. ಹೀಗೆ ಒಂದೊಂದು ಇಲಾಖೆಯಲ್ಲೂ ಸಹ ನೋಡಿದರೆ ಕೋಟ್ಯಾಂತರ ರೂಪಾಯಿ ವಸ್ತುಗಳು ನೀರಸವಾಗಿ ಬಿದ್ದರೆ ಈ ದೇಶದ ಹಣ ದುರುಪಯೋಗ ಮಾಡಿದಂತಾಗುತ್ತದೆ. ಇಷ್ಟು ಅಂಶಗಳನ್ನು ಅವರು ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಅಧ್ಯಕ್ಷರಾದ ಶ್ರೀ ದೇವೇಗೌಡರು ಕೂಡ ಸುಮಾರು ೭೫ ರಲ್ಲಿ Public Accounts Committeeಯ ವರದಿ ಕೊಟ್ಟಿದ್ದಾರೆ. ಈ ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನಲ್ಲಿ ಏನೇನು ಅನ್ಯಾಯವಾಗಿದೆ ಅನ್ನುವುದನ್ನೂ ಸಹ ಅವರು ಹೇಳಿದ್ದಾರೆ. ಈ ಇಲಾಖೆಯಲ್ಲಿ ೧೯೭೨—೭೩ರಲ್ಲಿ ೪.೭೦ ಲಕ್ಷಕ್ಕೆ ೪.೪೦ ಲಕ್ಷ ರೂಪಾಯಿ ಖರ್ಚು ಮಾಡಿದ್ದಕ್ಕೆ ಮಾತ್ರ ಲೆಕ್ಕ ಇದೆ ಉಳಿದುದಕ್ಕೆ ಲೆಕ್ಕ ಇಲ್ಲ. ಹಾಗೆಯೇ ೧೯೭೩—೭೪ ರಲ್ಲಿ ೪.೪೩ ಲಕ್ಷ ರೂಪಾಯಿ ಖರ್ಚು ಮಾಡಿದ್ದಕ್ಕೆ ೩.೭೯ ಲಕ್ಷ ರೂಪಾಯಿಗೆ ಮಾತ್ರ ಲೆಕ್ಕ ಇದೆ ಉಳಿದುದಕ್ಕೆ ಲೆಕ್ಕ ಇಲ್ಲ. ಇದು ಬಹಳ ಗಮನಾರ್ಹವಾದಂಥಾ ವಿಷಯ. ಅದು ಯಾವುದೆಂದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ೫೯೦ ಪುಟಗಳ ಒಂದು ವರದಿಯನ್ನು ಇವರು ಏನೇನು ತಪ್ಪು ಮಾಡಿದ್ದಾರೆ ಎನ್ನುವುದರ ಬಗ್ಗೆ ಕೊಟ್ಟಿದ್ದಾರೆ ಆ ಬಗ್ಗೆ ಇದುವರೆಗೂ ಕೂಡ ಸರ್ಕಾರ ಗಮನಕ್ಕೆ ತೆಗೆದುಕೊಂಡಿಲ್ಲ ಅಂತ ಕಾಣುತ್ತದೆ. ಈ ವರದಿ ಎಲ್ಲಿದೆಯೋ ಏನೋ ಯಾರಿಗೆ ಗೊತ್ತು ? ಇದು ಏನಾಗುತ್ತದೆ ಎಂದರೆ ಇವರು ಮಾಡಿರುವ ತಪ್ಪುಗಳನ್ನು ಅವರು ತಮ್ಮ ವರದಿಯಲ್ಲಿ ಏದು ಸೂಚಿಸಿದ್ದಾರೆ ಆ ಬಗ್ಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೋ ಇಲ್ಲವೋ, ಅಥವಾ ಅದನ್ನು ಸರಿಪಡಿಸುತ್ತಾರೋ ಇಲ್ಲವೋ ಅನ್ನುವುದರ ಬಗ್ಗೆ ನಾವು ಗಮನಿಸಬೇಕಾಗಿದೆ.

ಬಗ್ಗೆ ನಾವು ಹೇಳಬೇಕಾದರೆ ನಾವು ಇಷ್ಟೇನೋ ಚಪಲಕ್ಕೆ ಹೇಳುತ್ತೇವೆ, ನೀವೇನೋ ಇಲ್ಲಿ ಗ್ರಹಚಾರಕ್ಕೆ ಕೇಳುತ್ತಿದ್ದೀರಿ ಕೊನೆ ಕೊನೆಗೆ ಇದು ವೆಂಕಟರಮಣ ಗೋವಿಂದೋ ಗೋವಿಂದ ಅಂದ ಹಾಗೆ ಹಾಗುತ್ತದೆ. ಆರೀತಿ ಆಗಬಾರದು ಅನ್ನುವುದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ.

ಇನ್ನು ಕೊನೆಯದಾಗಿ ಡೈರಿ ಬಗ್ಗೆ ಒಂದು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಈ ಡೈರಿ ಏನಾಗಿದೆ ಎಂದರೆ ಸೆಂಟರ್ಸ್ ಆಫ್ ಕರಪ್ಷನ್ ಆಗಿದೆ. ಎಷ್ಟು ಹಾಲು ಎಲ್ಲಿಗೆ ಹೋಗುತ್ತದೆ. ಅದು ಏನಾಗುತ್ತದೆ ಅನ್ನುವುದು ಯಾರಿಗೂ ಗೊತ್ತಿಲ್ಲ. ನಾವು ಇಲ್ಲಿರತಕ್ಕಂಥ ಲೆಜಿಸ್ಲೇಚರ್‌ನವರೇ ದುಡ್ಡು ತೆಗೆದುಕೊಂಡು ಹಾಲಿಗೆ ಹೋದರೆ ಅಲ್ಲಿ ಹಾಲೂ ಇರುವುದಿಲ್ಲ, ಮೊಸರೂ ಇರುವುದಿಲ್ಲ. ಅಲ್ಲದೇ ಎಷ್ಟೋ ಮಂತ್ರಿಗಳು ಈ ಹಾಲಿಗೆ ದುಡ್ಡನ್ನೂ ಕೊಟ್ಟಿಲ್ಲ ಎಂದು ಕೇಳಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅನುಭವ ಇದೆಯೋ ಇಲ್ಲವೊ ಗೊತ್ತಿಲ್ಲ. ಸಾಮಾನ್ಯವಾಗಿ ಈ ಒಂದು ಡೈರಿಯಲ್ಲಿ ಕೆಲಸ ಮಾಡುವವರಿಗೆ ಇದರ ಒಂದು ಅನುಭವ ಯಾರಿಗೆ ಇರುತ್ತದೆ ಎಂದರೆ ಯಾರು ದನಕರುಗಳನ್ನು ಕಟ್ಟಿಕೊಂಡು ಹುಲ್ಲನ್ನು ಹಾಕಿ ಮೇಯಿಸಿ ಇರುತ್ತಾರೋ ಅಂಥವರಿಗೆ ಇದರ ವ್ಯವಹಾರಗಳು ಚೆನ್ನಾಗಿ ಗೊತ್ತಿರುತ್ತದೆ. ಈವಾಗ ಈ ಡೈರಿಯ ವ್ಯವಹಾರವನ್ನು ನಡೆಸತಕ್ಕಂಥವರು ಯಾರು ಒಬ್ಬರು ಐ.ಎ.ಎಸ್. ಆಫೀಸರು ಇದನ್ನು ನಡೆಸುತ್ತಾ ಇದ್ದಾರೆ. ನಿಮ್ಮ ಗಮನಕ್ಕೆ ತರುವುದಾದರೆ ನಾನು ಐ.ಎ.ಎಸ್. ಆಫೀಸರ್ಸ್ ಅಂತ ಹೇಳುವುದಿಲ್ಲ, ಇಂಡಿಯನ್ Ants service ಅಂತ ಹೇಳಬೇಕಾಗಿದೆ. ಅವರಿಗೆ ಹಸುವಿನ ಅನುಭವ, ಹಾಲಿನ ಅನುಭವ, ಹುಲ್ಲಿನ ಅನುಭವ ಏನು ಗೊತ್ತಾಗುತ್ತದೆ. ಯಾರು ಹಸುವನ್ನು ಕಟ್ಟಿಕೊಂಡು ಹುಲ್ಲು ಹಾಕಿಕೊಂಡು ಹಾಲು ಕರೆಯುತ್ತಾನೋ ಅಂಥವರನ್ನು ಇದಕ್ಕೆ ಅಧಿಕಾರಿಗಳಾಗಿ ಹಾಕಬೇಕು. ಹಳ್ಳಿಯಲ್ಲಿ ರೈತನ ಮಗನಾಗಿ ಹುಟ್ಟಿದಂಥಾ ಮಗನಿಗೆ ಇದರ ಅನುಭವ ಇರತಕ್ಕಂಥವನಿಗೆ ಈ ಒಂದು ಅಧಿಕಾರ ಕೊಡುವುದು ಮುಖ್ಯ ಎಂದು ನಾನು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನೊಂದು ವಿಷಯ ತಾವು ಬಹಳ ಮುಖ್ಯವಾಗಿ ಗಮನಿಸಬೇಕಾದುದು ಏನೆಂದರೆ ರಾಜ್ಯದಲ್ಲಿ ಗೋ ಸಂಖ್ಯೆಯನ್ನು ಅಭಿವೃದ್ಧಿ ಮಾಡಬೇಕೆಂದು ಬ್ಯಾಂಕ್‌ನಲ್ಲಿ ಸಾಲ ಕೊಡುತ್ತಿದ್ದಾರೆ. ಇದು ಸರಿಯಾಗಿ ಮಾಡಿದ್ದರೆ ಗೋ ಅಭಿವೃದ್ಧಿ ಏನೋ ಆಗುತ್ತಿತ್ತು. ಕೆಲವರು ಹಸುಗಳು ಸಿಕ್ಕುತ್ತದೆ ಎಂದು ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದಾರೆ. ಇದರಲ್ಲಿ ಕೆಲವರು ಪ್ರಭಾವಿತರಾದ ವ್ಯಕ್ತಿಗಳು ಸೇರಿಕೊಂಡು ಅವರಿಗೆ ಸಾಲ ಕೊಡಿಸಿದ್ದಾರೆ. ದಳ್ಳಾಳಿಗಳು ಇದಕ್ಕೆ ಮಧ್ಯವರ್ತಿಗಾರರಾಗಿ ಸೇರಿದ್ದಾರೆ. ಆ ರೈತ ಹಸುವನ್ನು ತೆಗೆದುಕೊಂಡು ಅದು 6 ತಿಂಗಳಿನಲ್ಲೇ ಸತ್ತು ಹೋದರೆ ಆ ರೈತನ ಗತಿ ಏನಾಗಬೇಕು ಅನ್ನುವುದನ್ನು ತಾವು ಯೋಚನೆ ಮಾಡಿ. ಅದಕ್ಕೆ ನಾನು ಹೇಳುವುದು ಏನೆಂದರೆ ಕ್ಯಾಟಲ್ ಇನ್‌ಷೂರೆನ್ಸ್ ಮಾಡುವ ಒಂದು ಪದ್ಧತಿಯನ್ನು ತಾವು ಜಾರಿಗೆ ತರಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನನ್ನ ಎರಡನೇ ಸಲಹೆ ಏನೆಂದರೆ ಆ ದನಕರುಗಳು ಮಾರಾಟವಾಗುತ್ತಾ ಇರುವುದು ಎಲ್ಲರಿಗೂ ಗೊತ್ತಿದೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಎಂತಹ ದನಕರುಗಳು ಮಾರಾಟವಾಗುತ್ತದೋ ಯಾರಿಗೂ ಗೊತ್ತಿಲ್ಲ. ಆದರೆ ಇದರ ಬಗ್ಗೆ ನನ್ನ ಸಲಹೆ ಏನೆಂದರೆ ಇದರ ಬಗ್ಗೆ ತಜ್ಞರ ಒಂದು ಅಭಿಪ್ರಾಯ ಪಡೆದು ರೆಗ್ಯುಲೇಟೆಡ್ ಮಾರ್ಕೆಟ್ ಮೂಲಕ ತಜ್ಞರ ಸಲಹೆಯಂತೆ ಈ ದನಕರುಗಳನ್ನು ಮಾರುವಂಥಾ ಒಂದು ಅವಕಾಶವನ್ನು ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಸ್ಲಾಟರ್ ಹೌಸಸ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಈ ಕೆಲಸವನ್ನು ಹಳ್ಳಿಯಲ್ಲಿ ಮಾಡುತ್ತಾ ಇದ್ದಾರೆ. ದೇಶದಲ್ಲಿ ಇದನ್ನು ತಪ್ಪಿಸಬೇಕಾದುದು ಮುಖ್ಯ. ಒಂದು ಸಾರಿ ಅಭಾವ ಪರಿಸ್ಥಿತಿ ಬಗ್ಗೆ ಚರ್ಚೆ ಬಂದಾಗ ಮಾನ್ಯ ಮಂತ್ರಿಗಳು ದನದ ಮಾಂಸವನ್ನು ತಿನ್ನಿ ಎಂದು ಹೇಳಿದರು. ಅದರ ಬಗ್ಗೆ ಈಗ ಚರ್ಚೆ ಬೇಡ.

ಮೈಸೂರಿನ ವಿದ್ಯಾರಣ್ಯಪುರದಲ್ಲಿರುವ ಹರಿಜನ ಕೇರಿಗಳ ಮಧ್ಯೆ ಕಸಾಯಿಖಾನೆ ಮಾಡಲಿಕ್ಕೆ ಪ್ರಯತ್ನ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಆದಷ್ಟು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಹಾಲಿನ ಅಭಿವೃದ್ಧಿ ಮತ್ತು ಡೇರಿಯ ಅಭಿವೃದ್ಧಿ ಮಾಡುವ ಹೆಸರಿನಲ್ಲಿ ಅನೇಕ ಅಚಾತುರ್ಯಗಳು ನಡೆಯುತ್ತಿವೆ. ಮೈಸೂರಿನಲ್ಲಿ ಹಾಲಿನ ಉತ್ಪಾದಕರ ಒಕ್ಕೂಟ ಎನ್ನುವ ಸಂಸ್ಥೆಯೊಂದನ್ನು ಮಾಡಿಕೊಳ್ಳಲಾಗಿದೆ. ಪ್ರತಿ ಗ್ರಾಮಗಳಿಗೂ ಅಲ್ಲಿನ ಪ್ರಭಾವೀ ವ್ಯಕ್ತಿಗಳು ಹೋಗಿ ಎರಡೆರಡು ಸಾವಿರ

ರೂಪಾಯಿಗಳನ್ನು ಸಂಗ್ರಹ ಹೂಡಿ ಆ ಸಂಸ್ಥೆಯಲ್ಲಿ ಠೇವಣಿ ಇಡಲಾಯಿತು. ಹಣ ಸಂಗ್ರಹ ಮಾಡಿ ಮೂರು–ನಾಲ್ಕು ವರ್ಷಗಳಾದರೂ ಆ ಸಂಘ ಇದುವರೆವಿಗೂ ಯಾವ ಕೆಲಸವನ್ನೂ ಮಾಡಿಲ್ಲ. ಆ ಹಣ ಏನಾಗಿದೆ ಎನ್ನುವುದು ಯಾರ ಗಮನಕ್ಕೂ ಬಂದಿಲ್ಲ. ಈ ಬಗ್ಗೆ ನಾನೊಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ, ನಿಯಮ ೩೧೨ರ ಕೆಳಗೂ ಒಂದು ಸೂಚನೆಯನ್ನು ಕಳುಹಿಸಿದ್ದೆ. ಆದರೆ, ಕೆಳಗೂ ವೆಂಕಟರಮಣಸ್ವಾಮಿ, ಮೇಲೂ ವೆಂಕಟರಮಣಸ್ವಾಮಿ! ಒಂದಕ್ಕೂ ಉತ್ತರ ಬರಲಿಲ್ಲ. ತಿರುಪತಿ ವೆಂಕಟರಮಣಸ್ವಾಮಿಗೆ ಹಾಕಿದ ಹರಕೆ ಕಾಸು ವಾಪಸ್ಸು ಬರುತ್ತದೆಯೇ ? ಹಾಗೇ ನನ್ನ ಪ್ರಶ್ನೆಗೂ ಇದೇ ಗತಿಯಾಗಿದೆ.

೧–೦೦ ಪಿ.ಎಂ.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಮಾನ್ಯ ಸದಸ್ಯರು ವಿವರ ಕೊಟ್ಟರೆ, ನಾನು ಪರಿಶೀಲನೆ ಮಾಡಲು ಅನುಕೂಲವಾಗುತ್ತದೆ.

ಶ್ರೀ ಹೆಚ್. ಗಂಗಾಧರನ್.—ಆ ಸಂಸ್ಥೆಯ ಬಗ್ಗೆ ಸರ್ಕಾರದವರು ಗಮನ ಹರಿಸಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ಎರಡು ಕೋಟಿ ಪ್ರಾಣಿಗಳಿವೆ ಎಂದು ಹೇಳಲಾಗಿದೆ. ಈ ಎರಡು ಕೋಟಿ ಪ್ರಾಣಿಗಳು ಉತ್ತಮವಾಗಿ ಬದುಕಬೇಕೆಂಬ ಆಶಯವಿದ್ದರೆ, ಕೈಗಾರಿಕೆ ಮತ್ತು ನೀರಾವರಿ ಬಾಬುಗಳಿಗಾಗಿ ನಾವು ಯಾವ ಪ್ರಮಾಣದಲ್ಲಿ ಗಮನ ಕೊಡುತ್ತೇವೆ ಅದೇ ಪ್ರಮಾಣದಲ್ಲಿ ಈ ಪ್ರಾಣಿಗಳಿಗೆ ಎಲ್ಲ ರೀತಿಯ ಸವಲತ್ತನ್ನೂ ಒದಗಿಸುವ ಕಡೆ ಗಮನ ಕೊಡಬೇಕು. ಅಲ್ಲದೆ, ಆಡಿಟರ್ ಜನರಲ್ ಅವರು ಕೊಟ್ಟಿರು ವರದಿ ಮತ್ತು ಮಾನ್ಯ ದೇವೇಗೌಡರ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯಲ್ಲಿ ನಮೂದಾಗಿರುವ ಅಂಶಗಳ ಬಗ್ಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಡೇರಿ ಅಭಿವೃದ್ಧಿ ಮತ್ತು ಪಶುಸಂಗೋಪನಾ ಇಲಾಖೆಯು ಸ್ವಯಂಪೂರ್ಣ ಇಲಾಖೆಯಾಗಿ, ಅದರಿಂದ ದೇಶದ ಸಂಪತ್ತು ಹೆಚ್ಚಲು ಅನುಕೂಲವಾಗಲಿ, ಈ ಇಲಾಖೆಗೆ ಕೊಟ್ಟಿರುವ ಹದಿನಾಲ್ಕು ಕೋಟಿ ರೂಪಾಯಿಗಳು ಕಟ್ ಮೋಷನ್ ಆಗದೆ ಗೆಟ್ ಮೋಷನ್ ಆಗಲಿ ಎಂದು ಹಾರೈಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಉಪಾಹಾರಕ್ಕಾಗಿ ಸಭೆಯು ಎದ್ದು ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸೇರುವುದು.

***The House rose for lunch at Two Minutes past One of the Clock and reassembled at Five Minutes past Three of the Clock.***

[ MR. SPEAKER in the Chair. ]

† ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ ಈ ದಿನ ಅನಿಮಲ್ ಹಸ್ಬೆಂಡರಿ ಮತ್ತು ವೆಟರ್‌ನರಿ ಸರ್ವೀಸ್ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಈ ಇಲಾಖೆ ರೈತರ ಹಿತದೃಷ್ಟಿಯಿಂದ ಬಹಳ ಮುಖ್ಯವಾದುದು. ನಮ್ಮ ದೇಶದಲ್ಲಿ ನಾನು ಕೇಳಿರುವಂತೆ ಒಂದು ಕೋಟಿ ೪೫ ಲಕ್ಷ ಪಶು ಸಂಪತ್ತು, ದನಗಳ ಸಂಪತ್ತು ಇದೆ. ಆದರೆ ಅವುಗಳನ್ನು ಅಷ್ಟಾಗಿ ನಿಗಾ ತೆಗೆದುಕೊಳ್ಳದೇ ಇರುವುದರಿಂದ ನಮ್ಮ ಪಶು ಸಂಪತ್ತು ಏನಿದೆ ಅದು ಬಹಳ ಕೆಳಮಟ್ಟಕ್ಕೆ ಹೋಗುತ್ತಿದೆ. ಇವೊತ್ತು ನಮ್ಮ ದೇಶದಲ್ಲಿ ಅನೇಕ ಕಡೆ ವೆಟರ್‌ನರಿ ಡಿಸ್ಪೆನ ರಿಗಳು, ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್‌ಗಳು ಇವೆ. ವೆಟರ್‌ನರಿ ಡಿಸ್ಪೆನ್ಸರಿಗಳಲ್ಲಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರುಗಳಲ್ಲಿ ತಳಿಯ ಅಭಿವೃದ್ಧಿಯ ಬಗ್ಗೆ ಕೆಲಸಗಳು ಆಗುತ್ತಾ ಇಲ್ಲ. ಹೀಗಾದರೆ ನಮ್ಮ ದೇಶದಲ್ಲಿ ೧,೪೫,೦೦,೦೦೦ ರಾಸುಗಳು ಇದ್ದರೂ ಕೂಡ ಹಸು ಎಮ್ಮೆಗಳು ೨೦ ಲಕ್ಷದವರೆಗೂ ಇರಬಹುದು. ಇವುಗಳಲ್ಲಿ ಹಾಲು ಎಷ್ಟು ಉತ್ಪನ್ನವಾಗುತ್ತದೆ ಎಂಬುದನ್ನು ನೋಡಿದರೆ ಬಹಳ ಮಟ್ಟಿಗೆ ಒಂದು ಊರಿನಲ್ಲಿ ಒಂದು ಸಾವಿರ ದನಗಳು ಇದ್ದರೆ ಒಂದು ನೂರು ಲೀಟರ್ ಮೇಲೆ ಹಾಲು ಉತ್ಪಾದನೆಯಾಗುವುದಿಲ್ಲ. ೨೫ ರಾಸುಗಳು ಇದ್ದರೆ ಅದರಲ್ಲಿ ೧೦ ರಾಸುಗಳು ಹಾಲು ಕೊಡುತ್ತವೆ. ಅವುಗಳಿಂದ ೫ ಲೀಟರ್ ಹಾಲೂ ಕೂಡ ಆಗುವುದಿಲ್ಲ. ಆದರೂ ಸಹ ಪಶುಸಂಪತ್ತನ್ನು

ಅಭಿವೃದ್ಧಿ ಮಾಡಿಲ್ಲ. ಹೀಗಾಗಿ ನಮ್ಮ ದೇಶದಲ್ಲಿ ಹಾಲಿನ ಕೊರತೆ ಬಹಳವಾಗಿದೆ. ಈ ಕೊರತೆಯನ್ನು ಹೋಗಲಾಡಿಸುವುದಕ್ಕೆ ಅಷ್ಟಾಗಿ ಯಾರೂ ನಿಗಾ ತೆಗೆದುಕೊಳ್ಳುತ್ತಾ ಇಲ್ಲ. ಹಸುಗಳನ್ನು ಎಮ್ಮೆಗಳನ್ನೂ ಮನೆಯಿಂದ ಹೊರಗಡೆ ಮೇಯುವುದಕ್ಕೆ ಬಿಟ್ಟು ಅವು ಮನೆಗೆ ಬಂದಮೇಲೆ ಅವುಗಳಿಂದ ಹಾಲನ್ನು ಕರೆಯುವುದಕ್ಕೆ ಹೋಗುತ್ತಾರೆಯೇ ವಿನಾ ಅವುಗಳಿಗೆ ಮನೆಯಲ್ಲಿ ಹುಲ್ಲು ಇದೆಯೋ ಇಲ್ಲವೇ ಎಂಬುದನ್ನು ನೋಡುವುದಿಲ್ಲ. ಯೋಚನೆ ಮಾಡುವುದಿಲ್ಲ. ಸರ್ಕಾರದವರೂ ಕೂಡ ಫಾರಡ್ ಡೆವಲಪ್ ಮಾಡುವುದಕ್ಕೆ ಹುಲ್ಲನ್ನು ಬೆಳೆಸುವುದಕ್ಕೆ ಅಷ್ಟಾಗಿ ಸರ್ಕಾರದವರೂ ನಿಗಾ ತೆಗೆದುಕೊಳ್ಳುತ್ತಾ ಇಲ್ಲ. ಇದರ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಅದು ಏನೆಂದರೆ ಎಲ್ಲೆಲ್ಲಿ ನೀರಾವರಿಯಾಗಿದೆ ಅಲ್ಲೆಲ್ಲಾ ಸರ್ಕಾರದವರು ಸುಮಾರು ೧೦೦ ಎಕರೆಯಲ್ಲಿ ಹುಲ್ಲನ್ನು ಬೆಳೆದು ಅದನ್ನು ರೈತರಿಗೆ ಮಾರಾಟ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ತಾಲ್ಲೂಕುಗಳಲ್ಲಿ ಅದನ್ನು ಮಾರಾಟ ಮಾಡುವುದಕ್ಕೆ ವ್ಯವಸೆ ಮಾಡಬೇಕು. ಸರ್ಕಾರದವರು ಆ ರೀತಿ ಮಾಡಿದರೆ ಜನಗಳಿಗೂ ಕೂಡ ಹುಲ್ಲು ಬೆಳೆಯಬೇಕೆಂಬ ಆಶೆ ಬರುತ್ತದೆ. ರೈತರು ಹೇಗೆ ಹುಲ್ಲನ್ನು ಬೆಳೆಸಬೇಕು ಎಂಬುದನ್ನು ಹೇಳಿಕೊಟ್ಟು ಅವರಿಗೆ ಹುಲ್ಲು ಬೀಜ ಸಿಡ್ಲಿಂಗ್ ಸರ್ಕಾರದವರು ರೈತರಿಗೆ ಒದಗಿಸಬೇಕು. ಈಗ ನಮ್ಮ ರಾಜ್ಯದಲ್ಲಿ ಅಜ್ಜಂಪುರದಲ್ಲಿ ಬೇಸಾಯಕ್ಕೆ ಉಪಯೋಗಿಸುವ ಕರುಗಳು ಹುಟ್ಟುತ್ತವೆ. ನಮ್ಮ ದೇಶದಲ್ಲಿ ಈಗಾಗಲೇ ಜಮೀನುಗಳನು ಹಂಚಿರುತ್ತಾರೆ. ಆದ್ದರಿಂದ ಇನ್ನು ಮುಂದೆ ಜಮೀನು ಉಳುಮೆ ಮಾಡುವುದಕ್ಕೆ ಟ್ರ್ಯಾಕ್ಟರ್ ಬೇಕಾಗುವುದಿಲ್ಲ. ಅದಕ್ಕಾಗಿ ಅಮೃತ್ ಮಹಲ್ ತಳಿ ಏನಿದೆ ಅದನ್ನು ಹೆಚ್ಚು ಹೆಚ್ಚು ಅಭಿವೃದ್ಧಿ ಮಾಡಬೇಕು. ಅದನ್ನು ಮಾಡದೆ ಹೋದರೆ ಬೇಸಾಯಕ್ಕೆ ಕನಿಷ್ಟ ದರ್ಜೆಯ ತಳಿಗಳು ಸಿಕ್ಕುತ್ತದೆ. ವ್ಯವಸಾಯಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರುಗಳನ್ನು ತೆರೆದು ತಳಿ ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಮುಖಾಂತರ ತಳಿಯನ್ನು ಅಭಿವೃದ್ಧಿ ಮಾಡುವ ಬಗ್ಗೆ ನಾವು ನಿರೀಕ್ಷಿಸಿದಷ್ಟು ಅಭಿವೃದ್ಧಿಯಾಗಿಲ್ಲ. ನಮ್ಮ ರಾಜ್ಯದಲ್ಲಿ ಹಸು ಮತ್ತು ಎಮ್ಮೆಗಳು ಸಂಖ್ಯೆ ಮತ್ತು ತಳಿಯ ಅಭಿವೃದ್ಧಿ ಸಾಕಷ್ಟು ಸಂಖ್ಯೆಯಲ್ಲಿ ಆಗಿಲ್ಲ. ಹಸು ಮತ್ತು ಎಮ್ಮೆಗಳಿಗೆ ೨ ಲಕ್ಷ ೫೦ ಸಾವಿರ ದನಗಳಿಗೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಇನ್‌ಜಂಕ್ಷನ್ ಮಾಡಿದ್ದರೂ ಕೂಡ ಅದರಲ್ಲಿ ಜಯಪ್ರದವಾಗಿರುವುದು ೬೦ ಸಾವಿರ ಸಂಖ್ಯೆ ಮಾತ್ರ. ಹೀಗೆ ಮಾಡುತ್ತಾ ಹೋದರೆ ನಮ್ಮ ದೇಶದಲ್ಲಿರತಕ್ಕ ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

ಇನ್ನು ಡೈರಿ ಡೆವಲಪ್‌ಮೆಂಟ್ ಬಗ್ಗೆ ಧಾರವಾಡ, ಬೆಳಗಾಮ್, ಗುಲ್ಬರ್ಗಾ ಮತ್ತು ಮಂಗಳೂರು ಮತ್ತು ಶಿವಮೊಗ್ಗಾದಲ್ಲಿ ಡೈರಿ ಸೆಂಟರುಗಳನ್ನು ಮಾಡಿದ್ದಾರೆ. ಹಳ್ಳಿಗಳಲ್ಲಿ ಕೂಡ ಡೈರಿಯವರು ಹಾಲನ್ನು ಶೇಖರಣೆ ಮಾಡಿಕೊಂಡು ಹೋಗುತ್ತಾರೆ. ಆದರೆ ಹಾಲನ್ನು ಶೇಖರಣೆ ಮಾಡಿಕೊಂಡು ಹೋಗುತ್ತಾರೆಯೇ ಹೊರತು ಹಾಲನ್ನು ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತಾ ಇಲ್ಲ. ಹಸುಗಳನ್ನು ಸಾಕಿ ಹಾಲನ್ನು ಉತ್ಪನ್ನ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನೊಂದು ವಿಷಯವೇನೆಂದರೆ ಜರ್ಸಿಜಾತಿಯ ಕರುಗಳನ್ನು ಅಭಿವೃದ್ಧಿ ಮಾಡಿ ಅವುಗಳನ್ನು ರೈತರಿಗೆ ಒಂದು ಕರುವಿಗೆ ೩೦೦ ರೂಪಾಯಿಗಳಂತೆ ಮಾರಾಟ ಮಾಡಬೇಕು. ಆ ರೀತಿ ಮಾಡಿದರೆ ಅವರು ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುತ್ತದೆ.

ವಿಲೇಜ್ ಪಂಚಾಯಿತ್ ಫಂಡ್‌ನಲ್ಲಿ ಬೀಜದ ಹೋರಿಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ತರೀಕೆರೆ, ಭದ್ರಾವತಿ, ಶಿವಮೊಗಾ , ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗೌಳಿಗರು ಎಂದು ಒಂದು ಜಾತಿಯ ಜನ ಇದ್ದಾರೆ ಅವರು ಒಬ್ಬೊಬ್ಬರೂ ಒಂದೊಂದು ಸಾವಿರ ಎಮ್ಮೆಗಳನ್ನು ಇಟ್ಟುಕೊಂಡು ಸಾಕುತ್ತಿದ್ದಾರೆ. ಸರ್ಕಾರದವರು ಯಾರ್‍ಯಾರಿಗೋ ಸಾಲ ಕೊಡುತ್ತಿದ್ದಾರೆ. ಆದರೆ ಇವರಿಗೆ ಕೊಡುತ್ತಿಲ್ಲ. ಇವರು ಕಾಡಿನಲ್ಲಿ ಎಮ್ಮೆಗಳನ್ನು ಮೇಯಿಸುವುದಕ್ಕೆ ಅವಕಾಶ ಕೊಟ್ಟರೆ ಅದರಿಂದ ನಮಗೆ ಸಾವಿರಾರು ಲೀಟರ್ ಹಾಲು ಸಿಕ್ಕುತ್ತದೆ. ಅವರಿಗೆ ವಾಸಕ್ಕೆ ಸರಿಯಾದ ಮನೆಗಳಿಲ್ಲದ್ದರಿಂದ ಅವರಿಗೆ ಮನೆಗಳನು ಕಟ್ಟಿಸಿ ಕೊಡಬೇಕು ಮತ್ತು ನೀರು ಇರುವ ಕಡೆಗಳಲ್ಲಿ ಅವರು ಹಸಿರು ಹುಲ್ಲನ್ನು ಬೆಳೆಸಲು ಸಾಲ ಕೊಡಬೇಕೆಂದು ಹೇಳಬಯಸುತ್ತೇನೆ. ನಮ್ಮಲ್ಲಿ ಡೈರಿ ಪ್ರಾರಂಭ ಮಾಡುತ್ತೇವೆಂದು ಕೇಳಿಕೊಂಡವರಿಗೆ ಸಾವಿರಾರು ರೂಪಾಯಿ ಸಾಲ ಕೊಡುತ್ತೀರಿ. ಕೊನೆಗೆ ಇವರು ತಮಗೆ ಕೊಟ್ಟಿರುವ ಅಸಲು ಮತ್ತು ಬಡ್ಡಿ ಎರಡನ್ನೂ ವಜಾ ಮಾಡಿ ಎಂದು ಕೇಳಿಕೊಳ್ಳುತ್ತಾರೆ. ಆದರೆ ಈ ಗೌಳಿಗರು ಹಾಗಲ್ಲ. ಇವರು ನಮ್ಮ ರಾಜ್ಯದಲ್ಲಿ ಸುಮಾರು ೮—೧೦ ಕಡೆ ಇದ್ದಾರೆ. ನೀವು ಸಾಲ ಕೊಡುವುದಾ

ದರೆ ಇವರು ನಮಗೆ ಸಾವಿರಾರು ಲೀಟರ್ ಹಾಲನ್ನು ಒದಗಿಸುತ್ತಾರೆ. ಕೊನೆಯದಾಗಿ ಹೇಳುವುದಾದರೆ ವೆಟರ್ನರಿ ಸೆಂಟರುಗಳು ಇರುವ ಕಡೆಗಳಲ್ಲಿ ಇನ್‌ಸೆಮಿನೇಷನ್‌ಗೆ ಅವಕಾಶ ಇರುವಂತೆ ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri G. B. Shankar Rao (Hirekerur).—Sir, I am glad, because I am allowed a little bit more time than what others have been allowed.

The Department of Animal Husbandry is gaining importance because of the task it has to perform It task is not merely to look after only animal health. The department is entrusted with the task of implementing the developmental programmes i.e., schemes which could help augmenting the much-needed food that we get from the animal origin. We resort to breeding espicially the cross-breeding. We want to increase production of milk and also of other animal products. So far as cross-breeding is concerned, we have to be very cautious. We have no defined policy in this regard crossbreeding has been takenup indiscriminately. Excuse me for saying so because we have no definite policy about cross-breeding. Cross-breeding should be takenup only to increase milk production, We are an agricultural country. In our country, we have to depend upon drought cattle for agriculture purpose. In the milk-shed areas of Bangalore and Hubli Dharwad Dairies where we have to see that intensified of cross-breeding is takenup on a large acale because we want to increase milk. We have to choose exotic bulls for this purpose. We have to see that areas are marked art so that the semen of a particular exotic bulls is made use of for cross-breeding For example. Hubli-Dharwad milk shed area is a purely buffalo tract. It is not like Bangalore or areas around Bangalore where cross-breeding has already been popular. With the use of exotic bulls. In the matter of cross-breeding much progress has been made here in the last three or four decades even before independence. While taking up to cross-breeding particularly in the milk shed areas, we have to confine ourselves to semen of a particular exotic breed My friend was telling that considerable amount of money was being wasted because semen was not properly used and it was allowed to go waste. We have to see that semen is kept in deep freezing equipment so that the quality is preserved and fertility is maintained. So that it requires freezing facilities. Uptill now, we had no freezing facilities. Forturately we have now received an equipment Deep Freez Liquid Nitrogen Plant installed in Hebbal Centre. This equipment can cater to the needs of about 50-100 in-semination centres. We have in our state hundreds and thousands of insemination unit. For that. we require not only one equipment of this capacity but equipments of higher capacity at Hesaragatta and even in the North, at Dharwad. We should have a plant—Liquid Nitrogen Plant—to preserve and keep the semens so that it could be

used for longer hours. I request the Hon. Minister who is an young and enthusiastic person to approach the Government of India for foreign exchange needed to purchase this equipment. In western countries, the semen is kept for years together even upto 10 years. So long as we have no facilities to preserve and keep the quality of semen by making use of deep freezing equipment, loss is going to be there. We have enough number of bulls. Though the number is more, the quality has gone do n. I had a look a' the Semen Bank and I found that in Semen Banks, the exotic bulls of known sire were not there,The Hon. Minister should make efforts and approach the Government of India to get enough bulls of exotic breed to our State. Then, Sir, the cow is so imporant now a days. The people in our country are suffering from mal-nutrition.

We have to supplement our food from the products we get from animal origin, I know the needs of the country and I know also the production of cereals in the country. I have the figures with me in 1937 the countries output of cereals was 53 million tons, in 1975 It was 110 million tonnes and in 1999 we may achieve the target of 190 million tonnes If we compare the growth of population in the country. We know, we need more and more food of animal origin so that we can improve our diet any system. Otherwise, the cry for nutritious food that is now required for the aged people and for our children may not be met at all. Therefore, I urge upon the Government to take steps to increase the production of animal products.

Coming to AI Centre in the State the amount spent on them is meager. The semen should be presured in deep freez equipment so that it might be taken to long distances, one should also see that Key Village Schemes will work effectively.

The progress achieved under the several schemes I would like to say the schemes like S.P.A., D.P.A.M. is not so much because they have not been able to impress upon the importance of these livestock Project.Even in the command areas progress has not been achieved to the desired level inspite of large funds available. Therefore I urge upon the Government to provide more and more funds to the people engaged in these activities and as also in the command area. I would also request the Minister concerned to give proper attention to the production of Milk powder and good breading for cows.

I am happy to say that we are the foremost country in the matter of milk production and livestock development. A time will come to utilise the milkpowder produced in our State for the benefit of farmers. I request the hon. Minister to plan well in advanced to have milk powder plants one—each at Bangalore and Dharwar. Sir, about 10

years ago a Company came forward to instal a plant in the Belgaum area. Some how it was not started, That time due to paucity of funds, Govt. too could not take up the project. Now, the Govt. have got assistance from the World Bank for the development of Animal Husbandry. I hope we can takenup this plant so that whatever excess milk we produce will be preserved in the form of milk powder and it can be made use of whenever it is needed, We can also sell the product at a profitable price.

With regard to price of milk in Bangalore, we should have defined policy so far as milk price is concerned. There is variation of prices in lean and flush periods Therefore, I request the Government to have a defined policy to hold back samething in the flush season and pay the same in the lean season. So that it would also help the farmers to supply milk regularly both in lean and flush seasons.

Coming to the Animal Health I would say the amount spent on medicines is very meagre. You have made provision for medicine worth 28 lakhs. But you have spent only Rs. 17 lakhs. I do not understand why it is so. I Propose, you should make use of the entire amount for medicines and send it to the rural areas where it is mostly needed. Because rural people do not get the required medicines to take care of Animal health. I have to say a word about Animal Health Institute. It is doing good work. It is doing good research also and gives technical guidance in this field. We feel proud of this institute.

Coming to the poultry development I should say our State has made considerable progress in this field. One should take the assistance of State Poultry farm to improve this poultry development. I urge upon the Government to takeup further research in this field. If we have to supply poultry feed to the farmers at reasonable rate. Govt. should also give proper representation to those persons who are willing to take up this poultry development in the State.

I would request the Hon. Minister to see that our poultry experts are properly helped and encouraged. If possible, they may be asked to go abroad and after returning here they must be asked to evolve a new variety of bird. Mychicks is comparable to other varieties like Ranishora that are available in the State. The pace of poultry development must be kept up.

Our officers are often sent abroad for training in dairy and poultry development. When an officer is trained Government should sea that he is continued in the same activity at leest for a couple of years Otherwise, whatever knowledge or experience he acquires will lost to the department, This is so in the case of IAS officers also who are sent abroad for training. When they come back from abroad with

knowledge, they are not kept in the department in which they had acquired knowledge. After one or two years they are transferred. What is the use of spending money on these officers and changing them often. After he has gained knowledge in a particular field, he should be kept there for 5 to 10 years.

With regard to pay scales, I remember after the Tukol Commission's recommendations the pay scales of officers were enhanced a little bit. Though not comparable to the pay scales of officers of the Agriculture Department. But after the Pai Commission recommendations came, the pay scales have come down. The officers who were on a higher cadre have been brought down. This is a sorry state of affairs. There is lot of discrimination, not because of the recommendations of the Pai Commission but because of the recommendations of the Official Committee. The members of the official committee are also officers. They should not have done like that. Animal Husbandry officers are in charge of a very important department. Their enthusiasm should not be dampened. I request Government to give serious thought to this aspect.

† Sri K. Karibasavanagoud (Hadagalli).—Sir, the Hon'ble Minister for Animal Husbandry and Dairy Development has moved the Demand for Rs. 14.16 crores. I feel it is meagre and not at all sufficient. It is not sufficient if our country achieves green revolution; equal importance must given to white revolution also. We must upgrade all local breeds of animals by introducing exotic breeds and we must give more importance to the quality of the animals rather than quantity. That means, we must up grade the animals and evolve better fodder management, dairy farming, etc. I feel we are still in the era of conventional way of cattle rearing and dairying. In the last 30 years if there has been anv development so far it has been done only in the Bangalore Division. This is my personal feeling. I would suggest to the Hon'ble Minister not to insist on bull semen system which is outdated and instead it would be better if he switches over to frozen semen. Especially, the Gulbarga Division has been neglected since the last 30 years whether it is in the matter of bull semen system or frozen semen system, I would therefore request the Hon'ble Minister to make a note of this so far as the Gulbarga Division is concerned. If this House is really interested in the upliftment of the rural people and the people living in the drought-prone area, animal husbandry must be given the same importance as Agriculture and Health. We have opened many veterinary hospitals and other centres but I suggest that equal importance must be given to the supply of drugs and staff, also. Without staff without drugs and without necessary equipments, how can these

dispensaries and centres help in developmental work? I also suggest that allotment to Animal Husbandry should also be on par with that of Agriculture, Housing and Health and how much importance our Government is giving to Housing and Health, the same importance should be given to Animal Husbandry also. We should also come upto the level of Punjab and Haryana in regard to white revolution. With these few words I thank the Chair for having given me a few minutes to talk on the floor.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ನಾನು ಪಶುಸಂಗೋಪನ ಇಲಾಖೆಯಲ್ಲಿ ೧೯೭೭–೭೮ನೇ ಸಾಲಿನ ವರದಿಯಲ್ಲಿರತಕ್ಕ ಕೆಲವಾರು ವಿಚಾರಗಳ ಮೇಲೆ ಮಾತನಾಡುತ್ತೇನೆ. ಮೊದಲನೆಯದಾಗಿ, ನಮ್ಮ ರಾಜ್ಯದಲ್ಲಿರತಕ್ಕ ಎತ್ತುಗಳಲ್ಲಿ ೩ ತರಹ ತಳಿ ಬಹಳವಾಗಿ ರೂಢಿಯಲ್ಲಿ ಇದೆಯೆಂದು ಹೇಳಿದ್ದೀರಿ. ಅವು ಯಾವುದೆಂದರೆ, ಅಮೃತ್ ಮಹಲ್ ತಳಿ, ಕಾರಂಜಿ ತಳಿ ಮತ್ತು ಹಳ್ಳೀಕಾರ್ ತಳಿ ಎಂದು. ಇವುಗಳ ಪೈಕಿ ಹಳ್ಳೀಕಾರ್ ಮತ್ತು ಅಮೃತ್‌ಮಹಲ್ ತಳಿಗಳು ಹಳೇ ಮೈಸೂರು ಕಡೆ ವ್ಯಾಪಕವಾಗಿ ವೃದ್ಧಿಯಾಗುತ್ತಿದ್ದವು. ಇನ್ನೂ ನಮ್ಮ ದೇಶ ಹೆಚ್ಚಾಗಿ ಎತ್ತುಗಳ ಹಾಗೂ ಎತ್ತಿನ ಗಾಡಿಗಳ ಮೇಲೆ ಅವಲಂಬಿಸಿದ್ದ ಟ್ರಾಕ್ಟರ್ ಕಾಲ ಇನ್ನೂ ಬಾರದೇ ಇರುವುದರಿಂದ ಒಂದರಿಂದ ೫ ಎಕರೆವರೆಗೆ ಜಮೀನುಳ್ಳವರು ಹೆಚ್ಚಾಗಿ ವ್ಯವಸಾಯಕ್ಕೆ ಎತ್ತುಗಳನ್ನು ಮತ್ತು ಗಾಡಿಗಳನ್ನು ಉಪಯೋಗಿಸುವುದರಿಂದ ದೇಶೀಯ ತಳಿಗಳನ್ನು ವೃದ್ಧಿ ಮಾಡತಕ್ಕದ್ದು ಸರ್ಕಾರದ ಮುಖ್ಯ ಕರ್ತವ್ಯವಾಗಿದೆ. ಆದರೆ ಇವತ್ತಿನ ದಿವಸ ಅವು ದಿನೇದಿನೇ ಕ್ಷೀಣವಾಗುತ್ತಿವೆಯೋ ವಿನಹ ಸರಿಯಾಗಿ ವೃದ್ಧಿಯಾಗುತ್ತಿಲ್ಲ. ಅನೇಕ ಜನರು ಉತ್ತರ ಕರ್ನಾಟಕದಿಂದ ಬಂದು ಮೈಸೂರು ಪ್ರದೇಶದ ಜಾತ್ರೆಗಳಲ್ಲಿ ಎತ್ತುಗಳನ್ನು ಕೊಂಡುಕೊಂಡು ಹೋಗತಕ್ಕ ರೂಢಿ ಇತ್ತು. ಈಗಲೂ ಕೂಡ ತೆಗೆದುಕೊಂಡು ಹೋಗುತ್ತಿದ್ದಾರೆ. ಅಮೃತಮಹಲ್ ಎಂಬ ತಳಿ ಮೈಸೂರು ಮಹಾರಾಜರ ಕಾಲದಿಂದಲೂ ವೃದ್ಧಿಯಾದ ತಳಿ. ಅದು ಹೆಚ್ಚು ಶಕ್ತಿಯುತವಾದ ತಳಿ. ಅದನ್ನು ಹೆಚ್ಚಾಗಿ ವೃದ್ಧಿ ಮಾಡುವುದಕ್ಕೋಸ್ಕರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇವತ್ತಿನ ದಿವಸ ಏನಾಗಿದೆ ಎಂದರೆ, ಬೆಂಗಳೂರಿನ ಸುತ್ತ ಮುತ್ತ ಹಾಗೂ ಬೆಂಗಳೂರಿಗೆ ಎಷ್ಟು ಹೆದ್ದಾರಿಗಳು ಇದೆ ಆ ಹೆದ್ದಾರಿಗಳಲ್ಲಿ ಗುಂಪುಗುಂಪಾಗಿ ಎತ್ತುಗಳನ್ನು ಬೆಂಗಳೂರಿನಲ್ಲಿ ಕಡಿಯುವುದಕ್ಕೆ ಕಟುಕರು ತರುತ್ತಿರುವುದನ್ನು ದಿನಂಪ್ರತಿ ನೋಡುತ್ತಿರಬಹುದು. ಆದರೆ ಅರ್ಥಕ್ಕೂ ಹೆಚ್ಚಿಗೆ ಹಳ್ಳಿಯಲ್ಲಿ ರೈತನಿಗೆ ಉಪಯೋಗವಾಗುವಂತಹ ಎತ್ತುಗಳೂ ಕೂಡ ಇವರುಗಳ ಜೊತೆ ಬೆಂಗಳೂರಿಗೆ ಬರುತ್ತಿದೆ. ಇವರು ಹಣ ಹೆಚ್ಚಿಗೆ ಕೊಡುತ್ತಾರೆ ಎಂದೊ ಯಾವುದೋ ಕಾರಣಕ್ಕಾಗಿ ಹಳ್ಳಿಗಾಡಿನಲ್ಲಿ ಎತ್ತುಗಳನ್ನು ಕಳೆದುಕೊಂಡು ಅವುಗಳನ್ನು ಬೆಂಗಳೂರು ಕಸಾಯಿ ಖಾನೆಗೆ ತೆಗೆದುಕೊಂಡು ಬಂದು ಬೇರೆ ರೀತಿಯಲ್ಲಿ ಉಪಯೋಗ ಮಾಡಿಕೊಂಡರೆ ಅದರಿಂದ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕೆಲವು ಎತ್ತುಗಳನ್ನು ಹೋರಿಗಳನ್ನು ಖಸಾಯಿ ಖಾನೆಗೋಸ್ಕರವಾಗಿಯೇ ಸಾಕಿದ ಜನರಿರುತ್ತಾರೆ. ಅಂಥ ಎತ್ತುಗಳನ್ನು ತೆಗದುಕೊಳ್ಳದೆ ರೈತನ ಮನೆಯಲ್ಲಿ ಇರುವಂಥ ಎತ್ತುಗಳನ್ನು ಬೆಂಗಳೂರಿನ ಕಸಾಯಿಖಾನೆಗೆ ತಂದರೆ ಹಳ್ಳಿಗಾಡಿನಲ್ಲಿ ಇರುವವರಿಗೆ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಈ ಬಗ್ಗೆ ನಿಯಂತ್ರಣ ಹಾಕುವುದಕ್ಕೆ ಈ ಇಲಾಖೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ರೈತರು ಸಾಮಾನ್ಯವಾಗಿ ಅದಕ್ಕೆ ವಯಸ್ಸಾದ ಮೇಲೆ ಅದನ್ನು ಸಾಕುವುದಕ್ಕೆ ಆಗದೇ ಇರುವ ಕಾರಣಗಳೂ ಇರಬಹುದು, ಅಥವಾ ಎತ್ತುಗಳನ್ನು ಸಾಕುವುದಕ್ಕೆ ಶಕ್ತಿ ಇಲ್ಲದೇ ದನಗಳನ್ನು ಇಟ್ಟುಕೊಳ್ಳುವುದಕ್ಕಾಗದೇ ಇರುವ ಕಾರಣಗಳೂ ಇರಬಹುದು. ಇಂಥ ಸಂದರ್ಭಗಳಲ್ಲಿ ಸರ್ಕಾರವೇ ಅಲ್ಲಲ್ಲಿ ಗೋ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿ ದನಗಳನ್ನು ಸಾಕಿಕೊಂಡು ಯಾರು ಒಂದು ಎಕರೆ ಎರಡು ಎಕರೆ ಇರುವ ಸಣ್ಣ ಹಿಡುವಳಿದಾರರಿದ್ದಾರೆ ಅಂಥವರಿಗೆ ಗೋಶಾಲೆಯಲ್ಲಿರುವ ಎತ್ತುಗಳನ್ನು ಬಾಡಿಗೆಗೆ ಕೊಡುವ ವ್ಯವಸ್ಥೆಯನ್ನು ಮಾಡಬಹುದು. ಎಷ್ಟೋ ಜನರಿಗೆ ವ್ಯವಸಾಯ ಮಾಡುವುದಕ್ಕೆ ಎತ್ತುಗಳಿರುವುದಿಲ್ಲ. ಟ್ರ್ಯಾಕ್ಟರುಗಳನ್ನು ಯಾವರೀತಿ ಬಾಡಿಗೆ ಆಧಾರದ ಮೇಲೆ ರೈತರಿಗೆ ಕೊಡುವ ವ್ಯವಸ್ಥೆ ಇದೆಯೋ ಆದೇ ರೀತಿ ಎತ್ತುಗಳನ್ನೂ ಗೋಶಾಲೆಗಳಲ್ಲಿ ಇಟ್ಟುಕೊಂಡು ರೈತರಿಗೆ ಕೊಡಬಹುದು. ಪಂಚಾಯಿತಿ ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ವ್ಯವಸಾಯಕ್ಕೆ

ಯೋಗ್ಯವಾದ ಏತ್ತುಗಳನ್ನು ಇಟ್ಟುಕೊಂಡು ರೈತರಿಗೆ ಬಾಡಿಗೆಯ ರೂಪದಲ್ಲಿ ಕೊಡುವುದಾದರೆ ವ್ಯವಸಾಯ ಮಾಡುವ ಕಾಲದಲ್ಲಾದರೂ ಅವರಿಗೆ ಸಹಾಯ ಮಾಡಿದಹಾಗಾಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಗೋ ಶಾಲೆಗಳನ್ನು ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಹಸುಗಳಲ್ಲಿ ಪಾಶ್ಚಿಮಾತ್ಯ ದೇಶಗಳಿಂದ ಬರುವಂಥ ತಳಿಗಳಿಂದ ವೀರ್ಯವನ್ನು ತೆಗೆದುಕೊಂಡು ಒಳ್ಳೆ ತಳಿಗಳನ್ನು ನಮ್ಮ ದೇಶದಲ್ಲಿ ವೃದ್ಧಿ ಮಾಡಲಾಗುತ್ತಿದೆ. ಹಳೇ ಮೈಸೂರು ಭಾಗದಲ್ಲಿ ಹಿಂದೆ ನೀಲಗಿರಿ ಕಡೆಯಿಂದ, ಹೊಸೂರು ಕಡೆಯಿಂದ ಎಚ್. ಎಫ್. ತಳಿ ಬರುತ್ತಿತ್ತು. ಆ ತಳಿಗಳು ವ್ಯಾಪಕವಾಗಿ ಈ ಹಳೇ ಮೈಸೂರು ಭಾಗದಲ್ಲಿ ೩೦-೪೦ ವರ್ಷಗಳಿಂದ ಹೆಚ್ಚಾಗಿದ್ದು ಇಲ್ಲಿಗೆ ಹೊಂದಿಕೆಯಾಗಿತ್ತು. ಆದರೆ ಕೆಲವು ವರ್ಷಗಳಿಂದೀಚೆಗೆ ಜೆರ್ಸಿ, ರೆಡ್ ಡೇನ್ ತಳಿಗಳು ಕ್ರಾಸ್ ಬ್ರೀಡ್ ಆಗಿ ಬರುತ್ತಿದ್ದು ಇಲ್ಲಿಗೆ ಅಷ್ಟು ಹೊಂದಿಕೆಯಾಗಿಲ್ಲ. ಎರಡು ಮೂರು ಪೀಳಿಗೆಗಳಾದ ಮೇಲೆ ನಮ್ಮ ಪ್ರದೇಶಕ್ಕೆ ಹೊಂದಿಕೊಳ್ಳುತ್ತದೆಯೋ ಏನೋ ಗೊತ್ತಿಲ್ಲ. ಈ ಹವಾಮಾನಕ್ಕೆ ತಡೆಯುವುದಿಲ್ಲ ಎಂದು ಕಾಣುತ್ತದೆ. ಜರ್ಸೀ ಹವಾಗುಣಕ್ಕೆ ತಡೆದರೂ ಅವುಗಳ ಹಾಲಿನ ಉತ್ಪತ್ತಿ ಕಡಿಮೆ ಇರುತ್ತದೆ. ಆದರೆ ಎಚ್. ಎಫ್. ಜಾತಿ ಎಲ್ಲಾ ವಿಚಾರದಲ್ಲೂ ಹಳೇ ಮೈಸೂರು ಭಾಗಕ್ಕೆ ಹೊಂದಿಕೊಳ್ಳುತ್ತದೆ. ಇಲ್ಲಿನ ಹವಾಮಾನಕ್ಕೂ ಹೊಂದಿಕೊಂಡುಹೋಗುತ್ತದೆ. ಜೆರ್ಸೀಜಾತಿ ಉತ್ತರ ಕರ್ನಾಟಕದ ಭಾಗಗಳಿಗೆ ಹೊಂದಿಕೊಳ್ಳುವುದರಿಂದ ಆ ತಳಿಗಳನ್ನು ಅಲ್ಲಿ ವೃದ್ಧಿ ಮಾಡಿದರೆ ಸರಿಹೋಗುತ್ತದೆ ಎಂದು ನನ್ನ ಅಭಿಪ್ರಾಯ.

ಈ ವೀರ್ಯ ಶೇಖರಣೆ ಕಾರ್ಯ ನಡೆಯುತ್ತಿದ್ದು ಮೂರು ನಾಲ್ಕು ರೀತಿಗಳಿಂದ ವೀರ್ಯ ಶೇಖರಣೆ ಮಾಡುತ್ತಿದ್ದೀರಿ. ಗೂಳಿಗಳ ಕೇಂದ್ರಗಳನ್ನಿಟ್ಟು ಅಲ್ಲಿಂದ ಶೇಖರಣೆ ಮಾಡುವುದು, ಡೀಪ್ ಫ್ರೀಜ್ ಸೆಮನ್, ಡ್ಯಾನಿಷ್-ಇಂಟರ್‌ನ್ಯಾಷನಲ್ ಪ್ರಾಜೆಕ್ಟ್‌ನಲ್ಲಿ ಮತ್ತು ವಿದೇಶದಿಂದ ತರಿಸುವುದು ಹೀಗೆ ವೀರ್ಯವನ್ನು ಮೂರು ಕಡೆಗಳಿಂದ ಶೇಖರಣೆ ಮಾಡುತ್ತಿದ್ದೀರಿ. ಅದೇನು ಕಾರಣವೋ ಏನೋ ಈ ವೀರ್ಯಗಳಿಂದ ಹುಟ್ಟತಕ್ಕ ಕರುಗಳು ಕಣ್ಣು ಕುರುಡಾಗಿರುತ್ತದೆ ಎಂದು ಕೇಳಿದ್ದೇನೆ. ಇದಕ್ಕೆ ಕಾರಣ ಏನೋ ಎಲ್ಲಿ ದೋಷವಿದೆಯೋ ಗೊತ್ತಾಗಲಿಲ್ಲ. ಸಾಕುವುದರಲ್ಲಿ ದೋಷವಿದೆಯೋ ಅಥವಾ ವೀರ್ಯ ಶೇಖರಣೆಯಲ್ಲಿ ದೋಷವಿದೆಯೋ ಎಂಬುದನ್ನು ಇಲಾಖೆ ವತಿಯಿಂದ ಪರೀಕ್ಷೆ ಮಾಡಿಸಬೇಕಾಗುತ್ತದೆ. ನಾನು ಅನೇಕ ಕಡೆ ಪಶುಪಾಲನೆ ಮಾಡುವ ಕಡೆ ವಿಚಾರಿಸಿದಾಗ ಕಣ್ಣು ಇಲ್ಲದ ಕರುಗಳು ಹುಟ್ಟುತ್ತಿವೆ ಎಂದು ಗೊತ್ತಾಯಿತು.

ಈ ತಳಿಗಳನ್ನು Command area development agency, Command area development programme authority ಎಲ್ಲ ಕಡೆಗಳಲ್ಲಿ ವೃದ್ಧಿಮಾಡುವ ಕೆಲಸಗಳಾಗುತ್ತಿವೆ. ನೀರಾವರಿ ಯೋಜನೆ ಇರುವ ಸ್ಥಳದಲ್ಲಿ ತಳಿಗಳನ್ನು ವೃದ್ಧಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಈಗ ನೀರಾವರಿ ಯೋಜನೆಗಳಿಂದ ಎಲ್ಲಾ ಕಡೆ ವ್ಯವಸಾಯವನ್ನು ಮಾಡುತ್ತಿದ್ದಾರೆ. ಆದರೆ ನೀರಾವರಿ ಪ್ರದೇಶವಿರುವ ಕಡೆಗಳಲ್ಲಿ ಮೇವುಗಳಿಗೆ ಬೇಕಾದ ಹುಲ್ಲುಗಳನ್ನು ಬೆಳೆಸಬೇಕು. ಹುಲ್ಲನ್ನು ಬೆಳೆಸುವುದಕ್ಕಾಗಿ ಕೆಲವು ಪ್ರದೇಶಗಳನ್ನು ಮೀಸಲಿಡಬೇಕಾದ ಅವಶ್ಯಕತೆ ಇದೆ. ಹಾಗೆ ಮಾಡದೇ ನಾವು ಎಲ್ಲಾ ಕಡೆ ನೀರಾವರಿ ಪ್ರದೇಶವಿರುವ ಕಡೆಗಳಲ್ಲೆಲ್ಲಾ ಒಂದು ಅಂಗುಲವೂ ಬಿಡದಂತೆ ನಮಗೆ ಬೇಕಾದ ಆಹಾರ ಧಾನ್ಯಗಳನ್ನೇ ಬೆಳೆದುಕೊಂಡು ಹೋದರೆ ದನಕರುಗಳಿಗೆ ಮೇವಿಗೆ ಹುಲ್ಲು ಸಿಗುವುದು ತೊಂದರೆಯಾಗುತ್ತದೆ. ಆದ್ದರಿಂದ ಈ ಹೈಬ್ರಿಡ್ ಹುಲ್ಲನ್ನು ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಪಶುವೈದ್ಯದ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ದನಗಳಿಗೆ Rinderpest, foot and mouth disease ಖಾಯಿಲೆಗಳಿಂದ ತುಂಬಾ ತೊಂದರೆಗಳಾಗುತ್ತಿವೆ. ಈ ರೈಂಡರ್‌ಪೆಸ್ಟ್ ಖಾಯಿಲೆ ದೊಡ್ಡ ಖಾಯಿಲೆ ಎಂದು ನಾವು ಹೇಳುತ್ತೇವೆ. ಇದನ್ನು ಹೋಗಲಾಡಿಸುವುದಕ್ಕೆ ವ್ಯಾಪಕವಾದ ಕೆಲಸ ನಡೆಯುತ್ತಿದೆ. ಈ ಖಾಯಿಲೆ ವಿದೇಶಿ ತಳಿಗಳಲ್ಲೂ ಬರುತ್ತದೆ. ರೈಂಡರ್‌ಪೆಸ್ಟ್ ಖಾಯಿಲೆ ಬಂದರೆ ತಳಿಗಳು ಸೂಕ್ಷ್ಮವಾದುದರಿಂದ ಈ ಖಾಯಿಲೆಗೆ ತಡೆಯುವುದಿಲ್ಲ. ಜರಸಲು ಖಾಯಿಲೆಯಿಂದ ಆರೋಗ್ಯ ಕೆಟ್ಟು ಹಸುಗಳಲ್ಲಿ ಹಾಲು ಇಳುವರಿ ಕಡಿಮೆಯಾಗುತ್ತದೆ. ಇದರಿಂದ ಸಾವಿರಾರು ರೂಪಾಯಿ ಖರ್ಚು ಮಾಡಿ ಈ ತಳಿಗಳನ್ನು ಕೊಂಡುಕೊಂಡಿರುವವರಿಗೆ ಬಹಳ ನಷ್ಟವಾಗುತ್ತದೆ. ಆದ್ದರಿಂದ ಈ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು. ಖಾಯಿಲೆ ಇರುವ ಪ್ರದೇಶಗಳಲ್ಲಿ ಇಲಾಖೆಯ ವತಿಯಿಂದ ವ್ಯಾಕ್ಸಿನೇಷನ್ ಪ್ರೋಗ್ರಾಂ ತೆಗೆದುಕೊಳ್ಳಬೇಕು. ಅದು ಬಹಳ

ಮಾಡಬೇಕು. ಮನುಷ್ಯರ ಆಸ್ಪತ್ರೆ ಹೇಗಿದೆ ಎಂಬುದನ್ನು ನೋಡಿದರೆ ಇನ್ನು ದನಗಳ ಆಸ್ಪತ್ರೆಗಳು ಹೇಗಿರುತ್ತದೆ ಎಂಬುದನ್ನು ಹೇಳಬೇಕಾಗಿಲ್ಲ. ಮನುಷ್ಯರ ಆಸ್ಪತ್ರೆಗಳಲ್ಲೇ ಎಷ್ಟೋ ಅನಾನುಕೂಲಗಳಿರುವಾಗ ದನಗಳ ಆಸ್ಪತ್ರೆಗಳಲ್ಲಿ ಯಾವರೀತಿ ಅನುಕೂಲಗಳಿರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಅಲ್ಲಿ ಅನೇಕ ಔಷಧಿಗಳು ಸಿಗುವುದಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಹೋದಾಗ ಅವರ ಹತ್ತಿರ ಔಷದಿಗಳಿಲ್ಲ ಎಂದು ಹೇಳಿ ಪ್ರಿಸ್ಕಿಪ್‌ಷನ್ ಬರೆದುಕೊಡುತ್ತಾರೆ. ಹೊರಗಡೆಯಿಂದ ಔಷದಗಳನ್ನು ಹಣ ಕೊಟ್ಟು ತರಬೇಕಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವ ಜನ ಸಾಮಾನ್ಯವಾಗಿ ಒಂದೆರಡು ಹಸುಗಳನ್ನು ಇಟ್ಟುಕೊಂಡಿರುವವರು ಇವರು ಇಂಥ ಆಸ್ಪತ್ರೆಗಳಿಗೆ ಹೋಗುತ್ತಾರೆ. ಹೆಚ್ಚು ಹಸುಗಳನ್ನು ಇಟ್ಟುಕೊಂಡಿರುವ ದೊಡ್ಡ ದೊಡ್ಡ ಜನರು ಡಾಕ್ಟರುಗಳನ್ನೇ ಕರೆಸಿಕೊಂಡು ತೋರಿಸಿಕೊಳ್ಳುತ್ತಾರೆ. ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಇರುವ ಪಶುವೈದ್ಯಶಾಲೆಗಳಿಗೆ ಸಾಮಾನ್ಯ ಜನ ಪಶುಪಾಲನೆ ಮಾಡುವಂಥವರು ಹೆಚ್ಚಾಗಿ ಹೋಗುವುದರಿಂದ ಸರ್ಕಾರದ ವತಿಯಿಂದ ಅಲ್ಲಿ ಬೇಕಾಗಿರತಕ್ಕ ಔಷದಗಳನ್ನು ಒದಗಿಸಬೇಕಾಗುತ್ತದೆ. ಪಶುವೈದ್ಯ ಶಾಲೆಗಳಿಗೆ ಸರಿಯಾದ ರೀತಿಯಿಂದ ಔಷಧಗಳನ್ನು ಸರಬರಾಜು ಮಾಡಿ ಅಲ್ಲಿ ಔಷಧಗಳನ್ನು ಸ್ಟಾಕಿಟ್ಟು ಪಶುಪಾಲನೆ ಮಾಡುವ ಬಡಜನರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಡೈರಿ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ, ಮಾನ್ಯ ಮಂತ್ರಿಗಳಾದ ಫಾಳಪ್ಪನವರು ನಮಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು. ಬೆಂಗಳೂರು ನಗರದ ಶಾಸಕರೆಲ್ಲರೂ ಬೆಂಗಳೂರು ಡೈರಿಗೆ ಹೋಗಿ ಅದು ಯಾವರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಿಕೊಂಡು ಬಂದಿದ್ದೇವೆ. ಮತ್ತು ಅಲ್ಲಿ ಅವರ ಕಷ್ಟಗಳೂ ಕೂಡ ಏನು ಎಂದು ಹೇಳಿದ್ದಾರೆ. ನವಂಬರ್ ತಿಂಗಳಿನಿಂದ ಜನವರಿವರೆಗೆ ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಹಾಲು ಸಿಗುತ್ತದೆ. ಈ ಮೂರು ನಾಲ್ಕು ತಿಂಗಳು ಬಿಟ್ಟು ಮಿಕ್ಕ ತಿಂಗಳುಗಳಲ್ಲಿ ಹಾಲು ಸಿಗುವ ಅವಕಾಶ ಕಡಿಮೆ ಇರುತ್ತದೆ. ಆದ್ದರಿಂದ ಹೊರಗಡೆಯಿಂದ ಹಾಲಿನ ಪುಡಿಗಳನ್ನು ತರಿಸಿಕೊಂಡು ಸಂಸ್ಕರಣೆ ಮಾಡಿ ಹಾಲು ಕೊಡುತ್ತೇವೆ, ಆದ್ದರಿಂದ ಹಾಲಿನ ಬೆಲೆ ಜಾಸ್ತಿಯಾಗುತ್ತದೆ ಎಂದು ಹೇಳಿದರು. ಹೆಚ್ಚುವರಿ ಹಾಲು ಸಿಗುವ ಕಾಲದಲ್ಲಿ ಶೇಖರಣೆ ಮಾಡಿ ಅದರಿಂದ ಬೇಕಾಗುವಷ್ಟು ಹಾಲಿನ ಪುಡಿಯನ್ನು ಮಾಡಿಕೊಂಡು ಬೇರೆ ಕಾಲದಲ್ಲಿ ಹಾಲು ಸರಬರಾಜು ಮಾಡುವುದಾದರೆ, ಬೆಲೆ ಕೂಡ ಕಡಿಮೆಯಾಗುತ್ತದೆ ಮತ್ತು ಉತ್ಪಾದಕರಿಗೂ ಸರಿಯಾದ ಒಂದು ಬೆಲೆ ಸಿಕ್ಕಿದಂತಾಗುತ್ತದೆ. ಮತ್ತೆ ಅಲ್ಲಿ ಬಾಟ್ಲಿಂಗ್ ಎಕ್ವಿಪ್‌ಮೆಂಟ್ ಇವೆ, ಶೀಶೆಗೆ ಹಾಲು ಹಾಕತಕ್ಕಂಥಾ ಮಿಷನ್‌ಗಳು ಸದ್ಯಕ್ಕೆ ೩ ಇವೆ, ದಿನಕ್ಕೆ ೨೨ ಗಂಟೆ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಈ ೩ ಯಂತ್ರಗಳ ಜೊತೆಗೆ ಒಂದನ್ನು ಸ್ಪೇರಾಗಿ ಇಡಲೇ ಬೇಕಾಗುತ್ತದೆ. ಈ ೩ ಯಂತ್ರಗಳಲ್ಲಿ ಯಾವುದಾದರೂ ಒಂದು ಕೆಟ್ಟು ಹೋದಾಗ ಅದನ್ನು ರಿಪೇರಿ ಮಾಡಬೇಕಾದರೆ ಮತ್ತು ಓವರ್ ಆಯಿಲ್ ಮಾಡಬೇಕಾದಾಗ ಒಂದು ಯಂತ್ರವನ್ನು ಸ್ಪೇರಾಗಿ ಇಟ್ಟುಕೊಳ್ಳುವುದು ಸಾಮಾನ್ಯವಾದ ಪದ್ಧತಿ. ಈ ೩ ಮಿಷನ್‌ಗಳು ೨೨ ಗಂಟೆ ಕೆಲಸ ಮಾಡುವಾಗ ಮಧ್ಯೆ ಮಧ್ಯೆ ಕೆಟ್ಟು ಹೋಗುವುದರಿಂದ ಬಾಟಲುಗಳಲ್ಲಿ ಹಾಲು ಬರದೆ ಕ್ಯಾನುಗಳಲ್ಲಿ ಹಾಲು ಬಂದು ಕಲಬೆರಕೆ ಬೇಕಾದಷ್ಟು ಆಗಿ ಸಾರ್ವಜನಿಕರಿಂದ ಪ್ರತಿಭಟನೆಯಾಗಿದೆ. ತಾವು ತಿಳಿಸಿರುವ ೧೯೬೫ ರಲ್ಲಿ ಕೇವಲ ೩ ಸಾವಿರ ಲೀಟರ್ ಇದ್ದದ್ದು ಈಗ ೧ ಲಕ್ಷ ೨೦ ಸಾವಿರ ಲೀಟರ್ ಸರಬರಾಜು ಇರುವಾಗ ಹೆಚ್ಚು ಮಿಷಿನ್‌ಗಳನ್ನು ತೆಗೆದು ಇಟ್ಟುಕೊಳ್ಳಬೇಕು. ಆಗಸ್ಟ್‌ನಿಂದ ಪಾಲಿಥಿನ್ ಬ್ಯಾಗುಗಳಲ್ಲಿ ಹಾಲನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಡೆಲ್ಲಿಯಲ್ಲಿ, ಬಾಂಬೆಯಲ್ಲಿ ಯಾವರೀತಿ ಪಾಲಿಥಿನ್ ಬ್ಯಾಗುಗಳಲ್ಲಿ ಸೀಲ್ ಮಾಡಿ ಕಳಿಸುತ್ತಾರೋ ಅದೇರೀತಿ ಮಾಡುತ್ತೇವೆ, ಆ ಒಂದು ಯಂತ್ರ ಬಂದಿದೆ ಎಂದು ಹೇಳಿದ್ದೀರಿ, ಇದರ ಜೊತೆಗೆ ಬಾಟ್ಲಿಂಗ್ ಎಕ್ವಿಪ್‌ಮೆಂಟ್ ಇಟ್ಟುಕೊಂಡರೆ ಹೆಚ್ಚಿನ ಹಾಲನ್ನು ಅವಶ್ಯಕವಿದ್ದಾಗ ಸರಬರಾಜು ಮಾಡುವುದಕ್ಕೆ ಅವಕಾಶವಾಗುತ್ತದೆ.

ಅಲ್ಲಲ್ಲಿ ಮಿಲ್ಕ್ ಬ್ಯಾಂಕ್ ತರಹ ಘಟಕಗಳನು ತೆರೆಯುವುದಾಗಿಯೂ, ಅರ್ಧ ಲೀಟರ್ ಹಾಲಿಗೆ ತಕ್ಕ ಹಣ ಹಾಕಿತು ಅಂದರೆ ಅಷ್ಟು ಹಾಲನ್ನು ನಾವು ನಲ್ಲಿ ಮುಖಾಂತರ ತೆಗೆದುಕೊಳ್ಳಬಹುದು. ಇದನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ ಆರೀತಿ ಆದಾಗ ಕಲಬೆರಕೆ ಅಥವಾ ಕಡಿಮೆ ಹಾಲು ಸರಬರಾಜು ಆಗುವಂಥಾದ್ದು, ಬಾಟ್ಲಿಂಗ್ ಎಕ್ವಿಪ್‌ಮೆಂಟ್ ಸಮಸ್ಯೆ ನಿವಾರಣೆ ಆಗುತ್ತದೆ, ಇದನ್ನು ಜಾಗ್ರತೆ ತೆಗೆಯಬೇಕು ಎಂದು ನಾನು ಹೇಳುತ್ತೇನೆ. ನಮ್ಮ ಡೈರಿಯಲ್ಲಿ ಹಾಲು, ಮೊಸರು, ತುಪ್ಪ, ಅದರಲ್ಲೂ ಡೈರಿಯ ತುಪ್ಪ ಬಹಳ ಹೆಸರುವಾಸಿಯಾದುದು. ಈ ತುಪ್ಪ ಸರಿಯಾಗಿ

ಸರಬರಾಜು ಇಲ್ಲ; ಬಹಳ ಕೊರತೆ ಇದೆ. ಗ್ರಾಹಕರು ಡೈರಿಯ ತುಪ್ಪ ಸಿಗದೆ ಮಾರ್ಕೆಟ್‌ನಲ್ಲಿ ಮಾರುವಂಥ ಕಲಬೆರಕೆ ತುಪ್ಪವನ್ನು ಉಪಯೋಗಿಸುತ್ತಿದ್ದಾರೆ. ಆದುದರಿಂದ ಡೈರಿಯ ತುಪ್ಪ, ಬೆಣ್ಣೆ, ಮೊಸರಿನ ಉತ್ಪಾದನೆ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಪೌಷ್ಟಿಕ ಆಹಾರವಾದ ಮಿಲ್ಕ್ ಟೋನನ್ನು ಪ್ರಾಯೋಗಿಕವಾಗಿ ಮಾಡಿದ್ದೀರಿ. ಇದನ್ನು ಆದಷ್ಟು ಹೆಚ್ಚು ಮಾಡಿ ಹಳ್ಳಿಗಾಡಿನಲ್ಲಿ ಪ್ರಾಥಮಿಕ ಪಾಠಶಾಲೆ ಮಕ್ಕಳಿಗೆ ಮಿಡ್ ಡೇ ಮೀಲ್ಸ್ ಎಂದು ಏನು ಕೊಡುತ್ತೇವೆ ಆ ಒಂದು ರೂಪದಲ್ಲಿ ಕೊಡುವಂತೆ ಮಾಡಬೇಕು, ಮತ್ತು ಬೆಂಗಳೂರಿನಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿ ಉಚಿತವಾಗಿ ಅಥವಾ ಸಬ್ಸಿಡಿ ರೂಪದಲ್ಲಿ ಈ ಮಿಲ್ಕ್ ಟೋನನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಸಾಧ್ಯವಾದಷ್ಟು ಜಿಲ್ಲಾ ಡೈರಿ ಕೇಂದ್ರಗಳನ್ನು ಪ್ರಾರಂಭಮಾಡಿ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಹಾಲು ಉತ್ಪಾದನೆ ಹೆಚ್ಚಾಗಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ರೇಣುಕಾ ರಾಜೇಂದ್ರನ್ (ಚಿಕ್ಕಬಳ್ಳಾಪುರ).—ಸನ್ಮಾನ್ಯ ಅಧ್ಯಕ್ಷರೇ, ಬಹಳ ಜನಗಳ ಆರೋಗ್ಯದ ಬಗ್ಗೆ ಬೇಡಿಕೆ ಇತ್ತು, ಈಗ ದನಗಳ ಆರೋಗ್ಯದ ಬಗ್ಗೆ ಬೇಡಿಕೆ ಇದೆ, ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ, ಇವರ ಬಗ್ಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಇಡೀ ರಾಜ್ಯಾದ್ಯಂತ ಹಳ್ಳಿಗಾಡಿನಲ್ಲಿ ಕೆಲವು ಕಡೆ ಸ್ಟಾಕ್‌ಮನ್, ಕಾಂಪೌಂಡರ್, ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್ ಇರುವುದಿಲ್ಲ. ಒಬ್ಬರು ಇದ್ದರೆ ಒಬ್ಬರು ಇರುವುದಿಲ್ಲ. ಇದರಲ್ಲಿ ೫೦೦ ಪೋಸ್ಟ್ಸ್ ಖಾಲಿ ಇದೆಯೆಂದು ನಾನು ಕೇಳಿದ್ದೇನೆ. ಶೀಘ್ರವಾಗಿ ತರಬೇತಿ ಕೊಟ್ಟು ಆ ಹುದ್ದೆಗಳನ್ನು ತುಂಬಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೋಲಾರ ಜಿಲ್ಲೆ ಬರೀ ಮಳೆಯನ್ನೇ ಅವಲಂಬಿಸಿರತಕ್ಕ ಜಿಲ್ಲೆ. ಅಲ್ಲಿ ಮಳೆ ಬಂದರೆ ಮಾತ್ರ ಕೆರೆ ತುಂಬಿ ಒಂದು ಬೆಳೆ ಸಂಪೂರ್ಣವಾಗಿ ಆಗಲಿಕ್ಕೆ ಸಾಧ್ಯ, ಮಳೆ ಬಾರದಿದ್ದರೆ ಅದೂ ಆಗುವುದಿಲ್ಲ. ಅದು ಡ್ರೈ ಏರಿಯ. ನಮ್ಮ ಕೋಲಾರ ಜಿಲ್ಲೆಯಲ್ಲಿ ಹೈನುಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ನಮ್ಮ ರೈತರು ಅದನ್ನೇ ಅವಲಂಬಿಸಿರುವುದರಿಂದ ಈ ದಿಶೆಯಲ್ಲಿ ಏನೇನು ಯೋಜನೆಗಳಿವೆ ಆ ಯೋಜನೆಗಳೆಲ್ಲವನ್ನೂ ಕೋಲಾರ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಡಿ. ಪಿ. ಎ. ಪಿ. ಎಂದು ನಮ್ಮ ಡಿಸ್ಟ್ರಿಕ್ಟನ್ನು ಡಿಕ್ಲೇರ್ ಮಾಡಿದ್ದಾರೆ. ಅದರಲ್ಲಿ ಚಿಕ್ಕಬಳ್ಳಾಪುರ, ಗೌರಿಬಿದನೂರು ಮತ್ತು ಮಾಲೂರು ತಾಲ್ಲೂಕುಗಳನ್ನು ಕೈ ಬಿಟ್ಟಿದ್ದಾರೆ. ಸ್ಮಾಲ್ ಡಿ. ಎ. ಏರಿಯಾ ಎಂದು ಏನು ಮಾಡಿದ್ದೀರಿ ಅದರಲ್ಲಿ ಈ ತಾಲ್ಲೂಕುಗಳನ್ನು ಕವರಪ್ ಮಾಡಿದರೆ, ಪಶುಪಾಲನಾ ಇಲಾಖೆಯ ಯೋಜನೆಗಳಿಂದ ಆಗತಕ್ಕ ಉಪಯೋಗವನ್ನು ನಮ್ಮ ರೈತರು ಪಡೆದುಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳಬಯಸುತ್ತೇನೆ. ನಮ್ಮ ಜಿಲ್ಲೆ ಮಿಶ್ರ ತಳಿ ಮತ್ತು ಕುರಿಗಳಿಗೆ ಹೆಸರುವಾಸಿಯಾಗಿದೆ. ಆದರೆ ಅಲ್ಲಿ ಈ ಇಲಾಖೆಯ ಪ್ರೋಗ್ರೆಸ್ ಮಾತ್ರ ಏನೂ ಇಲ್ಲ. ಆದುದರಿಂದ ಕ್ಯಾಟಲ್ ಫಾರ್ಮ್, ಶೀಪ್ ಫಾರ್ಮ್ ಮತ್ತು ಪೌಲ್ಟ್ರಿ ಫಾರ್ಮ್—ಕನಿಷ್ಠ ಪಕ್ಷ ಈ ೩ ಫಾರಂಗಳನ್ನು ನಮ್ಮ ಜಿಲ್ಲೆಯಲ್ಲಿ ಮಾಡಲೇಬೇಕು ಎಂದು ಹೇಳುತ್ತೇನೆ. ಮಿಲ್ಕ್ ರೂಟ್ಸ್ ಏನಿವೆ, ರಸ್ತೆ ಇರುವ ಕಡೆ ಮಾತ್ರ ತೆಗೆದುಕೊಳ್ಳುತ್ತಾರೆ. ರಸ್ತೆ ಇಲ್ಲದೇ ಇರುವ ಕಡೆ ಹಾಲನ್ನು ಕಲೆಕ್ಟ್ ಮಾಡುವುದಿಲ್ಲ. ಆದುದರಿಂದ more milk routes must be established early. ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಿಲ್ಕ್ ಕಲೆಕ್ಟ್ ಮಾಡುವಾಗ ಎಲ್ಲಾ ಕಾಲದಲ್ಲೂ ಒಂದೇ ರೀತಿ ಮಿಲ್ಕ್ ಕಲೆಕ್ಟ್ ಮಾಡುವುದಿಲ್ಲ—ಏಕೆ ಎಂದು ಕೇಳುತ್ತೇನೆ. ಮಳೆಗಾಲದಲ್ಲಿ ಹೆಚ್ಚಿಗೆ ಹಾಲು ಸಿಗುತ್ತದೆ, ಆಗ ಕಲೆಕ್ಷನ್ ಕಡಿಮೆ ಮಾಡುತ್ತಾರೆ, ಅದೇ ಬೇಸಿಗೆಯಲ್ಲಿ ಡಿಮ್ಯಾಂಡ ಮಾಡಿ ಹಾಲನ್ನು ಪಡೆಯುತ್ತಾರೆ, ಈ ವೇರಿಯೇಷನ್ ಏಕೆ ಎಂದು ಕೇಳುತ್ತೇನೆ. ಯಾವಾಗಲೂ ಯೂನಿಫಾರು ಆಗಿ ಹಾಲನ್ನು ಕಲೆಕ್ಟ್ ಮಾಡಬೇಕು. ಸರ್ಪ್ಲಸ್ ಕಲೆಕ್ಟ್ ಆಗುವುದಾದರೆ ನಮ್ಮ ರಾಜ್ಯದಲ್ಲಿ ಮಿಲ್ಕ್ ಪೌಡರ್ ಮಾಡತಕ್ಕ ಪ್ಲಾಂಟನ್ನು ಎಸ್ಟಾಬ್ಲಿಷ್ ಮಾಡಿ. ಅದು ಒಂದು ಸ್ಕೋಪ್ ಇದೆ. ಇದರಲ್ಲಿ ಸಂಸ್ಕರಣ ಮಾಡಿದಂಥ ಪೌಡರನ್ನು ಸಮ್ಮರ್‌ನಲ್ಲಿ ಉಪಯೋಗ ಮಾಡಿಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ಕಾರ ಕಲೆಕ್ಟ್ ಮಾಡುವಂಥ ಒಂದು ಲೀಟರ್ ಹಾಲಿಗೆ ಏನು ಬೆಲೆ ನಿಗದಿ ಮಾಡಿದ್ದೀರಿ, ಇದು ಏನೇನೂ ಸಾಲದು. ರೈತರ ಖರ್ಚು ವೆಚ್ಚ ದೃಷ್ಟಿಯಿಂದ ಇದು ಅತೀ ಕಡಿಮೆ ಬೆಲೆ ಎಂದು ನಾನು ಹೇಳಬಯಸುತ್ತೇನೆ. ಒಂದು ಲೀಟರ್ ಹಾಲನ್ನು ಉತ್ಪತ್ತಿ ಮಾಡಬೇಕಾದರೆ ಎಷ್ಟು ವೆಚ್ಚ

ದಾಗುತ್ತದೆ, ಹುಲ್ಲು, ಬೂಸಾ ಖರ್ಚನ್ನು ನೋಡಿಕೊಂಡು ರೈತನಿಗೆ ಬೆಲೆ ನಿಗದಿ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ. ನಾವು ಗುಜರಾತಿಗೆ ಹೋಗಿದ್ದಾಗ ನೋಡಿದ್ದೇವೆ. ಅಲ್ಲಿ ಎಲ್ಲಾ ಕಾಲದಲ್ಲೂ ಹಾಲನ್ನು ಕಲೆಕ್ಟ್ ಮಾಡುತ್ತಾರೆ ಮತ್ತು ಇಡೀ ರಾಜ್ಯಾದ್ಯಂತ ಯೂನಿಫಾರಂ ಸ್ಟ್ಯಾಂಡರ್ಡ್ ಪ್ರೈಸ್ ಫಿಕ್ಸ್ ಮಾಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಮಾಡಬೇಕು ಎಂದು ನಾನು ಹೇಳುತ್ತೇನೆ. ಕೇರಳ ರಾಜ್ಯದಲ್ಲಿ they have established one Egg Powder Plant, and it has got lot of demand from the foreign countries. So, I would like to suggest to the Government to establish one Egg Powder Plant in our State. ಇನ್ನು ಅಡ್ಮಿನಿಸ್ಟ್ರೇಟೀವ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಬರೀ ಐ. ಎ. ಎಸ್. ದೊಡ್ಡ ದೊಡ್ಡ ಆಫೀಸರುಗಳನ್ನು ಇಲಾಖೆಯ ಗಂಧವೇ ಗೊತ್ತಿಲ್ಲದೇ ಇರುವಂಥ ವ್ಯಕ್ತಿಗಳನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡುವುದು ಬೇಡ. ಕೆಲವರು ಎಕ್ಸ್‌ಪರ್ಟ್ಸ್ ಇದ್ದಾರೆ. ಅದೇ ಫೀಲ್ಡ್‌ನಲ್ಲಿ ನುರಿತಂಥ ಟೆಕ್ನಿಕಲ್ ಕ್ವಾಲಿಫೈಡ್ ಪರ್ಸನ್ಸ್ ಯಾರಿದ್ದಾರೆ ಅವರನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಬೇಕು ಎಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

೪—೦೦ ಪಿ. ಎಂ.

† ಶ್ರೀ ಕೆ. ರಾಮಾ ಭಟ್ (ಪುತ್ತೂರು). –ಸನ್ಮಾನ್ಯ ಅಧ್ಯಕ್ಷರೇ, ನಾನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬರತಕ್ಕಂಥವನು. ನಮ್ಮಲ್ಲಿ ಪ್ರತಿ ವರ್ಷವರ್ಷವೂ ದನಗಳ ಜಾತ್ರೆಯಾಗುತ್ತದೆ ಅಲ್ಲಿ ಸಾವಿರಾರು ಜಾನುವಾರುಗಳು ಬರುತ್ತವೆ. ಉದಾಹರಣೆಗೆ ಹಾಸನದ ಜಾತ್ರೆ, ಸುಬ್ರಮಣ್ಯ ಜಾತ್ರೆ ಇಂಥಾ ಹಲವಾರು ಜಾತ್ರೆಗಳಿಗೆ ಸಾವಿರಾರು ಜಾನುವಾರುಗಳು ಪ್ರತಿವರ್ಷವೂ ಬರುತ್ತವೆ. ಆದರೆ ಅದರಲ್ಲಿ ಎಷ್ಟೋ ಜಾನುವಾರುಗಳು ಸತ್ತು ಹೋಗುತ್ತಿವೆ ಅದಕ್ಕೆ ಕಾರಣವೇನು ಎಂಬುದು ಗೊತ್ತಾಗುತ್ತಿಲ್ಲ. ಮತ್ತೆ ಕೆಲವನ್ನು ಕೇರಳಕ್ಕೆ ಹೊಡೆದುಕೊಂಡು ಹೋಗಿ ಬಿಡುತ್ತಿದ್ದಾರೆ. ಈ ರೀತಿ ದನಗಳು ಸಾಯುವುದಕ್ಕೆ ಕಾರಣವೇನು ? ಅದಕ್ಕೆ ಆಹಾರದ ಕೊರತೆಯೋ, ಅಥವಾ ಹವಾಮಾನದ ಕಾರಣವೋ ಎನ್ನುವುದನ್ನು ಸರ್ಕಾರದವರು ಶೋಧನೆ ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿ ಜಾನುವಾರುಗಳ ಲುಕ್ಸಾನು ಆಗುತ್ತಿದೆ. ಅದಕ್ಕಾಗಿ ತಾವು ಒಂದು ಸಂಶೋಧನೆ ಮಾಡಿ ಯಾವ ಕಾರಣದಿಂದ ಆ ರೀತಿ ಜಾನುವಾರುಗಳು ಸಾಯುತ್ತವೆ ಎಂಬುದನ್ನು ಕಂಡು ಹಿಡಿಯುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮಾತ್ರವಲ್ಲ ನಮ್ಮ ಜಿಲ್ಲೆಯಲ್ಲಿ ಯಾವ ತಳಿಗಳು ಅಲ್ಲಿಯ ಹವೆಗೆ ಬಾಳಬಲ್ಲವು ಎಂಬುದರ ಬಗ್ಗೆಯೂ ತಾವು ಸಂಶೋಧನೆ ಮಾಡಿ ದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬೇಕೆಂದು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನು ಕ್ಲಿನಿಕಲ್ ಲ್ಯಾಬೋರೇಟರಿ ಬಗ್ಗೆ ಮಾನ್ಯ ಸಚಿವರು ತಮ್ಮ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ ನಾನು ೧೯೭೭--೭೮ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ೪ ವರ್ಷಗಳ ಹಿಂದೆ ನಡೆದ ಘಟನೆ ತಮಗೆ ಹೇಳುತ್ತೇನೆ ಏತಕ್ಕೆಂದರೆ ಅದು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ನಮ್ಮ ಮನೆಯಲ್ಲಿಯೇ ಸಾಕಿದ್ದ ೪ ಜಾನುವಾರುಗಳಲ್ಲಿ ಒಕ್ಕೆ ರೋಗ ಬಂತು, ಆಗ ನಾನು ಹೋಗಿ ಡಾಕ್ಟರನ್ನು ಕರೆದುಕೊಂಡು ಬಂದು ತೋರಿಸಿದೆ ಆದರೂ ಆ ಜಾನುವಾರುಗಳು ಉಳಿಯಲಿಲ್ಲ. ಸತ್ತು ಹೋದವು, ಆ ನಂತರ ಆ ಡಾಕ್ಟರ್ ಅದರ ಲಿವರ್, ಅದರ ಬ್ರೇನ್, ಮತ್ತು ಅದರ ಕರಳುಗಳನ್ನು ಶಸ್ತ್ರ ಚಿಕಿತ್ಸೆ ಮಾಡಿ ತೆಗೆದುಕೊಂಡು ಹೋದರು. ಆದರೆ ದುರ್ದೈವ ೪ ವರ್ಷಗಳಾದರೂ ಇವತ್ತಿಗೂ ಯಾವ ಕಾರಣದಿಂದ ಆ ಜಾನುವಾರುಗಳು ಸತ್ತವು ಎಂಬುದನ್ನು ಅವರು ನಮಗೆ ತಿಳಿಸಿಲ್ಲ. ಯಾವ ಕಾರಣದಿಂದ ಈ ರೀತಿ ಸಾಮೂಹಿಕವಾಗಿ ರೋಗ ಬಂದು ಆ ರೀತಿ ಜಾನುವಾರುಗಳು ಸತ್ತು ಹೋದವು ಎನ್ನುವುದರ ಬಗ್ಗೆ ಪತ್ತೆ ಹಚ್ಚದೇ ಅಲಕ್ಷ್ಯ ಮನೋಭಾವನೆ ತಳುವುದು ಸರಿಯಲ್ಲ. ಮುಂದೆ ಆ ರೀತಿ ನಡೆಯಬಾರದು ಎನ್ನುವ ದೃಷ್ಟಿಯಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ ಅಷ್ಟೆ.

ಇನ್ನು, Integrated Development of Western Ghats Region ಎಂದು ಹೇಳುವಾಗ ನಮ್ಮ ರಿಪೋರ್ಟ್‌ನ್ನು ಉಲ್ಲೇಖ ಮಾಡುವಾಗ ಅದರಲ್ಲಿ ಬೆಳಗಾಂ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಈ ಕಡೆಗಳಲ್ಲಾ ಕೆಲವೊಂದು ವಿಶೇಷ

ಸೌಲತ್ತುಗಳನ್ನು ಕೊಡುವಾಗ ಉಲ್ಲೇಖ ಮಾಡಿದ್ದೀರಿ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಎಲ್ಲಾ ಸೌಲತ್ತುಗಳನ್ನು ಎಲ್ಲಿಗೆ ಹೋಗಿ ಮುಟ್ಟಿವೆ ಎನ್ನುವುದು ಗೊತ್ತಿಲ್ಲ. ನನಗೆ ಅಜ್ಞಾನವಿರಬಹುದು ಆದರೆ ಮಾನ್ಯ ಮಂತ್ರಿಗಳವರು ನನಗೆ ಇದರ ಬಗ್ಗೆ ಸ್ವಲ್ಪ ತಿಳುವಳಿಕೆ ಕೊಟ್ಟ ಯಾವ ಸೌಲಭ್ಯಗಳು, ಸವಲತ್ತುಗಳು ಎಂದರೆ. "Artificial i.sen ination units, |a ture development in private holdings, supply of cross bred bulls to farmers free of cost and subsidi ing the cost of feed for rearing female calves have been taken up." ಎಂದು ಹೇಳಿದ್ದಾರೆ, ಅವು ನಮ್ಮ ಜಿಲ್ಲೆಗೆ ಮಾತ್ರ ಖಂಡಿತವಾಗಿಯೂ ಬಂದು ಮುಟ್ಟಿಲ್ಲ. ಬಾಕಿ ಜಿಲ್ಲೆಯವರ ವಿಚಾರ ನನಗೆ ಗೊತ್ತಿಲ್ಲ. ಬಹುಶಃ ಆ ಜಿಲ್ಲೆಯವರು ಅದನ್ನು ಅವರು ಪ್ರಸ್ತಾಪಿಸಬಹುದು. ದಯವಿಟ್ಟು ನನ್ನ ಕ್ಷೇತ್ರದ ಬಗ್ಗೆ ನಾನು ಕೇಳುವುದಾದರೆ ಎಲ್ಲೆಲ್ಲಿಗೆ ಅವುಗಳನ್ನು ಮುಟ್ಟಿಸಿದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕೆಂದು ಕೇಳುತ್ತೇನೆ. ೧೯೭೭—೭೮ರಲ್ಲಿ ೧೪.೨೦ ಲಕ್ಷ. ಗಳಷ್ಟು ಪ್ಲಾನ್ ಇರಿಸಿ ಅದರಲ್ಲಿ ೮೬೯ ರಷ್ಟು ಖರ್ಚು ಮಾಡಲಾಗಿದೆಂದು ತಿಳಿಸಿದ್ದೀರಿ. ಆದರೆ ನಮ್ಮ ಕ್ಷೇತ್ರದಲ್ಲಿ ಎಷ್ಟು ನೂರು, ಎಷ್ಟು ಸಾವಿರ ರೂ.ಗಳ ಖರ್ಚು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦—೨೦ ಮೈಲಿಗಳ ದೂರದಲ್ಲಿ ಒಂದೊಂದು ಆಸ್ಪತ್ರೆಗಳಿವೆ, ಆರ್ಟಿಫಿಶಿಯಲ್ ಇನ್ಸೆಮಿನೇಷನ್ ಮಾಡಿಸಬೇಕೆಂದರೆ ಅವರು ಜಾನುವಾರುಗಳನ್ನು ೨೦ ಮೈಲಿಗಳ ದೂರಕ್ಕೆ ಕರೆದುಕೊಂಡು ಹೋಗಬೇಕು. ಯಾವ ಸೌಕರ್ಯವೂ ಇಲ್ಲದೇ ಇರುವುದರಿಂದ ಹೋಗಲಿ ಡಾಕ್ಟರನ್ನೇ ಕರೆದುಕೊಂಡು ಹೋಗಬೇಕು ಎಂದರೆ ಕಾರಿನಲ್ಲಿಯೋ, ಟ್ಯಾಕ್ಸಿಯಲ್ಲಿಯೋ ಅವರನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಹಾಗೆ ಮಾಡಿದರೆ ಅದರ ಖರ್ಚು ವೆಚ್ಚ ಎಷ್ಟಾಗುತ್ತದೆಂಬುದನ್ನು ತಾವು ನೋಡಬಹುದು. ಆದುದರಿಂದ ನಾನು ತಮಗೆ ಸಲಹೆ ಮಾಡುವುದೇನೆಂದರೆ ೩—೪ ಗ್ರಾಮಗಳ ಹತ್ತಿರ ಒಂದೊಂದು ಆಸ್ಪತ್ರೆಯನ್ನು ಮಾಡುವುದು ಉತ್ತಮವೆಂದು ಹೇಳುತ್ತೇನೆ.

ಆ ಮೇಲೆ ಈ ಆರೋಗ್ಯ ಸಂದರ್ಶಕರನ್ನು ನೇಮಿಸಿ ಅವರು ಪ್ರತಿಯೊಂದು ಹಳ್ಳಿಗೂ ಸಂದರ್ಶನ ಕೊಟ್ಟು ಅಲ್ಲಿರುವ ಜಾನುವಾರುಗಳ ಯೋಗ ಕ್ಷೇಮವನ್ನು ವಿಚಾರಿಸಿ, ಅಲ್ಲಿಯ ಜಾನುವಾರುಗಳ ಮಾಲೀಕರಿಗೆ ವೇಳೆಗೆ ಸರಿಯಾಗಿ ಅಡ್ವೈಜ್ ಕೊಟ್ಟು ಜಾನುವಾರುಗಳನ್ನು ನೋಡಿಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿದರೆ ಒಳ್ಳೆಯದೆಂದು ನನಗೆ ಅನ್ನಿಸುತ್ತದೆ.

ಇನ್ನು ಗೋಮಾಳದ ಬಗ್ಗೆ ಹೇಳುವುದಾದರೆ. ಪ್ರತಿಯೊಂದು ಗ್ರಾಮದಲ್ಲೂ ಗೋಮಾಳವೆಂದು ದನಗಳಿಗೆ ಹಸಿರು ಹುಲ್ಲಿಗಾಗಿ ಜಾಗವನ್ನು ಬಿಟ್ಟಿರುತ್ತಿದ್ದರು. ಆದರೆ ಇವತ್ತು ಗೋಮಾಳ ಜಾಗದಲ್ಲಿ ಗೇರು ಬೀಜವನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಬಿಟ್ಟಿದ್ದಾರೆ. ಇದರಿಂದಾಗಿ ಗ್ರಾಮಗಳಲ್ಲಿ ಜಾನುವಾರುಗಳಿಗೆ ಒಳ್ಳೆಯ ಹಸಿರು ಮೇವು ಇಲ್ಲದಂತಾಗಿದೆ. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಗ್ಗೆ ಜಾನುವಾರುಗಳಿಗೆ ಬಹಳ ಅನ್ಯಾಯವಾಗಿದೆ, ಆದುದರಿಂದ ಸರ್ಕಾರದವರು ಇನ್ನು ಮುಂದಾದರೂ ಪ್ರತಿಯೊಂದು ಗ್ರಾಮದಲ್ಲೂ ಗೋಮಾಳ ಜಮೀನನ್ನು ಪ್ರತ್ಯೇಕವಾಗಿ ಇರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ, ಕೋಳಿ ಸಾಕಾಣಿಕೆಯ ಬಗ್ಗೆ ಹೇಳುವುದಾದರೆ ಸರ್ಕಾರದವರು ಕೋಳಿ ಸಾಕಾಣಿಕೆಯ ಬಗ್ಗೆ ನಿಮ್ಮ ಇಲಾಖೆಯವರು ರೈತರಿಗೆ ಉತ್ತೇಜನ ಕೊಡುತ್ತಿದ್ದಾರೆ. ಆದರೆ ಇವತ್ತು ಏನು ಆಗುತ್ತಿದೆಂದರೆ ಬ್ಲೊಟ್ಟರು ಸುಮಾರು ೪ ಸಾವಿರ ೫ ಸಾವಿರ ಕೋಳಿಗಳನ್ನು ಸಾಕುವವರಿದ್ದಾರೆ. ಅವರು ಏನು ಮಾಡುತ್ತಿದ್ದಾರೆಂದು ಈ ಸಣ್ಣ ಪುಟ್ಟ ರೈತರು ಏನಿದ್ದಾರೆ ಅವರು ಕೋಳಿಗಳನ್ನು ಸಾಕುತ್ತಿದ್ದಾರೆ ಅವರನ್ನು ಮಾರ್ಕೆಟ್ಟಿನಿಂದ ಓಡಿಸುವುದಕ್ಕೆ ಪ್ರಯತ್ನ ನಡೆಸಿದ್ದಾರೆ. ರೈತರು ೪೫ ಪೈಸೆಗೆ ಒಂದು ಕೋಳಿ ಮೊಟ್ಟೆ ಮಾರಿದರೆ ಇವರು ೩೦—೩೫ ಪೈಸೆಗೆ ಮಾರಿ ಅವರ ಮೇಲೆ ಕಾಂಪಿಟೀಷನ್ ನಡೆಸುತ್ತಿದ್ದಾರೆ ಹೀಗಾದರೆ ರೈತರು ಅವರ ಬಿಡುವಿನ ಕಾಲದಲ್ಲಿ ಕೋಳಿ ಸಾಕುವುದನ್ನು ಬಿಡುವ ಪರಿಸ್ಥಿತಿ ಬರುತ್ತದೆ ಆದುದರಿಂದ ಇದರ ಬಗ್ಗೆ ಸರ್ಕಾರದವರು ಸೂಕ್ತ ಗಮನ ಕೊಟ್ಟು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾವು ಬರೀ ಪುಸ್ತಕದಲ್ಲಿ, ಭಾಷಣಗಳಲ್ಲಿ ಪೋಲ್ಟ್ರಿ ಮಾಡಬೇಕೆಂದು ರೈತರಿಗೆ ಹೇಳಿದರೆ, ರೈತರು ಉದ್ಧಾರವಾಗಬೇಕೆಂದರೆ ಉದ್ಧಾರವಾಗುವುದಿಲ್ಲ, ಅದನ್ನು ಕಾರ್ಯಾಚರಣೆಗೆ ತರುವುದು ಕಷ್ಟವಿದೆ. ಆದಕ್ಕೆ ತಾವು ಒಂದು ಸರಿಯಾದ ಬೆಲೆಯನ್ನು ನಿಗದಿ ಮಾಡಿ ಕೋಳಿ ಸಾಕಾಣಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯುವುದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಮಂಡಿಸಿರತಕ್ಕ ಪಶುಸಂಗೋಪನಾಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ೧೦೦ ಕ್ಕೆ ೮೦ ರಷ್ಟು ರೈತರೇ ಇರತಕ್ಕಂಥ ನಮ್ಮ ದೇಶದಲ್ಲಿ ರೈತರ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಪಶುಸಂಗೋಪನ, ಕುರಿ ಸಾಕಾಣಿಕೆ ಮತ್ತು ಕೋಳಿ ಸಾಕಾಣಿಕೆ ಒಂದು ಉಪಕಸಬು ಆಗುವುದರ ಜೊತೆಗೆ ರೈತರಿಗೆ ವ್ಯವಸಾಯ ಇಲ್ಲದ ಬಿಡುವಿನ ಕಾಲದಲ್ಲಿ ಅವನಿಗೆ ಅದೊಂದು ಉಪ ಕಸಬಾಗುವುದರಿಂದ ಅದಕ್ಕಾಗಿ ಸರ್ಕಾರದವರು ಅನೇಕ ಉಪಯುಕ್ತ ಯೋಜನೆಗಳನ್ನು ತಂದು ಕಾರ್ಯಗತ ಮಾಡುತ್ತಿದ್ದಾರೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯಲ್ಲಿ ದಕ್ಷರು ಮತ್ತು ನಿಷ್ಠೆಯಿಂದ ಮತ್ತು ರೈತರ ಅಭಿವೃದ್ಧಿಯ ಬಗ್ಗೆ ಅನುಕಂಪ ಹೊಂದಿರತಕ್ಕ ಅಧಿಕಾರಿಗಳು ಇರುವುದರಿಂದ ಈ ಒಂದು ಕಾರ್ಯ ಉತ್ತಮ ದಿಶೆಯಲ್ಲಿ ನಡೆಯುತ್ತಿದೆಂದು ಹೇಳಿದರೆ ತಪ್ಪಾಗಲಾರದು. ಅದು ಇನ್ನೂ ನಿಷ್ಠೆ ಮತ್ತು ದಕ್ಷತೆಯಿಂದ ಮತ್ತು ಇನ್ನು ಹೆಚ್ಚು ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ ಪತ್ತೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ ಮುಖ್ಯವಾಗಿ ನಜಗಳಿಗೆ ಅನುಕೂಲ ಮಾಡಿಕೊಡತಕ್ಕಂಥ ಅನುಕಂಪವನ್ನು ಹೊಂದಿರತಕ್ಕ ಮತ್ತು ದಕ್ಷತೆಯಿಂದ ಇರತಕ್ಕಂಥ ಅಧಿಕಾರಿಗಳ ಸಂಖ್ಯೆ ಈ ದೇಶದಲ್ಲಿ ಇನ್ನು ಹೆಚ್ಚು ಬೆಳೆಯದೇ ಹೋದರೆ ಬಹುಶಃ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಏನೂ ಯೋಜನೆಗಳನ್ನು ಹಾಕಿದರೂ ಅದರಿಂದ ರೈತರಿಗೆ ಯಾವ ಪ್ರಯೋಜನವೂ ಬಾರದೇ ವ್ಯರ್ಥವಾಗಿ ಹೋಗುತ್ತದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ರೈತರು ವ್ಯವಸಾಯ ಕಾಲದಲ್ಲಿ ಉಪ ಕಸಬನ್ನಾಗಿ ಮಾಡಿಕೊಳ್ಳುವುದಕ್ಕೆ ಇದು ಬಹಳ ಅನುಕೂಲವಾಗುತ್ತದೆ. ಈ ಮಿಶ್ರ ತಳಿ ಪಶುಗಳನ್ನು ಅಭಿವೃದ್ಧಿ ಪಡಿಸುವುದರ ಬಗ್ಗೆ ಈ ಇಲಾಖೆಯವರು ಶ್ಲಾಘನೀಯವಾದ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ ಆದರೂ ಕೂಡ ನಿರೀಕ್ಷಿಸಿದ ಮಟ್ಟದಲ್ಲಿ ರೈತರಿಗೆ ದೊರೆಯುತ್ತಿಲ್ಲ. ಕಾರಣವೇನೆಂದರೆ ರೈತರಿಗೆ ಇದರ ಬಗ್ಗೆ ಸರಿಯಾದ ಮಾಹಿತಿ ಸಾಲದಾಗಿದೆ ಮಿಶ್ರ ತಳಿಯ ಕರುಗಳು ಗ್ರಾಮಾಂತರ ಪ್ರದೇಶದಲ್ಲಿ ಅಲ್ಲಲ್ಲಿ ಕಾಣುತ್ತಿದ್ದರೂ ಕೂಡ ಅವುಗಳಿಗೆ ಯಾವರೀತಿಯ ಆಹಾರವನ್ನು ಕೊಡಬೇಕು, ಯಾವರೀತಿ ಆ ಮಿಶ್ರತಳಿಯ ಕರುಗಳನ್ನು ಸಾಕಬೇಕು ಎನ್ನುವ ಬಗ್ಗೆ ಸರಿಯಾದ ಪ್ರಚಾರ ಇಲ್ಲದೇ ಇರುವುದರಿಂದ ಹಳ್ಳಿಗಳಲ್ಲಿ ಮಿಶ್ರತಳಿ ಪಶುಸಂಪತ್ತು ಅಷ್ಟು ಪರಿಣಾಮಕಾರಿಯಾಗಿ ಅಭಿವೃದ್ಧಿಯಾಗುತ್ತಾ ಇಲ್ಲ. ಈ ಬಗ್ಗೆ ಇಲಾಖೆಯವರು ಅಲ್ಲಿ ಹೆಚ್ಚು ಪ್ರಚಾರಕಾರ್ಯವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಇವತ್ತಿನದಿವಸ ಇರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೂ ಕೂಡ ಇದರಿಂದ ಸಾಧ್ಯವಾಗುತ್ತದೆ ಹೇಗೆಂದರೆ ಗ್ರಾಮಾಂತರದಲ್ಲಿ ಕುರಿಸಾಕಾಣಿಕೆ, ಕೋಳಿ ಸಾಕಾಣಿಕೆ ಬಗ್ಗೆ ಹೆಚ್ಚು ಪ್ರಚಾರ ಮಾಡಿದರೆ ಇದು ಜನಗಳಿಗೆ ಉತ್ತಮವಾದ ವೃತ್ತಿಯನ್ನು ಒದಗಿಸುತ್ತದೆ. ಆಗ ನಿರುದ್ಯೋಗ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ನಿವಾರಣೆಯಾಗುತ್ತದೆ. ಇತ್ತೀಚೆಗೆ ಸರ್ಕಾರದವರು ವಿದ್ಯಾವಂತ ನಿರುದ್ಯೋಗಿಗಳಿಗೆ ತಿಂಗಳಿಗೆ ೧೫೦. ೨೦೦ ರೂಪಾಯಿಗಳನ್ನು ಕೊಟ್ಟು ಅವರಿಗೆ ಸಹಾಯ ಮಾಡುತ್ತಿದ್ದಾರೆ. ಆ ರೀತಿ ಅವರಿಗೆ ೧೫೦-೨೦೦ ರೂಪಾಯಿಗಳ ಹಣ ಸಹಾಯವನ್ನು ಮಾಡುವುದರ ಬದಲು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ರೈತರ ಮಕ್ಕಳಿಗೆ ೫೦೦ ರೂಪಾಯಿಗಳ ಬಡ್ಡಿರಹಿತ ಹಣವನ್ನು ಕೊಟ್ಟು ೫-೧೦ ವರ್ಷಗಳು ಕಳೆದ ಮೇಲೆ ಅವರು ಹಣವನ್ನು ವಾಪಸ್ಸು ಕೊಡುವ ವ್ಯವಸ್ಥೆ ಮಾಡಿದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ ಹಾಗೂ ಗ್ರಾಮಾಂತರ ಪ್ರದೇಶದ ಆರ್ಥಿಕ ಪರಿಸ್ಥಿತಿ ಕೂಡ ಅಭಿವೃದ್ಧಿಯ ಸ್ಥಿತಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ಈಗ ನೀವು ಕೊಡುತ್ತಾ ಇರತಕ್ಕಂಥ ೧೫೦ ೨೦೦ ರೂಪಾಯಿಗಳ ಸಹಾಯಧನ ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಟ್ಟ ಹಾಗೆ ಆಗಿದೆ ಬಹುಶಃ ಹೊಟ್ಟೆಗೆ ಇಲ್ಲದವರಿಗೆ ಆಹಾರ ಕೊಟ್ಟಹಾಗೆ ಆಗಿದೆ. ಈ ಯೋಜನೆ ಫಲಪ್ರದವಾಗುತ್ತಾ ಇಲ್ಲ. ಆದ್ದರಿಂದ ಈ ಯೋಜನೆಯನ್ನು ಬಿಟ್ಟು ಸರ್ಕಾರ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ನಿರುದ್ಯೋಗಿ ಯುವಕರಿಗೆ ಕುರಿಸಾಕಾಣಿಕೆಗೆ, ಕೋಳಿ ಫಾರಂನ್ನು ತೆರೆಯುವುದಕ್ಕೆ ಹೆಚ್ಚು ಇನ್‌ಸ್ಟಾಲ್‌ಮೆಂಟ್ ಇಲ್ಲದ ಬಡ್ಡಿರಹಿತ ಸಾಲವನ್ನು ಅವರಿಗೆ ಮಂಜೂರು ಮಾಡಿದರೆ ಅದರಿಂದ ಹೆಚ್ಚು ಉಪಯೋಗವಾಗುತ್ತದೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಮಿಶ್ರತಳಿಯ ಹಸುಗಳು ಪರಿಣಾಮಕಾರಿಯಾಗಿ ಅಭಿವೃದ್ಧಿ ಆಗದೇ ಇರುವುದಕ್ಕೆ ಇರುವ ಮುಖ್ಯವಾದ ಅಡ್ಡಿ ಏನೆಂದರೆ ಅವಕ್ಕೆ ಒಳ್ಳೆಯ ಮೇವು ಸಿಕ್ಕದೇ ಇರುವುದು. ಗ್ರಾಮಾಂತರ ಪ್ರದೇಶದಲ್ಲಿ ಅವಕ್ಕೆ ಒಳ್ಳೆಯ ಮೇವು ಸಿಕ್ಕುತ್ತಾ ಇಲ್ಲ. ರೈತರು ಹೆಚ್ಚಾಗಿ ದನಗಳನ್ನು ಗೋಮಾಳದಲ್ಲಿ ಮೇಯಿಸುತ್ತಾರೆ. ಇಷ್ಟಿಷ್ಟು ದನಗಳಿಗೆ ಇಷ್ಟು ಗೋಮಾಳಗಳು ಎಂದು

ತಾವು ಬಿಟ್ಟಿದ್ದೀರಿ. ಅಲ್ಲಿ ಸಿಗತಕ್ಕಂಥ ಮೇವು ಅವಕ್ಕೆ ಸಾಕಾಗುವುದಿಲ್ಲ. ಆದ್ದರಿಂದ ಗೋಮಾಳ ಪ್ರದೇಶದಲ್ಲಿ ಬೆಳೆಯತಕ್ಕಂಥ ಹುಲ್ಲನ್ನು ಅಭಿವೃದ್ಧಿ ಪಡಿಸುವುಕ್ಕೆ ಪ್ರಯತ್ನ ಮಾಡಬೇಕು. ಈ ಬಗ್ಗೆ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ ಯಾವ ಗೋಮಾಳ ಪ್ರದೇಶದಲ್ಲಿ ೧೦೦ ದಿನಗಳನ್ನು ಸಾಕುವುದಕ್ಕೆ ಅವಕಾಶವಿದೆಯೋ ಅಲ್ಲಿ ೩೪೦ ದಿನಗಳನ್ನು ಸಾಕುವುದಕ್ಕೆ ಅವಕಾಶ ಇರುವುದರಿಂದ ಗ್ರಾಮಾಂತರ ಪ್ರದೇಶದ ಗೋಮಾಳ ಅಲ್ಲಿ ಹುಲ್ಲನ್ನು ಅಭಿವೃದ್ಧಿಪಡಿಸುವ ಬಗ್ಗೆ ಯಾವುದಾದರೊಂದು ನಿರ್ದಿಷ್ಟ ಯೋಜನೆಯನ್ನು ಸರ್ಕಾರದವರು ಹಾಕಿ ಕೊಳ್ಳಬೇಕು, ಕೊನೆಯಪಕ್ಷ ತಾಲ್ಲೂಕು ಅಥವಾ ಹೋಬಳಿಯ ೩-೪ ಕಡೆಗಳಲ್ಲಿ ಗೋಮಾಳಪ್ರದೇಶಗಳನ್ನು ಅಭಿವೃದ್ಧಿ ಪಡಿಸಿ ಅಲ್ಲಿ ಹುಲ್ಲನ್ನು ಚೆನ್ನಾಗಿ ಬೆಳೆಸಿ ಬೇರೆ ಹಳ್ಳಿಗಳಿಗೂ ಉದಾಹರಣೆಯಾಗುವ ರೀತಿಯಲ್ಲಿ ಅದನ್ನು ಮಾಡಬೇಕೆಂದು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಈ ಕುರಿ ಸಾಕಾಣಿಕೆಯನ್ನು ಅಭಿವೃದ್ಧಿಗೊಳಿಸಬೇಕು. ಏಕೆಂದರೆ ಮಾಂಸದ ದೃಷ್ಟಿಯಿಂದ ಮತ್ತು ಒಳ್ಳೆಯ ಉಣ್ಣೆಯ ಉತ್ಪತ್ತಿ ದೃಷ್ಟಿಯಿಂದ ಕುರಿಗಳ ತಳಿಯನ್ನು ಅಭಿವೃದ್ಧಿ ಪಡಿಸಬೇಕು ಎಂದು ಹೇಳುತ್ತೇನೆ. ಈಗಾಗಲೇ ನಮ್ಮ ಚಳ್ಳಕೆರೆಯಲ್ಲಿ ಒಂದು ಕುರಿ ಫಾರಂ ಪ್ರಾರಂಭವಾಗಿದೆ. ಅದರಿಂದ ದೇಶಕ್ಕೆ ಒಳ್ಳೆಯ ಫಲ ದೊರೆಯುತ್ತದೆ ಎಂದು ಹೇಳುವಂಥಾದ್ದನ್ನು ಕಳೆದ ನಾಲ್ಕಾರು ವರ್ಷಗಳಿಂದ ಕೇಳಿದ್ದೇನೆ ಆದರೆ ಚಳ್ಳಕೆರೆ ಕುರಿ ಫಾರಂನಲ್ಲಿ ಎಷ್ಟರಮಟ್ಟಿಗೆ ಕುರಿಗಳ ಅಭಿವೃದ್ಧಿಯಾಗಿದೆ. ಅದರಿಂದ ರೈತರಿಗೆ ಒಳ್ಳೆಯ ಪ್ರಯೋಜನವಾಗಿದೆಯೋ ಎಂಬುದು ಒಂದು ನಿಗೂಢ ಪ್ರಶ್ನೆಯಾಗಿ ಉಳಿದಿದೆ ಎಂದರೆ ತಪ್ಪಾಗಲಾರದು. ಹರಿಯಾನದಲ್ಲಿರುವ ಒಂದು ಕುರಿ ಫಾರಂನ್ನು ನಾನು ನೋಡಿದ್ದೇನೆ. ಅಲ್ಲಿ ೧೦ ಸಾವಿರ ಎಕರೆಯಲ್ಲಿ ಕುರಿ ಫಾರಂನ್ನು ಮಾಡಿಕೊಂಡು ಆಸ್ಟ್ರೇಲಿಯಾದಿಂದ ಕೆರಿಡಾಲ್ ರಾಮ್ ತರಿಸಿ ಕ್ರಾಸ್ ಮಾಡಿ ಕುರಿತಳಿಯನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಅವುಗಳನ್ನು ಕ್ರಾಸ್ ಮಾಡಿದಮೇಲೆ ರೈತರಿಗೆ ಕೊಟ್ಟು ಅಭಿವೃದ್ಧಿ ಪಡಿಸುವಂಥ ವ್ಯವಸ್ಥೆಯನ್ನು ನಾನು ನೋಡಿದ್ದೇನೆ. ಕರ್ನಾಟಕರಾಜ್ಯದಲ್ಲಿರತಕ್ಕಂಥ ಕುರಿಗಳ ಉಣ್ಣೆಯನ್ನು ಬಹುಷಃ ವರ್ಷಕ್ಕೆ ಎರಡು ಸಾರಿ ಕಟ್ ಮಾಡುತ್ತಾರೆ. ನಾವು ವರ್ಷದಲ್ಲಿ ೨ ಸಾರಿ ಉಣ್ಣೆಯನ್ನು ಕಟ್ ಮಾಡಿ ಎಷ್ಟು ಉಣ್ಣೆಯನ್ನು ಉತ್ಪತ್ತಿ ಮಾಡುತ್ತೇವೆಯೋ ಅದಕ್ಕಿಂತ ಎರಡರಷ್ಟು ಉಣ್ಣೆಯನ್ನು ಅವರು ವರ್ಷಕ್ಕೆ ಒಂದು ಸಾರಿ ಕಟ್ ಮಾಡುವುದರಿಂದ ಉತ್ಪತ್ತಿ ಮಾಡುತ್ತಿದ್ದಾರೆ. ಇಲ್ಲಿ ಒಂದು ಕುರಿಯ ಉಣ್ಣೆಯಿಂದ ೪ ರೂಪಾಯಿಗಳ ಉತ್ಪತ್ತಿ ಆಗುತ್ತದೆ, ಈ ಕ್ಯಾರಿಡಾಲ್ ರಾಮ್‌ನಿಂದ ಕ್ರಾಸ್ ಮಾಡಿ ಉಣ್ಣೆಯ ಉತ್ಪತ್ತಿ ಮಾಡಿದರೆ ಒಂದು ಕುರಿಗೆ ೧೫೦ ರೂಪಾಯಿಗಳವರೆಗೆ ಉತ್ಪತ್ತಿ ಬರುತ್ತದೆಂದು ನಾನು ಕೇಳಿದ್ದೇನೆ. ಈ ಬಗ್ಗೆ ತಾವು ಗಮನಹರಿಸಬೇಕೆಂದು ಹೇಳುತ್ತಿದ್ದೇನೆ ಇಂತಹ ಉತ್ತಮ ಕಾರ್ಯಗಳು ನಮ್ಮ ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಿಂದ ಆಗುತ್ತವೆ ಎಂದು ನಾವು ನಿರೀಕ್ಷಣೆ ಮಾಡಿದೆವು. ಆದರೆ ನಮ್ಮ ರಾಜ್ಯದಲ್ಲಿ ಇಂತಹ ಯೋಜನೆಗಳು ಇದ್ದರೂ ಕೂಡ ಉಣ್ಣೆಯ ಉತ್ಪತ್ತಿ ದೃಷ್ಟಿಯಿಂದ ಹೆಚ್ಚು ಕೆಲಸಕಾರ್ಯಗಳು ಆಗಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ, ಚಳ್ಳಕೆರೆಯಲ್ಲಿರುವ ಕುರಿಫಾರಂಗೆ ಲಕ್ಷಾಂತರ ರೂಪಾಯಿಗಳನ್ನು ಹಾಕಿ ಕುರಿ ತಳಿಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆಂದು ಸರ್ಕಾರದವರು ಆಗಿಂದಾಗ್ಗೆ ಪ್ರಚಾರ ಮಾಡುತ್ತಿದ್ದಾರೆ. ಈ ಬಗ್ಗೆ ತಾವು ಸಿಗಾ ವಹಿಸಬೇಕೆಂದು ಹೇಳುತ್ತೇನೆ. ಏಕೆಂದರೆ ಅಲ್ಲಿ ಹಣದ ಅವ್ಯವಹಾರಗಳು ನಡೆದಿದೆಯೆಂದು ಕೇಳಿದ್ದೇನೆ. ಅದೆಷ್ಟುಮಟ್ಟಿಗೆ ನಿಜ, ಎಷ್ಟುಮಟ್ಟಿಗೆ ಸುಳ್ಳು ಎಂಬುದು ನನಗೆ ಗೊತ್ತಿಲ್ಲ. ಅಲ್ಲಿಗೆ ಕೊಟ್ಟಂತಕ್ಕಂಥ ದುಡ್ಡು ಎಷ್ಟು, ಹೊರದೇಶದಿಂದ ಎಷ್ಟು ರಾಮ್‌ಗಳನ್ನು ತರಿಸಿದ್ದೀರಿ, ಅದರಿಂದ ಎಷ್ಟು ತಳಿಗಳು ಉತ್ಪತ್ತಿಯಾಗಿದೆ. ಅವುಗಳನ್ನು ಯಾವಯಾವ ಕಡೆಗಳಿಗೆ ಕೊಟ್ಟದ್ದೀರಿ ಎಂಬುದರ ಬಗ್ಗೆ ಪೂರ್ಣ ಮಾಹಿತಿಯನ್ನು ಕೊಡಬೇಕೆಂದು ಮಾನ್ಯಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ ಅಲ್ಲಿ ಅನೇಕ ಯುವಕರು ಕೋಳಿಸಾಕಾಣಿಕೆಗೆ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಕೋಳಿ ಫಾರಂಗಳನ್ನು ಪ್ರಾರಂಭ ಮಾಡಿದರು. ಆದರೆ ಅಲ್ಲಿಯ ಮೊಟ್ಟೆಗಳಿಗೆ ಸರಿಯಾದ ರೇಟ್ ಸಿಕ್ಕದೇ ಇದ್ದದ್ದರಿಂದ ಅನೇಕ ಜನ ಕೋಳಿ ಸಾಕಾಣಿಕೆ ಫಾರಂನ್ನು ತೆಗೆದುಬಿಟ್ಟಿದ್ದಾರೆ. ಆದ್ದರಿಂದ ನಾನು ಈ ಬಗ್ಗೆ ಸಲಹೆ ಕೊಡುವುದೇನೆಂದರೆ ಸಹಕಾರ ವಲಯದಲ್ಲಿ ಈ ಕೋಳಿ ಮೊಟ್ಟೆಗಳ ರೇಟ್ ಕಡಿಮೆಯಾಗುವುದಕ್ಕೆ ಅವಕಾಶ ಕೊಡದೇ ಒಂದು ಸರಿಯಾದ ರೇಟ್ ಸಿಕ್ಕುವಹಾಗೆ ಮಾಡಿ ಅವರಿಗೆ ರಕ್ಷಣೆ ಕೊಡಬೇಕೆಂದು ತಿಳಿಸುವುದಕ್ಕೆಬಯಸುತ್ತೇನೆ ಗ್ರಾಮಾಂತರ ಪ್ರದೇಶದಲ್ಲಿ ಕುರಿ ಕೋಳಿ ಮತ್ತು ಮಿಶ್ರತಳಿಯ ಹಸುಗಳನ್ನು ಸಾಕುವವರಿಗೆ ಬ್ಯಾಂಕ್‌ಗಳಿಂದ ಲೋನ್ ಕೊಡತಕ್ಕಂಥ ಒಂದು ಅಭಿವೃದ್ಧಿ ಯೋಜನೆ ಇದ್ದರೂ ಕೂಡ ರೈತರು ೫-೬ ಸಾರಿ ಅರ್ಜಿ ಹಾಕಿಕೊಂಡರೂ ಕೂಡ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಸಾಲವನ್ನು ಕೊಡುತ್ತಾ ಇಲ್ಲ. ಹೀಗಾಗಿ ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್‌ಗೆ ಈ ಅಭಿವೃದ್ಧಿಯೋಜನೆಯಿಂದ ಏನು ಅವರಿಗೆ ದುಡ್ಡು ದೊರಕಬೇಕಾಗಿತ್ತು ಆ ದುಡ್ಡು ಅವರಿಗೆ

ದೊರಕದೇ ವಂಚಿತರಾಗಿದ್ದಾರೆ. ಅವರು ೮–೧೦ ಸಾರಿ ಅರ್ಜಿ ಹಾಕಿದರೂ ಕೂಡ ಯಾರೂ ಮನಃಪೂರ್ವಕವಾಗಿ ಸಾಲ ಕೊಡುತ್ತಾ ಇಲ್ಲ. ಎಮರ್‌ಜೆನ್ಸಿ ಇದ್ದ ಕಾಲದಲ್ಲಿ ಇಂತಹ ಬಾಬುಗಳಿಗೆ ಬ್ಯಾಂಕಿನವರು ಹೆಚ್ಚು ಧನಸಹಾಯ ಮಾಡಿದರು. ಆದರೆ ಈಗ ಅವರೂ ಧನಸಹಾಯ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಬ್ಯಾಂಕ್ ಮಾನೇಜರ್‌ಗಳಿಗೆ ಇಂತಹ ಹಳ್ಳಿಗಳಲ್ಲಿ ಈ ಯೋಜನೆಯನ್ನು ಅಡಾಪ್ಟ್ ಮಾಡಿಕೊಂಡು ರೈತರಿಗೆ ಸಾಲವನ್ನು ಕೊಡಬೇಕೆಂದು ಹೇಳಿದರೂ ಸಹ ಅವರು ಮನಸಸ್ಸು ಪೂರ್ವಕವಾಗಿ ಸಾಲ ಕೊಡುತ್ತಾ ಇಲ್ಲ. ಮಾನ್ಯ ಸಚಿವರು ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಕೊನೆಯಪಕ್ಷ ಅವರು ೧೫ ದಿವಸಕ್ಕೊಂದು ಸಾರಿ ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗೆ ಹೋಗಿ ಬ್ಯಾಂಕ್ ಮ್ಯಾನೇಜರ್‌ಗಳನ್ನು ಕರೆದು, ಇವತ್ತು ಕೊಟ್ಟಂಥ ಅಪ್ಲಿಕೇಷನ್‌ಗೆ ನಾಳೆ ಸಾಲ ಮಂಜೂರು ಮಾಡಿಸತಕ್ಕಂಥ ವ್ಯವಸ್ಥೆ ಮಾಡಿಸಬೇಕು. ಆ ರೀತಿಯ ಆದೇಶವನ್ನು ತಾವು ಅವರಿಗೆ ಕೊಡಬೇಕು. ಇಲ್ಲದೇಹೋದರೆ ಈ ಸ್ಮಾಲ್‌ಫಾರ್ಮರ್ಸ್‌ಗೆ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ತೊಂದರೆಯಾಗುತ್ತದೆ, ನಿಮ್ಮ ಅಧಿಕಾರಿಗಳು ಸುಮ್ಮಸುಮ್ಮನೆ ರಿಪೋರ್ಟ್ ಕೊಟ್ಟುಕೊಂಡು ಕಾಲಹರಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಲ್ಲಿಯವರೆಗೆ ಅವರು ಸುಳ್ಳು ರಿಪೋರ್ಟ್ ಕೊಟ್ಟು ಎಷ್ಟು ಕೋಟಿ ರೂಪಾಯಿಗಳನ್ನು ಹಾಳು ಮಾಡಿದ್ದಾರೆ ಎಂಬುದನ್ನು ಯಾರೂ ಚೆಕ್ ಮಾಡಿಲ್ಲ. ನಾವೇನೋ ಅವರಿಗೆ ಆ ಒಂದು ಜವಾಬ್ದಾರಿಯನ್ನು ಕೊಡುತ್ತೇವೆ, ಆದರೆ ಅವರು ಕೊಡತಕ್ಕಂಥ ವರದಿಯಲ್ಲಿ ೯೯ ಭಾಗ ಸುಳ್ಳು ಇರುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಹೆಚ್ಚು ಗಮನಕೊಡಬೇಕು ಮತ್ತು ಅವರು ಸುಳ್ಳು ವರದಿಯನ್ನು ಕೊಡತಕ್ಕಂಥಾದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

ಇನ್ನು ಡೈರಿ ಡೆವೆಲಪ್‌ಮೆಂಟ್ ವಿಷಯದಲ್ಲಿ ಒಂದು ವಿಚಾರವನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈ ಡೈರಿ ಡೆವೆಲಪ್‌ಮೆಂಟ್ ಯೋಜನೆ ಈ ದೇಶದ ರೈತರಿಗೆ ವರಪ್ರಧಾನವಾಗಿ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕೆ ಕಾರಣವೇನೆಂದರೆ ಈಗ ರೈತ ಉತ್ಪತ್ತಿ ಮಾಡಿದ ಹಾಲಿಗೆ ನಿಗಧಿಯಾದ ಬೆಲೆ ಸಿಕ್ಕುತ್ತಾ ಇದೆ, ಹಾಲನ್ನು ಮಾರಾಟ ಮಾಡುವುದರಲ್ಲಿ ಯಾವ ತೊಂದರೆಯೂ ಇಲ್ಲ. ಹಾಗೆಯೇ ಈ ಡೈರಿ ಡೆವಲಪ್‌ಮೆಂಟ್ ಯೋಜನೆ ಕಾರ್ಯಗತವಾಗುತ್ತಿರತಕ್ಕಂಥ ಪ್ರದೇಶದಲ್ಲಿ ರಾಸುಗಳ ಇನ್‌ಷ್ಯೂರೆನ್ಸ್ ವ್ಯವಸ್ಥೆ ದನಗಳಿಗೆ ಕಾಯಿಲೆ ಬಂದರೆ ಡಾಕ್ಟರು ವಾರಕ್ಕೆ ಒಂದು ಸಾರಿ ಔಷಧಿ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಈ ಯೋಜನೆಯಿಂದ ರೈತರ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಯಾಗುತ್ತದೆಂದು ನಾನು ತಿಳಿದುಕೊಂಡಿದ್ದೆ. ಮಾನ್ಯ ಸಚಿವರಿಗೆ ೩ ವಿಚಾರಗಳನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ತಾವು ಬಹಳ ದಕ್ಷತೆಯಿಂದ ನಿಸ್ಪೃಹತೆಯಿಂದ ಕೆಲಸ ಮಾಡದಿದ್ದರೆ ವರವಾಗಿರತಕ್ಕಂಥ ಈ ಯೋಜನೆ ದೇಶದಲ್ಲಿ ರೈತರಿಗೆ ಶಾಪವಾಗುಗುತ್ತದೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ೫೫ ಕೋಟಿ ರೂಪಾಯಿಗಳು ಪ್ರಪಂಚ ಬ್ಯಾಂಕಿನಿಂದ ಬಂದಿರತಕ್ಕಂಥ ಹಣ ಸಾಮಾನ್ಯವಾಗಿ ಸರಿಯಾಗಿ ಸದ್ವಿನಿಯೋಗವಾಗಬೇಕು. ಕಾರ್ಪೊರೇಷನ್ ಮತ್ತು ಡೈರಿಗಳಲ್ಲಿ ಮನಃಸ್ವೇಚ್ಛೆಯಾಗಿ ಅಧಿಕಾರಿಗಳನ್ನು ಸೃಷ್ಟಿಮಾಡಿಕೊಂಡಿರುವಂತಾದ್ದು. ಮತ್ತು ಯಾರು ಯಾರು ಗಂಟು ಹೊಡೆದುಕೊಂಡು, ಲಘಂಗತನ ಮಾಡಿಕೊಂಡು ಇರುವಂತಹ ಅನೇಕ ಅಧಿಕಾರಿಗಳಿದ್ದಾರೆ, ಅವರಿಗೆ ಎದ್ವಾತದ್ವಾ ಪ್ರಮೋಷನ್‌ನ್ನು ಕೊಟ್ಟು ಕರ್ನಾಟಕ ಡೈರಿಯಲ್ಲಿ ಕೊಟ್ಟಿದ್ದಾರೆ. ಮೂರನೆಯದಾಗಿ ಅಲ್ಲಿ ದೊಡ್ಡ ದೊಡ್ಡ ಹೆಗ್ಗಣಗಳು ಸೇರಿಕೊಂಡಿವೆ. ಅವುಗಳನ್ನು ನಾಶ ಮಾಡಲು ಆಟಂಬಾಂಬ್ ಹಾಕಿದರೂ ಅವು ಸಾಯುವುದಿಲ್ಲ. ಅಂತಹ ಹೆಗ್ಗಣಗಳಿಗೆ ಬಹಳ ರಕ್ಷಣೆ ಇದೆ. ಇಂತಾದ್ದನ್ನು ನೆನೆಸಿಕೊಂಡಾಗ ಬಹಳ ಸಂಕಟವಾಗುತ್ತದೆ. ಅಂತಹ ಹೆಗ್ಗಣಗಳಿಗೆ ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ರಕ್ಷಣೆ ಸಿಗುತ್ತದೆ. ರೈತರ ಉದ್ಧಾರಕ್ಕಾಗಿ ಇಂತಹ ಒಂದು ದೊಡ್ಡ ಯೋಜನೆಯನ್ನು ತಂದಾಗ ಅದು ವ್ಯರ್ಥವಾಗುತ್ತಿದೆ. ಅದನ್ನು ನೋಡಿ ಸಂಕಟಪಟ್ಟುಕೊಂಡು ಹೇಳುತ್ತಿದ್ದೇನೆ. ಯಾರು ದುಡ್ಡು ಹೊಡೆಯುತ್ತಾರೋ, ಮೋಸಮಾಡಿದ್ದಾರೋ ಕೆಲವು ಸಂದರ್ಭದಲ್ಲಿ ದುಡ್ಡನ್ನು ಹೊಡೆದಿದ್ದಾರೆ. ಈ ರೀತಿಯಾಗಿ ಕರ್ನಾಟಕದಲ್ಲಿರುವ ೪ ಡೈರಿಗಳಲ್ಲೂ ದುರ್ವಿನಿಯೋಗವಾಗಿದೆ. ಅದಕ್ಕೆ ಸೂಕ್ತ ತನಿಖೆ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೆಲವು ಯೋಗ್ಯ ಅಧಿಕಾರಿಗಳಿದ್ದಾರೆ. ಅಂತಹ ಯೋಗ್ಯ ಅಧಿಕಾರಿಗಳಿಗೆ ಸರಿಯಾದ ಸ್ಥಾನಮಾನ ಇಲ್ಲ. ಅವರ ಮಾತಿಗೆ ಬೆಲೆ ಇಲ್ಲ. ಯಾರು ದುಡ್ಡು ಹೊಡೆದುಕೊಂಡು ಪ್ರಚಾರ ಮಾಡಿಕೊಂಡು ಕಳ್ಳ ಕೈ ಮುಗಿದುಕೊಂಡು ತಿರುಗಾಡುತ್ತಿದ್ದಾರೋ ಅಂತಹವರಿಗೆ ಜಾಸ್ತಿ ಪ್ರಮೋಷನ್. ಆದ್ದರಿಂದ ತಾವು ಇನ್ನು ಮುಂದೆ ಇಂತಾದ್ದಕ್ಕೆ ಅವಕಾಶವನು ಕೊಡಬೇಡಿ. ೫೫ ಕೋಟಿ ರೂಪಾಯಿಗಳನ್ನು ಏನು

ಸಾಲವಾಗಿ ತೆಗೆದುಕೊಂಡಿದ್ದಾರೆ ಅದನ್ನು ವಾಪಸ್ಸು ಕೊಡಬೇಕು. ವಾಪಸ್ಸು ಕೊಡಬೇಕಾದರೆ ಮಿತವ್ಯಯ ಇರಬೇಕು. ದಕ್ಷತೆ ಇರಬೇಕು. ಇದರ ಜೊತೆಗೆ ಪ್ರಮೋಷನ್ ಕೊಡುವಾಗಲೂ ಯಾರು ಅರ್ಹ ಯಾರು ಅನರ್ಹ ಎಂಬುದನ್ನು ನೋಡಿಕೊಂಡು ಕೊಡಬೇಕು. ಇವತ್ತು ಅಲಿ ಯಾರು ಗಂಟು ಹೊಡೆದುಕೊಂಡು ಹೋಗುತ್ತಿದ್ದಾರೋ ಅಂತಹವರಿಗೆ ಪ್ರಮೋಷನ್ ಕೊಟ್ಟುಕೊಂಡು ಹೋಗುತ್ತಿದ್ದಾರೆ. ಅಯೋಗ್ಯ ಅಧಿಕಾರಿಗಳಿಗೆ ಡೈರಿಯಲ್ಲಿ ರಕ್ಷಣೆ ಸಿಗುತ್ತಿದೆ. ಇಂತಹ ಜನಗಳು ಆ ಡೈರಿ ಕಾರ್ಪೊರೇಷನ್ನಿನಲ್ಲಿ ಇದ್ದಾರೆ. ಅಂತಹವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಅಂತಹ ಅಯೋಗ್ಯ ಅಧಿಕಾರಿಗಳಿದ್ದಾರೆ ಅಂತಹವರನ್ನು ನೋಡಿ ಸಂಕಟಪಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ರೈತರು ಬೆಳೆದಂತಹ ಯಾವ ಪದಾರ್ಥಕ್ಕೂ ಸಾಮಾನ್ಯವಾಗಿ ಒಂದು ಸ್ಥಿರವಾದ ಬೆಲೆ ಇಲ್ಲ. ಮೊನ್ನೆ ಮಾನ್ಯ ಶಾಮಣ್ಣನವರುಒಂದು ಕಾಲ್ ಅಟೆನ್‌ಷನ್ ಹಾಕಿದ್ದರು. ಒಂದು ಲೀಟರ್ ಹಾಲಿಗೆ ೧೦ ಪೈಸೆ ಜಾಸ್ತಿ ಮಾಡಿರುವ ಬಗ್ಗೆ. ಲಕ್ಷಾಂತರ ಜನ ಹಳ್ಳಿಯಲ್ಲಿರುವ ರೈತರು ಒಂದು ಹೊತ್ತು ಅವರಿಗೆ ಸರಿಯಾದ ಊಟ ಇಲ್ಲ. ಹಾಕಿಕೊಳ್ಳುವುದಕ್ಕೆ ಸರಿಯಾದ ಬಟ್ಟೆಯಿಲ್ಲ. ಅವನ ಹೊಲ, ಮನೆ ಕೊನೆಗೆ ಹೆಂಡತಿಯ ತಾಳಿ ಹರಾಜಾಗುವ ಸ್ಥಿತಿಯಲ್ಲಿದ್ದಾನೆ. ೧೦ ರೂಪಾಯಿಯೂ ಇಲ್ಲದೆ ಕಷ್ಟ ಪರಿಸ್ಥಿತಿಯಲ್ಲಿರತಕ್ಕಂಥ ರೈತರು ಆತನು ಕಷ್ಟಪಟ್ಟು ಹಸುಗಳನ್ನು ಸಾಕಿಕೊಂಡು ಹಾಲನ್ನು ಡೈರಿಗೆ ಹಾಕುತ್ತಿರುತ್ತಾನೆ. ಆ ಹಾಲಿಗೆ ೫–೧೦ ಪೈಸೆ ಜಾಸ್ತಿ ಮಾಡಿದರೆ ಪಟ್ಟಣದಲ್ಲಿರುವವರು ಬೆಲೆ ಜಾಸ್ತಿಯಾಯಿತು. ಹಾಗಾಯಿತು, ಅನ್ಯಾಯವಾಗಿದೆ ಎಂಬುದಾಗಿ ಏನೇನೋ ಹೇಳುತ್ತಾರೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿರುವ ಜನರು ನಿಮ್ಮ ಪುಣ್ಯಕ್ಕೋಸ್ಕರ ಹುಟ್ಟಿಲ್ಲ. ಪಟ್ಟಣದವರಿಗೋಸ್ಕರ ತಾನು ಕಷ್ಟಪಟ್ಟು ಪುಣ್ಯ ಕಟ್ಟಿಕೊಳ್ಳುವುದಕ್ಕೋಸ್ಕರ ಇಲ್ಲ. ಪ್ರತಿಯೊಂದರಲ್ಲೂ ಇಂತಿಷ್ಟು ಪರ್ಸೆಂಟೇಜ್ ಲಾಭವನ್ನು ಇಟ್ಟುಕೊಂಡು ಮಾಡುತ್ತಾರೆ. ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರನ್ನು ತೆಗೆದುಕೊಂಡರೆ ಅವರು ೧೦೦ ರೂಪಾಯಿಯ ಕೆಲಸವನ್ನು ತೆಗೆದುಕೊಂಡರೆ, ಅದಕ್ಕೆ ಶೇಕಡ ೧೦ ರೂಪಾಯಿಗಳನ್ನು ಸೇರಿಸಿರುತ್ತಾರೆ. ವ್ಯಾಪಾರ ಮಾಡಬೇಕಾದರೂ ಹಾಗೆ. ಕಾರ್ಖಾನೆಯಲ್ಲಿ ಏನಾದರೂ ಸಾಮಾನುಗಳನ್ನು ಉತ್ಪತ್ತಿ ಮಾಡಬೇಕಾದರೆ ಪ್ರತಿಯೊಂದಕ್ಕೂ ಸಿಬ್ಬಂಧಿ ಖರ್ಚು, ಹಾಗೂ ಇತರೇ ಖರ್ಚುಗಳನ್ನು ತೆಗೆದುಕೊಂಡು ೧೫–೨೦ ಪರ್ಸೆಂಟ್ ಲಾಭವನ್ನು ಸೇರಿಸಿಕೊಂಡು ತಮ್ಮ ವೃತ್ತಿಯನ್ನು ಮಾಡುತ್ತಾರೆಂದು ಹೇಳುತ್ತೇನೆ. ಆದರೆ ರೈತನು ಉತ್ಪತ್ತಿ ಮಾಡತಕ್ಕಂಥಹ ಪದಾರ್ಥಗಳಿಗೆ ಯಾವ ಕಾನೂನು ಅಪ್ಲೈಯಾಗುವುದಿಲ್ಲ. ೩ ಸಾವಿರ, ೫ ಸಾವಿರ ಸಂಬಳ ತೆಗೆದುಕೊಳ್ಳತಕ್ಕಂಥ ಅಧಿಕಾರಿಗಳು ಹಳ್ಳಿಯಲ್ಲಿ ಹ್ಯಾಬಿಟ್ಟೇ ಇಲ್ಲದ ಅಧಿಕಾರಿಗಳು, ಪಟ್ಟಣದಲ್ಲಿ ಕುಳಿತರತಕ್ಕಂಥ ಅಧಿಕಾರಿಗಳು, ದೆಹಲಿಯಲ್ಲಿ ಇದ್ದುಕೊಂಡು ಈಗ ಬಂದಿರತಕ್ಕಂಥ ಅಧಿಕಾರಿಗಳು ಇವತ್ತು ರೈತರ ಮೇಲೆ ಡಿಕ್ಟೇಟ್ ಮಾಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರಿಗೆ ಒಂದು ಸಲಹೆಯನ್ನು ಕೊಡುತ್ತೇನೆ. ಇಂತಹ ಅಧಿಕಾರಿಗಳನ್ನು ಎರಡು ವರ್ಷದ ಮಟ್ಟಿಗೆ ಹಳ್ಳಿಯಲ್ಲಿ ವಾಸ ಮಾಡುವುದಕ್ಕೆ ಕಳುಹಿಸಿಕೊಡಿ. ಅವರಿಗೆ ಫ್ರೀಯಾಗಿ ಸಂಬಳ ಕೊಟ್ಟರೂ ಚಿಂತೆಯಿಲ್ಲ. ಅವರು ೬—೬ ಎಮ್ಮೆ ಹಸುಗಳನ್ನು ಹಳ್ಳೀ ಮಟ್ಟದಲ್ಲಿ ಕಟ್ಟಿಕೊಂಡು ಆ ಹಸುಗಳಿಂದ ಯಾವ ರೀತಿ ಹಾಲಿನ ಉತ್ಪಾದನೆಯನ್ನು ಮಾಡುತ್ತಾರೆ ? ಮತ್ತು ಹಾಲಿನ ದರವನ್ನು ನಿಗದಿಮಾಡುತ್ತಾರೆ ನೋಡೋಣ. ಮತ್ತು ರಾಗಿಯ ಬೆಲೆಯ ವಿಷಯದಲ್ಲೂ ಕೂಡ ಅಷ್ಟೇ. ನಾಗಮಂಗಲ ಇಂತಹ ಜಾಗದಲ್ಲಿ ೫—೧೦ ಎಕರೆ ಜಮೀನು ಕೊಟ್ಟುಬಿಟ್ಟು, ಅವರೇ ಸ್ವತಃ ಹೊಲವನ್ನು ಮಾಡಿಕೊಂಡು ರೈತರ ಕಷ್ಟ ಏನು ಎಂಬುದನ್ನು ತಿಳಿದುಕೊಂಡು, ಮತ್ತು ಕರ್ನಾಟಕದಲ್ಲಿ ಈ ರೀತಿಯಾಗಿ ಬೆಳೆಯುತ್ತದೆ, ಅಂತಾದ್ದಕ್ಕೆ ಆ ರೈತನಿಗೆ ಯಾವ ರೀತಿಯಾಗಿ ಬೆಲೆಯನ್ನು ನಿಗದಿಮಾಡಬೇಕು ಎಂಬುದನ್ನು ತೀರ್ಮಾನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಂತಹ ಅಧಿಕಾರಿಗಳನ್ನು ಆ ಪ್ರದೇಶಗಳಿಗೆ ಟ್ರೈನಿಂಗ್‌ಗೆ ಕಳುಹಿಸಿಕೊಟ್ಟು ತಾನೆ ಬೆಳೆದು ತೋರಿಸಿ ರೈತನಿಗೆ ಯಾವ ಬೆಲೆಯನ್ನು ಫಿಕ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಕಳೆದ ೧೦—೬ ವರ್ಷಗಳಿಂದ ರೈತನು ತೆಗೆದುಕೊಂಡಿದ್ದಂತಹ ಸಾಲವನ್ನು ಮರುಪಾವತಿ ಮಾಡದೆ ಆತನು ತೆಗೆದುಕೊಂಡ ಸಾಲಕ್ಕೆ ೧೦೦ ಪಟ್ಟು ಬಡ್ಡಿಯಾಗಿದೆ. ಅವನ ಸ್ಥಿತಿಯನ್ನು ಎಷ್ಟು ಹೇಳಿದರೂ ತೀರದು. ಇವತ್ತು ಹಳ್ಳಿಯಲ್ಲಿರುವ ರೈತರ ಪರಿಸ್ಥಿತಿಯನ್ನೂ ಮತ್ತು ಪಟ್ಟಣದಲ್ಲಿರುವವರ ಪರಿಸ್ಥಿತಿಯನ್ನು ಲೆಕ್ಕ ಹಾಕಿ ನೋಡಿದರೆ ಈ ದಿವಸ ಹಳ್ಳಿಯಲ್ಲಿರುವ ರೈತನ ಪರಿಸ್ಥಿತಿ ಅಧೋಗತಿಗೆ ಹೋಗಿದೆ. ಅವನ ಉತ್ಪತ್ತಿ ಹೆಚ್ಚಾಗಿದ್ದರೂ ಕೂಡ ಸಾಲ ತೀರಿಸುವುದಕ್ಕಾಗುವುದಿಲ್ಲ, ಕೊಟ್ಟ ಸಾಲವನ್ನು ವಾಪಸ್ಸು ಕೊಡುವುದಕ್ಕಾಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸದಸ್ಯರೊಬ್ಬರು ಹೇಳುತ್ತಿದ್ದರು. ೭ ವರ್ಷಗಳ ಹಿಂದೆ ಒಬ್ಬ ರೈತನು ೩,೫೦೦ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡಿದ್ದಾನೆ. ಇವತ್ತು ಆತನು ೧೭,೫೦೦ ರೂಪಾಯಿಗಳನ್ನು ಕೊಡಬೇಕಾಗಿದೆ ಎಂಬುದಾಗಿ ಹೇಳಿದರು. ಅದನ್ನು ಕೇಳಿ ನನಗೆ ಬಹಳ ಸಂಕಟವಾಯಿತು. ೩,೫೦೦ ರೂಪಾಯಿ ೭ ವರ್ಷಗಳ ಹಿಂದೆ ಸಾಲವಾಗಿ ತೆಗೆದುಕೊಂಡಿದ್ದ. ಆತನು ಇಷ್ಟರವರೆಗೂ ಕೊಟ್ಟಿಲ್ಲ. ಡಿಫಾಲ್ಟರ್ ಆಗಿದ್ದಾನೆ ಇವತ್ತು ಅವನು ೧೭,೫೦೦ ರೂಪಾಯಿಗಳನ್ನು ಕೊಡಬೇಕೆಂದರೆ ಹೇಗೆ? ಇವತ್ತು ರೈತನು ಎಷ್ಟೇ ಹೆಚ್ಚು ಉತ್ಪತ್ತಿ ಮಾಡಿದರೂ ಆತನು ತನ್ನ ಮಕ್ಕಳಿಗೆ ಬಟ್ಟೆಯನ್ನು ಕೊಳ್ಳಬೇಕಾದರೆ, ೪ ಜನ ಮಕ್ಕಳನ್ನು ವಿದ್ಯಾಭ್ಯಾಸ ಮಾಡಿಸಬೇಕಾದರೆ ಬಹಳ ಕಷ್ಟ ಪರಿಸ್ಥಿತಿ ಇದೆ. ಆದ್ದರಿಂದ ಹಳ್ಳಿಯ ಜನರ ಅವಶ್ಯಕತೆಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಸರ್ಕಾರದ ಕೇವಲ ಅಧಿಕಾರಿಗಳ ಮಾತುಗಳನ್ನು ಕೇಳಿಕೊಂಡು, ೨-೪ ಸಾವಿರ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು, ಹೇಳುವಂತಹ ಮಾತುಗಳನ್ನು ತಾವು ಗಮನಿಸಬಾರದು ಯಾರು ಇವತ್ತು ಈ ದೇಶಕ್ಕೆ ಅನ್ನವನ್ನು ಉತ್ಪತ್ತಿ ಮಾಡಿಕೊಟ್ಟು, ಎಲ್ಲರಿಗೂ ಸಂಬಳಸಾರಿಗೆ ಕೊಟ್ಟು ಪ್ರತಿಯೊಂದು ಖರ್ಚು ವೆಚ್ಚಕ್ಕೆ ದುಡ್ಡನ್ನು ಕೊಡತಕ್ಕಂಥ ರೈತನ ಕೆಲಸಕ್ಕೆ ಹೆಚ್ಚು ಗೌರವ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೇಟನ್ನು ನಿಗದಿ ಮಾಡುವಾಗ ಸರ್ಕಾರದ ಅಧಿಕಾರಿಗಳ ಮಾತಿಗೆ ಗಮನಕೊಡದೆ ನ್ಯಾಯವಾದ ರೇಟನ್ನು ನಿಗದಿ ಮಾಡಿ. ಪ್ರತಿಯೊಂದರಲ್ಲೂ ರೈತನು ತಾನು ಮಾರಾಟ ಮಾಡಿ ಅದರಿಂದ ಬರುವ ಲಾಭದಿಂದ ತನ್ನ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಟ್ಟು, ಗೌರವದಿಂದ ಬಾಳುವ ವ್ಯವಸ್ಥೆ ಮಾಡಬೇಕು.

ಕೊನೆಯದಾಗಿ ಮಾನ್ಯ ಸಚಿವರಿಗೆ ಒಂದು ಮಾತನ್ನು ಹೇಳುವುದಾದರೆ ನಿಸ್ಪೃಹತೆ ನಿಮ್ಮಲ್ಲಿ ಮೊದಲು ಬರಬೇಕು ನಿಮ್ಮಿಂದ ಶುರುವಾಗಬೇಕು. ದಕ್ಷತೆ ನಿಮ್ಮಿಂದ ಶುರುವಾಗಿ ನಿಮ್ಮ ಕೊನೆಯವರೆಗೆ ಇಳಿದು ಹೋಗಬೇಕು. ಎಲ್ಲಿ ಅದಕ್ಷತೆ, ಎಲ್ಲಿ ದುಡ್ಡು ತಿಂದಂತಹ ಅಧಿಕಾರಿಗಳು ಸಿಕ್ಕಿದಾಗ ಅವರನ್ನು ಬಲಿಹಾಕಬೇಕು. ಯೋಗ್ಯ ಅಧಿಕಾರಿಗಳು ಸಿಕ್ಕಿದಾಗ ಅಂತಹ ಅಧಿಕಾರಿಗಳಿಗೆ ಉತ್ತೇಜನ ಕೊಡಬೇಕು. ಒಳ್ಳೆಯ ಸ್ಥಾನಮಾನವನ್ನು ಅವರಿಗೆ ಕಲ್ಪಿಸಿಕೊಡಬೇಕು. ಆ ರೀತಿ ಮಾಡಿದರೆ ನಿಮ್ಮ ಹೆಸರು ಚಿರಾಯುವಾಗಿ ಉಳಿಯುತ್ತದೆ. ಡೈರಿಯ ಯೋಜನೆ ರೈತರಿಗೆ ವರವಾಗಿ ಬಂದಿದೆ ಇವತ್ತು ಅದು ಶಾಪವಾಗುತ್ತಿದೆ. ಅದಕ್ಕೆ ನೀವು ನಿಮ್ಮ ಅಧಿಕಾರಿಗಳು ಎಲ್ಲರೂ ಬಲಿಯಾಗುತ್ತೀರಿ. ಕೊನೆಯದಾಗಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೪-೩೦ ಪಿ.ಎಂ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಂದ್ರಪ್ಪ ಘಾಳಪ್ಪ ಅವರು ಈ ಒಂದು ಬೇಡಿಕೆಯನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಅವರು ಕಷ್ಟಪಟ್ಟು ಕೆಲಸ ಮಾಡಿದರೆ ಈ ಇಲಾಖೆಯನ್ನು ಅತ್ಯುತ್ತಮ ಇಲಾಖೆಯನ್ನಾಗಿ ನಡೆಸಬಹುದೆಂದು ನನಗನ್ನಿಸುತ್ತದೆ. ಮತ್ತು ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೆ ಈ ರಾಜ್ಯದಲ್ಲಿ ಹಾಲು ಮತ್ತು ಜೇನಿನ ಹೊಳೆಯನ್ನೇ ಹರಿಸಬಹುದೆಂದು ಹೇಳುತ್ತೇನೆ. ಈ ರೀತಿ ಕೆಲಸ ಮಾಡಲು ನಮ್ಮ ರಾಜ್ಯದಲ್ಲಿ ಅವಕಾಶವಿದೆ. ಏಕೆಂದರೆ ಮಾನ್ಯ ಗಂಗಾಧರ್ ಅವರು ಹೇಳಿದಂತೆ ನಮ್ಮ ರಾಜ್ಯದಲ್ಲಿ ಎರಡು ಕೋಟಿಯಷ್ಟು ಪ್ರಾಣಿ ಸಂಪತ್ತು ಇದೆ. ಈ ಪ್ರಾಣಿಗಳ ಪೋಷಣೆಗಾಗಿ ಕೋಟ್ಯಾಂತರ ರೂ. ಗಳನ್ನು ಖರ್ಚು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಈ ರೀತಿ ನಮ್ಮ ರಾಜ್ಯದಲ್ಲಿ ಪಶುಸಂಗೋಪನಾ ಕಾರ್ಯವನ್ನು ಚೆನ್ನಾಗಿ ಮಾಡಬೇಕೆಂದಿದ್ದೀರಿ. ಆದರೆ ತಾವು ಗೋರಕ್ಷಣೆಗೆ ಸೂಕ್ತ ಏರ್ಪಾಡನ್ನು ಮಾಡಿಲ್ಲ. ಗೋರಕ್ಷಣೆ ನಮ್ಮ ಸಂಸ್ಕೃತಿಯ ಕೇಂದ್ರಬಿಂದುವಾಗಿದೆ. ಆದರೆ ಗೋರಕ್ಷಣೆಯ ಕೆಲಸವಾಗುತ್ತಿಲ್ಲವೆಂದು ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಚಂದ್ರಶೇಖರ ಅವರು ಸಹ ಈ ಬಗ್ಗೆ ಹೇಳಿದ್ದಾರೆ ಕಸಾಯಿಖಾನೆಗೆ ಹೋಗತಕ್ಕಂಥ ಲಕ್ಷಾಂತರ ಹಸುಗಳನ್ನು ಬಹಳ ಕ್ರೂರತನದಿಂದ ಕೊಲ್ಲತಕ್ಕದ್ದನ್ನು ನಾವು ನೋಡಿದ್ದೇವೆ ಮತ್ತು ಕೇಳಿದ್ದೇವೆ. ತಾವು ಹಿಂದೂ ಸಂಸ್ಕೃತಿಯಲ್ಲಿ ನಂಬಿಕೆಯುಳ್ಳವರಾಗಿದ್ದೀರಿ. ಆದಕಾರಣ ಇವಕ್ಕೆ ಅವಕಾಶಕೊಡುವುದು ಸರಿಯೇ ಎಂಬುದನ್ನು ತಾವೆಲ್ಲ ಯೋಚನೆ ಮಾಡಬೇಕು. ಈ ಗೋ ಹತ್ಯೆಯನ್ನು ಕಾನೂನಿನ ಮೂಲಕ ನಿಲ್ಲಿಸುವುದಾಗಿ ತುರ್ತುಪರಿಸ್ಥಿತಿ ಜಾರಿಯಲ್ಲಿದ್ದಾಗ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಆಚಾರ್ಯ ವಿನೋಭಾಬಾವೆಯವರಿಗೆ ವಚನ ಕೊಟ್ಟಿದ್ದರು. ಗೋರಕ್ಷಣೆ ಮಾಡುವುದಾಗಿ ಅವರು ಮಾತು ಕೊಟ್ಟಮೇಲೆ ಅನೇಕ ರಾಜ್ಯಗಳಲ್ಲಿ

ಗೋಹತ್ಯೆಯನ್ನು ನಿಷೇದ ಮಾಡಲಾಯಿತು. ನಮ್ಮ ರಾಜ್ಯದಲ್ಲಿಯೂ ಸಹ ಈ ಬಗ್ಗೆ ಒಂದು ಶಾಸನ ತರುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಆ ಸಮಯದಲ್ಲಿ ಹೇಳಿದ್ದರು. ಆದರೆ ಇಲ್ಲಿಯವರೆಗೆ ತರಲಿಲ್ಲ. ಮಾನ್ಯ ಮಂತ್ರಿಗಳಿಗೆ ಕೇಳುತ್ತೇನೆ. ನಿಮಗೆ ನಿಜಕ್ಕೂ ಈ ವಿಷಯದಲ್ಲಿ ನಂಬಿಕೆ ಇದ್ದರೆ ಆ ಶಾಸನವನ್ನು ಜಾಗ್ರತೆ ತೆಗೆದುಕೊಂಡು ಬರಬೇಕೆಂದು ಹೇಳುತ್ತೇನೆ. ಗೋರಕ್ಷಣೆಗೆ ಕೋಟ್ಯಾಂತರ ರೂ.ಗಳನ್ನು ಖರ್ಚುಮಾಡುತ್ತಿರುವಾಗ ಅವುಗಳನ್ನು ಕೊಲ್ಲಲು ಪ್ರೋತ್ಸಾಹ ಕೊಡುತ್ತಿರುವುದು ಸರಿಯಲ್ಲವೆಂದು ಹೇಳುತ್ತೇನೆ. ಆದಕಾರಣ ಕೂಡಲೇ ಈ ಬಗ್ಗೆ ಕ್ರಮ ಕೈಕೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮಗೇನಾದರು ಶಕ್ತಿ ಇದ್ದರೆ ಹಸುವನ್ನು ನ್ಯಾಷನಲ್ ಅನಿಮಲ್ ಎಂದು ಡಿಕ್ಲೇರ್ ಮಾಡಿ. ಈಗಾಗಲೇ ಅನೇಕ ಪ್ರಾಣಿಗಳನ್ನು ನ್ಯಾಷನಲ್ ಅನಿಮಲ್ಸ್ ಎಂದು ಡಿಕ್ಲೇರ್ ಮಾಡಿರುವುದರಿಂದ ಇದನ್ನು ಸಹ ಮಾಡಬೇಕೆಂದು ಹೇಳುತ್ತೇನೆ. ಇದು ತಮ್ಮ ಶಕ್ತಿಗೆ ಮೀರಿದುದು ಎಂದು ನನಗೂ ಗೊತ್ತು. ಆದರೂ ಸಹ ತಾವು ಈ ಬಗ್ಗೆ ಪ್ರಯತ್ನ ಮಾಡ ಬೇಕೆಂದು ಹೇಳುತ್ತೇನೆ. ಹಸುಗಳಿಗೆ ಹಿಂಸೆ ಮಾಡುವುದನ್ನು ಮತ್ತು ಅವುಗಳನ್ನು ಕೊಲ್ಲುವುದನ್ನು ನಿಷೇದ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಡೈರಿ ಬಗ್ಗೆ ಇಲ್ಲಿ ಹೇಳಿದ್ದೀರಿ. ಈಗ ಬೆಂಗಳೂರು ಡೈರಿಯವರು ಸರಬರಾಜು ಮಾಡು ತ್ತಿರುವ ಹಾಲಿನಲ್ಲಿ ವಾಸನೆ ಬರುವುದರಿಂದ ಜನರು ಖಾಸಗೀ ಡೈರಿಯವರ ಹತ್ತಿರವೇ ಹಾಲನ್ನು ಹೆಚ್ಚಾಗಿ ಕೊಳ್ಳುತ್ತಿದ್ದಾರೆ. ಖಾಸಗೀ ಡೈರಿಯವರು ಸರಬರಾಜು ಮಾಡುವ ಹಾಲು ಉತ್ತಮ ಮಟ್ಟದ್ದಾಗಿರುತ್ತದೆಂದು ಎಲ್ಲರೂ ಅಲ್ಲಿಯೆ ಕೊಳ್ಳುತ್ತಾರೆ. ಬೆಂಗಳೂರು ಡೈರಿಯವರು ಮಾರುವ ಹಾಲಿನಿಂದ ಮೊಸರನ್ನು ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ನಿಮ್ಮ ಅಧಿಕಾರಿಗಳನ್ನು ಕೇಳಿದರೆ ನಿಮಗೆ ಮೊಸರನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ ಮೊಸರು ಮಾಡುವುದನ್ನು ನಾವು ಅವರಿಂದ ಕಲಿಯಬೇಕಾಗಿದೆ. ಮೊಸರು ಚೆನ್ನಾಗಿ ಆಗದಿರುವುದಕ್ಕೆ ಕಾರಣ, ಹಾಲಿನಲ್ಲಿ ಪೌಡರ್ ಕಂಟೆಂಟ್ಸ್ ಜಾಸ್ತಿ ಇರುತ್ತದೋ ಏನೋ ಗೊತ್ತಿಲ್ಲ. ಡೈರಿ ಏಜೆಂಟರ ಹತ್ತಿರ ಸಾಲ ಇಟ್ಟು ಕೊಂಡಿರುವವರು ವಿಧಿಯಿಲ್ಲದೆ ಅದೇ ಹಾಲನ್ನು ಕುಡಿಯುವ ಪರಿಸ್ಥಿತಿ ಬಂದಿದೆ. ಇನ್ನು ಮುಂದಾದರೂ ಈ ಹಾಲಿನ ಕ್ವಾಲಿಟಿಯನ್ನು ಇಂಪ್ರೂವ್ ಮಾಡುವುದಕ್ಕೆ ತಕ್ಷಣ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳ ತ್ತೇನೆ. ಮತ್ತು ರೀಜನಲ್ ರೇಟ್‌ನಲ್ಲಿ ಸರಬರಾಜು ಮಾಡಬೇಕೆಂದು ಹೇಳುತ್ತೇನೆ.. ಈಗ ನಿಮಗೆ ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅವರು ಸಾಲ ಕೊಟ್ಟಿದ್ದಾರೆ. ಅನೇಕ ಉಪಕರಣವನ್ನು ಕೊಟ್ಟಿದ್ದಾರೆ. ಈ ರೀತಿ ನಿಮಗೆ ಕೊಡುವಾಗ ಅವರು ಕೆಲವೊಂದು ಷರತ್ತುಗಳನ್ನು ಹಾಕಿ ಕೊಟ್ಟಿದ್ದಾರೆ. ಆ ಷರತ್ತುಗಳ ಪ್ರಕಾರ ಬಡಮಕ್ಕಳಿಗೆ ವಿಟಮಿನ್ ಇರತಕ್ಕಂಥ ಹಾಲನ್ನು ಸರಬರಾಜು ಮಾಡಬೇಕು ಮತ್ತು ಜನರಿಗೆ ಕಡಿಮೆ ದರದಲ್ಲಿ ಉತ್ತಮವಾದ ಹಾಲನ್ನು ಸರಬರಾಜು ಮಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಅವರು ಹಾಕಿರತಕ್ಕಂಥ ಷರತ್ತುಗಳೇನೆಂಬುದನ್ನು ಮಾನ್ಯ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೇಜ್ ೨೭ರಲ್ಲಿ ಕನ್‌ಸಲ್‌ಟೆನ್ಸಿಗಾಗಿ ೨೬ ಲಕ್ಷ ಚಿಲ್ಲರೆ ಹಣ ಕೊಡಲಾಗಿದೆ ಎಂದು ಹೇಳಿದ್ದೀರಿ. ಕನ್‌ಸಲ್‌ಟೆನ್ಸಿಯನ್ನು ನಮ್ಮದೇಶದಿಂದಲೇ ಪಡೆಯಲಾಯಿತೋ ಅಥವಾ ಪರದೇಶದಿಂದ ಪಡೆಯಲಾಯಿತೋ ಮತ್ತು ಇದಕ್ಕೆ ಏನಾದರು ಅಗ್ರಿಮೆಂಟ್ ಇದ್ದರೆ, ಅದು ಎಷ್ಟು ವರ್ಷದ್ದು ಎಂಬ ವಿವರಗಳನ್ನು ತಾವು ಕೊಡಬೇಕು. ಏಕೆಂದರೆ ಇಂತಹ ಕಡೆಯಿಂದಲೇ ಹಣ ಸೋರಿ ಹೋಗುವುದು.

ಇನ್ನು ಈ ಡೈರಿಗಿಂತ ಇನ್ನೊಂದು ಬಹಳ ಮುಖ್ಯವಾದಂಥ ವಿಚಾರವೆಂದರೆ, ಇಲ್ಲಿಯವರೆಗೆ ಬೆಂಗಳೂರು ನಗರ ಕಾರ್ಪೊರೇಷನ್ ಅವರು ನಡೆಸುತ್ತಿದ್ದ ಸ್ಲಾಟರ್ ಹೌಸಸ್‌ನ್ನು ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್ ಅವರಿಗೆ ವಹಿಸಿಕೊಟ್ಟಿರುವುದು. ಈ ಮೊದಲು ಸ್ಲಾಟರ್ ಹೌಸಸ್‌ಗೆ ಪರ್ಮಿಷನ್ ಕೊಡುವುದು. ಅವುಗಳನ್ನು ಕಂಟ್ರೋಲ್ ಮಾಡುವುದು, ಅಂಗಡಿಗಳನ್ನು ತೆರೆಯಲು ಪರ್ಮಿಷನ್ ಕೊಡುವುದು, ಅವುಗಳು ಯಾವರೀತಿಯಲ್ಲಿರಬೇಕೆಂಬ ಬಗ್ಗೆ ತಿಳುವಳಿಕೆ ಕೊಡುವ ಕೆಲಸ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಸೇರಿತ್ತು. ಆ ಸಮಯದಲ್ಲಿ ಬೆಂಗಳೂರಿನಲ್ಲಿ ವರ್ಷಕೊಮ್ಮೆ ಯಾರು ಉತ್ತಮವಾದಂಥ ಮಾಂಸವನ್ನು ಮಾರಾಟ ಮಾಡುತ್ತಾರೋ, ಅವರಿಗೆ ಬಹುಮಾನ ಕೊಡುವ ಕಾರ್ಯಕ್ರಮವೂ ಇತ್ತು. ನಾನು ಇದರ ಜಡ್ಜ್ ಆಗಿದ್ದೆ.

ಅಧ್ಯಕ್ಷರು.– ತಾವು ಮಾಂಸ ತಿನ್ನುವವರಿಗಿಂತ ಚೆನ್ನಾಗಿ ಹೇಳುತ್ತಿದ್ದೀರಿ,

ಶ್ರೀ ಪಿ. ರಾಮದೇವ್.—ನಾನು ಮಾಂಸ ತಿನ್ನುವುದಿಲ್ಲ. ಆದರೆ ಈ ಕೆಲಸವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದೆ. ಈ ರೀತಿ ಬೆಂಗಳೂರು ನಗರ ಕಾರ್ಪೊರೇಷನ್ ಅವರು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಈ ಕೆಲಸವನ್ನು ಅವರಿಂದ ತಪ್ಪಿಸಿ ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್ ಅವರಿಗೆ ವಹಿಸಿದ್ದೀರಿ. ಆದರೆ ಇವರು ಈ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿಲ್ಲ. ೧೦–೧೨ ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಒಂದು ಆಧುನಿಕ ಸ್ಲಾಟರ್ ಹೌಸನ್ನು ಪ್ರಾರಂಭ ಮಾಡಬೇಕೆಂದು ತೀರ್ಮಾನವನ್ನು ಸರ್ಕಾರದವರು ಕೈಕೊಂಡರು. ಆದರೆ ಇದಕ್ಕೆ ಯಾರೋ ಕೆಲವರು ವಿರೋಧ ಮಾಡಿದರೆಂಬ ಕಾರಣದಿಂದ ಇದನ್ನು ಹಾಗೆಯೇ ಕೈಬಿಟ್ಟಿದ್ದೀರಿ. ಈಗ ತಾವು ನನ್ನ ಜೊತೆಯಲ್ಲಿ ಬಂದರೆ ಅನೇಕ ಮಟನ್ ಮಾರ್ಕೆಟ್‌ಗಳು ಇನ್‌ಸ್ಯಾನಿಟರಿ ಕಂಡೀಷನ್‌ನಲ್ಲಿರುವುದನ್ನು ತಮಗೆ ತೋರಿಸುತ್ತೇನೆ. ಅಲ್ಲಿನ ಒಂದು ವಾತಾವರಣವನ್ನು ನೋಡಿದರೆ ಯಾರೂ ಮಾಂಸವನ್ನು ಕೊಳ್ಳುವುದಿಲ್ಲ, ಅಂತಹ ಒಂದು ಕಂಡಿಷನ್‌ನಲ್ಲಿವೆ, ಸಸ್ಯಾಹಾರಿಗಳು ಜಾಸ್ತಿ ಇರುವ ಕಡೆಯೇ ಮಾಂಸದ ಅಂಗಡಿಗಳನ್ನು ತೆರೆಯಲು ಅವಕಾಶ ಕೊಡಲಾಗಿದೆ. ಮಾಂಸದ ಅಂಗಡಿಗಳ ಮುಂದೆ ಮರೆ ಮಾಡಬೇಕೆಂದು ನಿಯಮವಿದ್ದರೂ ಸಹ ಅದನ್ನು ಯಾರೂ ಪಾಲಿಸುತ್ತಿಲ್ಲ. ಕಾರ್ಪೊರೇಷನ್ ಅಧಿಕಾರಿಗಳಿಗೆ ಈ ಬಗ್ಗೆ ಯಾರಾದರೂ ದೂರು ಕೊಟ್ಟರೆ ಅವರು ಇದು ನಮ್ಮ ಹತೋಟಿಯಲ್ಲಿ ಇಲ್ಲವೆಂದು ಹೇಳುತ್ತಾರೆ. ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್ ಅವರೂ ಸಹ ಈ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಇದರಿಂದ ಏನಾಗಿದೆ ಎಂದರೆ, ತಮಗೆ ಗೊತ್ತಿದೆಯೋ ಇಲ್ಲವೋ, ಪ್ರಾಣಿಗಳನ್ನು ಮಾಂಸಕ್ಕಾಗಿ ಬಹಳ ಹಿಂಸೆಯಿಂದ ಕೊಲ್ಲುತ್ತಾರೆ. ಪ್ರಾಣಿದಯಾಸಂಘದವರಿಗೂ ಸಹ ಈ ವಿಷಯ ಗೊತ್ತಿದೆ. ಬೆಂಗಳೂರಿನ ಕಂಟೋನ್‌ಮೆಂಟ್ ಏರಿಯಾದಲ್ಲಿ ಹಂದಿಗಳನ್ನು ಕೊಲ್ಲುವಾಗ ಅವುಗಳು ಕಿರುಚುವುದನ್ನು ನೋಡುವುದಕ್ಕಾಗುವುದಿಲ್ಲ. ಎತ್ತು. ಹಸು, ಕುರಿ ಮುಂತಾದ ಪ್ರಾಣಿಗಳನ್ನು ಸಹ ಇದೇ ರೀತಿಯಲ್ಲಿ ಕೊಲ್ಲುವಾಗ ಅವುಗಳು ಅರುಚುವುದನ್ನು ನೋಡುವುದಕ್ಕಾಗುವುದಿಲ್ಲ. ಈ ರೀತಿ ಹಿಂಸೆ ಕೊಡದೆ, ಈಗಿನ ಆಧುನಿಕ ಯುಗದಲ್ಲಿ ಹೊಸವಿಧಾನದಲ್ಲಿ ಕೊಲ್ಲುವುದಕ್ಕಾಗುವುದಿಲ್ಲವೇ ಎಂದು ನಾನು ಕೇಳುತ್ತೇನೆ?

ಅಧ್ಯಕ್ಷರು.—ಈ ಬಗ್ಗೆ ತಮಗೆ ಒಳ್ಳೆಯ ಅನುಭವವಿದ್ದಂತೆ ಕಾಣುತ್ತಿದೆ.

ಶ್ರೀ ಪಿ. ರಾಮದೇವ್.—ನಾನು ೧೫ ವರ್ಷಗಳಕಾಲ ಕಾರ್ಪೊರೇಷನ್ ಸದಸ್ಯನಾಗಿದ್ದೆ. ಆ ಒಂದು ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ, ಯಶವಂತಪುರದಲ್ಲಿರತಕ್ಕಂಥ ಮಾಂಸದ ಅಂಗಡಿಗಳು ಎಷ್ಟು ಇನ್–ಸ್ಯಾನಿಟರಿ ಕಂಡೀಷನ್‌ನಲ್ಲಿದೆ ಎಂದರೆ, ಅಲ್ಲಿಂದ ಮಾಂಸ ತೆಗೆದುಕೊಂಡು ಹೋದವರಿಗೆ ರೋಗ ಬಾರದಿರುವುದಿಲ್ಲ. ಇದನ್ನು ನಡೆಸಿಕೊಂಡು ಬರುವ ಬಗ್ಗೆ ಟೆಂಡರ್ ಕಾಲ್‌ಫರ್ ಮಾಡುವುದರಲ್ಲಿಯೂ ಸಹ ಮೋಸ ನಡೆಯುತ್ತಿದೆ. ಇಲ್ಲಿ ನಡೆಯತಕ್ಕಂಥ ಮೋಸವನ್ನು ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್ ಅವರು ತಪ್ಪಿಸಿಲ್ಲ. ಈ ಸ್ಲಾಟರ್ ಹೌಸ್‌ಗಳಲ್ಲಿ ಎಷ್ಟು ಪ್ರಾಣಿಗಳನ್ನು ಕೊಲ್ಲಲಾಗುತ್ತದೋ ಅದಕ್ಕಿಂತ ಹೆಚ್ಚಿನ ಪ್ರಾಣಿಗಳನ್ನು ಸ್ಲಾಟರ್ ಹೌಸ್‌ಗಳ ಹೊರಗಡೆಯಲ್ಲಿ ಖಾಸಗಿಯಾಗಿ ಕಡಿಯುತ್ತಿದ್ದಾರೆ. ಮಹಮಡನ್ ಬ್ಲಾಕ್ ಮತ್ತು ಗೋರಿಪಾಳ್ಯ ಇಲ್ಲೆಲ್ಲಾ ಈ ರೀತಿ ನಡೆಯುತ್ತಿದೆ. ಇದು ಅಧಿಕಾರಿಗಳಿಗೆ ಗೊತ್ತಿದ್ದರೂ ಸಹ ಮಾಮೂಲಿ ವಸೂಲಿ ಮಾಡಿಕೊಂಡು ಸುಮ್ಮನಿರುತ್ತಾರೆ. ಇದನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಟೌನ್ ಮುನಿಸಿಪಲ್ ಕೌನ್ಸಿಲ್ ಸರಹದ್ದಿನಲ್ಲಿ ಬರತಕ್ಕಂಥ ಸ್ಲಾಟರ್ ಹೌಸ್‌ಗಳ ಬಗ್ಗೆ ಯಾವ ಕಂಟ್ರೋಲ್ ಇಲ್ಲ, ಯಾವ ರೀತಿಯಿಂದಲೂ ಸೂಪರ್‌ವಿಜನ್ ಮಾಡುತ್ತಿಲ್ಲ. ಜೊತೆಗೆ ಮಾರಾಟ ಮಾಡುವುದಕ್ಕೆ ಮೊದಲು ಸೀಲ್ ಹಾಕಬೇಕೆಂದು ನಿಯಮವಿದ್ದರೂ ಸಹ ಅದನ್ನು ಸರಿಯಾಗಿ ಪಾಲಿಸುತ್ತಿಲ್ಲ. ಒಂದಕ್ಕೆ ಸೀಲ್ ಹಾಕಿದರೆ, ಇಪ್ಪತ್ತನ್ನು ಸೀಲ್ ಇಲ್ಲದೆ ಮಾರಾಟ ಮಾಡುತ್ತಾರೆ. ಇದರಲ್ಲೂ ಚೀಟಿಂಗ್ ನಡೆಯುತ್ತಿದೆ; ಇದನ್ನು ಎಫೆಕ್ಟೀವ್ ಆಗಿ ಕಂಟ್ರೋಲ್ ಮಾಡಬೇಕೆಂದು ಕೇಳಿಕೊಂಡು, ನನಗೆ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಶೇರ್‌ಖಾನ್ (ಸೇಡಮ್).—ಮಾನ್ಯ ಅಧ್ಯಕ್ಷರೆ, ಈ ಅನಿಮಲ್ ಅಸ್‌ಬೆಂಡರಿ ಬೇಡಿಕೆಗೆ ನನ್ನ ಬೆಂಬಲವನ್ನು ಕೊಡುತ್ತಾ ಇದ್ದೇನೆ ಅದೇ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಗುಲ್ಬರ್ಗಾ ಜಿಲ್ಲೆಯಿಂದ ಬಂದವನು. ಈ ಮಿನಿಸ್ಟ್ರಿಯಲ್ಲಿ ನಾನ್ ಪ್ಲಾನ್ ಡೆವಲಪ್‌ಮೆಂಟ್, ನಾನ್ ರಿಜಿನಲ್ ಡಿಸ್ಟ್ರಿಬ್ಯೂಷನ್, ನಾನ್ ಈಕ್ವಲ್ ಡೆವಲಪ್‌ಮೆಂಟ್ ಏನು ನಡೆಯುತ್ತಿದೆ

ಅದಕ್ಕೆ ಮಂತ್ರಿಗಳು ಸರಿಯಾದ ರೀತಿಯಲ್ಲಿ ಗಮನ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ಡೈರಿಯಾಗಲಿ ಅಥವಾ ಪೌಲ್ಟ್ರಿಯಾಗಲಿ ಇಲ್ಲ. ಈ ಡಿಪಾರ್ಟ್‌ಮೆಂಟಿನಿಂದ ನಮ್ಮ ಜಿಲ್ಲೆಗೆ ಏನೇನೂ ಅವಕಾಶಗಳನ್ನು ಮಾಡಿ ಕೊಟ್ಟಿಲ್ಲ, ಜೊತೆಗೆ ಅಲ್ಲಿನ ಜನರಿಗೆ ಇದು ಏನೇನೂ ಗೊತ್ತಿಲ್ಲ. ಈ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ ಏನು ಆಕ್ಟಿವಿಟೀಸ್ ಇದೆ ಅದು ಎಲ್ಲಾ ಹಳೇ ಮೈಸೂರು ಭಾಗಕ್ಕೆ ಮೀಸಲಾದಂತೆ ಕಾಣುತ್ತದೆ. ಇವು ಯಾವುವೂ ನಮ್ಮ ಭಾಗಕ್ಕೆ ಬಂದಿಲ್ಲವೆಂದರೆ ತಪ್ಪಾಗಲಾರದು. ಈ ಏರಿಯಾಕ್ಕೆ ಏತಕ್ಕೆ ಸೆಲೆಕ್ಟ್ ಮಾಡಲಿಲ್ಲವೆಂದು ನಾನು ಕೇಳಬಯಸುತ್ತೇನೆ. ಮಾನ್ಯ ಮಂತ್ರಿಗಳು ಹಾಗೂ ಡಿಪಾರ್ಟ್‌ಮೆಂಟಿನವರು ಈ ಪ್ರದೇಶಕ್ಕೆ ಗಮನಕೊಟ್ಟಿಲ್ಲವೆಂದು ಹೇಳಲು ಇಚ್ಛಿಸುತ್ತೇನೆ.

SRI C. M. ARMUGUM.—I would like to know whether discussion on Public Works Department is going to be taken or not. If it is not so, I would like to give some suggestions on Animal Husbandry Department. Because so many people have not touched the points regarding Eggs and Mutton products. It is also a food, In Kerala it seems they are sending Eggs to Kashmir. Apart from this the prices of Eggs and Mutton has gone high in our Karnataka State. So, all these problems have to be discussed and If am permitted to give some suggestions I would be very greatful to the Speaker.

MR. SPEAKER.—We have to finish the discussion on the demand to day by 5-30 p.m. It was also decided to take up demands relating to P.W.D. I think members would touch only the points raised by you.

ಶ್ರೀ ಶೇರ್‌ಖಾನ್.—ನಾನು ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳುತ್ತಾ ಇದ್ದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಇನ್ನು ವರ್ಲ್ಡ್ ಫೇಮಸ್ ತಳಿಗಳು ನಮ್ಮ ಬೀದರ್ ಜಿಲ್ಲೆಯಲ್ಲಿ ದೊರಕುತ್ತವೆ. ಅದನ್ನು ಡೆವಲಪ್ ಮಾಡಿಲ್ಲ. ಇನ್ನು ಹೋದವರ್ಷ ಏನು ಒಂದು ಸ್ಕೀಮ್ ಪ್ರಾರಂಭ ಮಾಡಿದ್ದಾರೆ ಅದು ಎಷ್ಟರಮಟ್ಟಿಗೆ ಮುಂದೆ ಬಂದಿದೆಯೆನ್ನುವುದು ಗೊತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಗಮನಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನು ಗುಲ್ಬರ್ಗಾದಲ್ಲಿ ಎಷ್ಟೋ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ ಮತ್ತು ಕಾಂಪೌಂಡರುಗಳು ಇಲ್ಲ. ಇದರ ಬಗ್ಗೆ ಗಮನಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಅನಿಮಲ್ ಅಸ್ಬೆಂಡರಿ ಇಲಾಖೆಯ ಕಾರ್ಯಕ್ರಮಗಳನ್ನು ಫಲಪ್ರದವಾಗಿ ಮುಂದೆ ಬೆಳೆಸಿಕೊಂಡು ಹೋಗಬೇಕಾದರೆ ಎಲ್ಲ ಪ್ರದೇಶಗಳ ಕಡೆಗೂ ಗಮನ ಕೊಡಬೇಕಾದ್ದು ಬಹಳ ಅಗತ್ಯ. ಬರೀ ಟೌನ್‌ಗಳಲ್ಲಿ ಮಾತ್ರ ಡೈರಿಗಳನ್ನು ಡೆವಲಪ್ ಮಾಡುತ್ತಾ ಹೋದರೆ ಅದರಿಂದ ಜಾಸ್ತಿ ಪ್ರಯೋಜನ ಆಗುವುದಿಲ್ಲ. ಈ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಮಾನ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡು ಅಭಿವೃದ್ಧಿಗೊಳಿಸಬೇಕೆಂದು ಹೇಳುತ್ತೇನೆ. ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಲ್ಲಿಯ ಜನರು ಇದರಲ್ಲಿ ಬಹಳ ಆದಾಯ ಇಲ್ಲವೆಂದು ಹೆಚ್ಚಿನ ಮುತುವರ್ಜಿ ತೆಗೆದುಕೊಳ್ಳದೇ ಇದ್ದಾರೆ ಆದ್ದರಿಂದ ಆ ಕಡೆಗೆ ಮಾನ್ಯ ಮಂತ್ರಿಗಳು ಗಮನಕೊಟ್ಟು ಅವರುಗಳಿಗೆ ಪ್ರೋತ್ಸಾಹ ಕೊಟ್ಟಿದ್ದೇ ಆದರೆ ಅವರು ಹೆಚ್ಚಿನ ಮುತುವರ್ಜಿ ತೆಗೆದುಕೊಂಡು ಅವುಗಳ ಅಭಿವೃದ್ಧಿಯನ್ನು ಮಾಡುತ್ತಾರೆ. ಅಲ್ಲಿ ಈ ಒಂದು ಕಾರ್ಯಕ್ರಮ ಕೂಡ ತುಂಬಾ ಫಲಪ್ರದವಾಗಿ ಆಗುತ್ತದೆ. ಆ ಭಾಗದಲ್ಲಿ ಮನುಷ್ಯರು ಮತ್ತು ದನಗಳು ಬದುಕಬೇಕಾದರೆ ತಾವು ಆ ಕಡೆ ಹೆಚ್ಚು ಗಮನಕೊಡಬೇಕು, ಇಲ್ಲದೆ ಹೋದರೆ ಅಲ್ಲಿ ಅಭಿವೃದ್ಧಿ ಪಡಿಸಲಿಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಸ್ವಲ್ಪ ದಿವಸಗಳವರೆಗೆ ಹೆಚ್ಚಿನ ಮುತುವರ್ಜಿ ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳಿ ಇದರ ಬಗ್ಗೆ ಮಾನ್ಯ ಸಚಿವರು ಗಮನಕೊಡುತ್ತಾರೆಂದು ಆಶಿಸಿ ಇಷ್ಟು ಹೇಳಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದೇವೇಂದ್ರಪ್ಪ ಘಾಳಪ್ಪ (ಪಶು ಸಂಗೋಪನೆ ಹಾಗೂ ಹಾಲು ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಸುಮಾರು ೧೦ ಜನ ಶಾಸಕರು ಪಶುಸಂಗೋಪನೆ ಹಾಗೂ ಹಾಲು ಅಭಿವೃದ್ಧಿಯ ಬಗ್ಗೆ ಸಾಕಷ್ಟು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ ಮತ್ತು ನಮ್ಮ ಈ ಎರಡು ಖಾತೆಯಲ್ಲಿ ಆಗತಕ್ಕಂಥ ಕುಂದುಕೊರಿತೆಗಳು, ಅದನ್ನು ಯಾವ ರೀತಿಯಾಗಿ ನಿವಾರಣೆ ಮಾಡುವುದಕ್ಕೆ ಸಾಧ್ಯ ಎಂಬುದರ ಬಗ್ಗೆ ಬಹಳ ಯೋಗ್ಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಹೆಚ್ಚಿನ ವಿಷಯಗಳ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಕೆಲವು ಮುಖ್ಯ ವಿಷಯಗಳನ್ನು ಏನು ಮಾನ್ಯ ಸದಸ್ಯರು ಹೇಳಿದ್ದಾರೆ ಅವುಗಳ ಬಗ್ಗೆ ಹೇಳುವುದಕ್ಕೆ ಪ್ರಯತ್ನಮಾಡುತ್ತೇವೆ. ಶ್ರೀಮಾನ್ ಹನುಮೇಗೌಡರು ಹಾಗೂ ಇನ್ನು ಹಲವು ಸದಸ್ಯರು ನಮ್ಮ ಭಾರತ ದೇಶವಲ್ಲಿ ಈ ಒಂದು ಪಶುಸಂಪತ್ತು ರೈತನಿಗೆ ಬೆನ್ನು ಎಲುಬಾಗಿದೆ ಎಂದರೆ ತಪ್ಪಾಗಲಾರದು ಎಂದು ಹೇಳಿ ಈ ಒಂದು ವಿಷಯಕ್ಕೆ ಹೆಚ್ಚಿನ ಲಕ್ಷ್ಯಕೊಟ್ಟು ಅವುಗಳನ್ನು ಒಂದು ಸೈಂಟಿಫಿಕ್ ಮೆತೆಡ್‌ನಲ್ಲಿ ರಿಸರ್ಚ್ ಮಾಡಬೇಕೆನ್ನುವ ವಿಚಾರವನ್ನು ಇಲ್ಲಿ ಒತ್ತಿ ಹೇಳಿದ್ದಾರೆ. ಶ್ರೀಮಾನ್ ಗಂಗಾಧರನ್ ಅವರು ಯಾವ ರೀತಿ ಇದನ್ನು ಬೆಳೆಸಬೇಕು ಹಾಗೂ ಉಳಿಸಿಕೊಂಡು ಹೋಗಬೇಕೆನ್ನುವುವರ ವಿಚಾರದಲ್ಲಿ ಬಹಳ ಸೊಗಸಾಗಿ ಹೇಳಿದ್ದಾರೆ. ಈ ಅಧುನಿಕ ಯುಗದಲ್ಲಿ ಟ್ರಾಕ್ಟರುಗಳನ್ನು ನಾವು ಈಗ ಉಪಯೋಗಿಸುತ್ತಾ ಇದ್ದರೂಕೂಡ ಇನ್ನು ಎರಡು ಮೂರು ವರ್ಷಗಳಲ್ಲಿ ಇದರ ಉಪಯೋಗ ಸಾಧಾರಣವಾಗಿ ಕಡಿಮೆಯಾಗಿ ಮತ್ತೆ ಎತ್ತುಗಳ ಮುಖಾಂತರ ಉಳುಮೆಯನ್ನು ಮಾಡುವ ಯೋಚನೆಗೆ ಬರಬೇಕಾಗುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ, ಇದು ಸ್ವಲ್ಪ ದುಬಾರಿಯಾಗಿರುವುದರಿಂದ ಈ ವಿಚಾರವನ್ನು ಜನ ಇಟ್ಟುಕೊಂಡಿದ್ದಾರೆ. ಇಡೀ ಭಾರತ ದೇಶದ ಕಂಪೇರಿಟೀವ್ ಸ್ಟಡಿ ಮಾಡಿದಾಗ ರಿಸರ್ಚ್ ವಿದ್ಯಾಭ್ಯಾಸದ ಲಾಭಗಳನ್ನು ಪಡೆದುಕೊಳ್ಳುವುದರಲ್ಲಿ ನಮ್ಮ ಕರ್ನಾಟಕ ರಾಜ್ಯ ಮುಂದಿದೆ ಎಂದು ಹೆಮ್ಮೆಯಿಂದ ಹೇಳಬೇಕಾಗಿದೆ. ಇದು ಮೆಚತಕ್ಕಂಥಾದ್ದು. ಕುರಿಸಾಕಾಣಿಕೆ, ಕೋಳಿಸಾಕಾಣಿಕೆ, ಹಂದಿಸಾಕಾಣಿಕೆಯೂ ಸಹ ಬಹಳ ಮುಖ್ಯವಾದ ಕಾರ್ಯಕ್ರಮವೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು, ಇದು ನಿಜವಾಗಿಯೂ ಮೆಚ್ಚತಕ್ಕಂಥಾದ್ದು.

ಇವೊತ್ತು ನಮ್ಮ ದೇಶದಲ್ಲಿ ಕ್ರಾಸ್ ಬ್ರೀಡಿಂಗ್ ಮಾಡಬೇಕಾದರೆ, ಹೆಚ್ಚು ಹೆಚು ಹಸರು ತಳಿಗಳನ್ನು ಬೆಳೆಸಬೇಕಾದರೆ ನಮ್ಮಲ್ಲಿ ಮೊದಲು ಹಸಿರುಕ್ರಾಂತಿ ಬರಬೇಕು. ಹೆಚ್ಚು ಹೆಚ್ಚಾಗಿ ಹುಲ್ಲನ್ನು ಬೆಳೆಯುಲಿಕ್ಕೆ ರೈತರಿಗೆ ಸಲಹೆ ಕೊಡಬೇಕು. ಇವೊತ್ತು ಡೆಮಾನ್‌ಸ್ಟ್ರೇಷನ್ ಫಾರಂಗಳಲ್ಲಿ ಎಲ್ಲ ರೈತರಿಗೂ ತಿಳಿವಳಿಕೆ ಕೊಟ್ಟು ಸರಿಯಾದ ರೀತಿಯಲ್ಲಿ ಬೆಳೆಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಮಾನ್ಯ ಗಂಗಾಧರನ್‌ರವರು ಮೆಡಿಕಲ್ ಸ್ಟೋರ್ಸ್ ಬಗ್ಗೆ ೨೮ ಲಕ್ಷ ರೂಪಾಯಿ ಖರ್ಚು ಮಾಡಿರುವ ವಿಚಾರ ಹೇಳಿದರು. ಆ ಹಣ ಲ್ಯಾಪ್ಸ್ ಆಗಿಲ್ಲ, ಆ ಹಣವನ್ನು ಸರ್‌ಪ್ಲಸ್ ಆಫ್ ಡ್ರಗ್ಸ್ ಮತ್ತು ಹಾಸ್ಪಿಟಲ್ ಆಕ್ಸ್‌ಸರೀಸ್‌ಗೆ ಉಪಯೋಗಿಸಿದೆ. ಅಲ್ಲದೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೂ ಕೂಡ ಕೊಟ್ಟಿದೆ,

(ಚೇರ್ಮನ್ ಶ್ರೀ ಹೆಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಇನ್ನು ಶ್ರೀಮಾನ್ ಮಲ್ಲಿಕಾರ್ಜುನಪ್ಪನವರು ಒಳ್ಳೆಯ ತಳಿಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳಿದರು. ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಮಾಡಿದ್ದಾರೆ. ಇನ್ನು ಫಾಡರ್ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಹೇಳಬೇಕು ಎಂದರೆ ನೀರಾವರಿ ಯೋಜನೆ ಇರತಕ್ಕ ಪ್ರದೇಶದಲ್ಲಿ ಒಳ್ಳೆಯ ಹುಲ್ಲು ಹೆಚ್ಚು ಬೆಳೆಸಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಾಗಲೇ ಅದರ ಬಗ್ಗೆ ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಿ ಎಲ್ಲೆಲ್ಲಿ ಫಾರಂ ಬೆಳೆಸಬೇಕು ಅಲ್ಲಿ ಹೆಚ್ಚು ತಳಿ ಬರತಕ್ಕ ಹುಲ್ಲಿನ ವ್ಯವಸ್ಥೆ ಮಾಡಬೇಕೆಂದು ವ್ಯವಸ್ಥೆ ಮಾಡುತ್ತಿದ್ದೇವೆ. ಒಳ್ಳೆಯ ತಳಿಯನ್ನು ರೈತರಿಗೆ ಕೊಡಬೇಕು, ಮತ್ತೆ ಅವರಿಗೆ ಅನುಕೂಲವಾಗುವ ರೀತಿ ಸಹಾಯಧನ ಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ರೈತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ. ಇವೊತ್ತು ಗೌಳಿ ಪ್ರೋಗ್ರಾಂಗೆ ಸಂಬಂಧಪಟ್ಟಂತೆ ನಾನು ನೋಡಿದ್ದೇನೆ, ನಾವು ಅಲ್ಲಿ ಎಷ್ಟೇ ಸಹಾಯ ಮಾಡಿದರೂ ಕೂಡ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಅಲ್ಲಿರತಕ್ಕ ಶ್ರೀಗಂಧದ ಕಟ್ಟಿಗೆ ಕಳ್ಳತನ ಆಗುತ್ತದೆಂದು ಅವಕಾಶ ಕೊಡುತ್ತಿಲ್ಲ. ಅದಕ್ಕಾಗಿ ಇನ್ನೂ ಹೆಚ್ಚಿನ ಸಹಾಯಧನ ಕೊಡುವುದು ಇದೆ. ಇನ್ನು ಡಿ.ಪಿ.ಎ. ಪ್ರೋಗ್ರಾಂ, ಮಾರ್ಜಿನಲ್ ಫಾರ್‌ಮರ್ಸ್ ಸ್ಮಾಲ್ ಫಾರಮರ್ಸ್ ಪ್ರೋಗ್ರಾಂಗಳು ಇವೆ. ಈಗ ಸದ್ಯಕ್ಕೆ ಫಾರೆಸ್ಟ್‌ನಲ್ಲಿ ಹೋಗಬೇಕು ಎಂದರೆ ಅಲ್ಲಿರತಕ್ಕ ಹಲವಾರು ವಿದ್ಯಮಾನಗಳನ್ನು ಕಂಡುಹಿಡಿದು ಕೊಂಡು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬಿಡುತ್ತಿಲ್ಲ.

Sri G. B. Shankar Rao.—They have been given land to graze their animals. They have been rehabilitated near Kuruvatti. They are settled there and not roaming about.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಮಾನ್ಯ ಸದಸ್ಯರಾದ ಶಂಕರ್‌ರಾವ್ ಅವರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಮೊದಲು ಇದೇ ಖಾತೆಯಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ ವರು ಅವರು ವಿದೇಶ ಪ್ರಯಾಣ ಮಾಡಿ ಅಲ್ಲಿರತಕ್ಕ ವಿದ್ಯಮಾನಗಳನ್ನು ತಿಳಿದುಕೊಂಡುಬಂದು ನಮ್ಮ ದೇಶದಲ್ಲಿ ಒಳ್ಳೆಯ ಪರಿಣಾಮಕಾರಿಯಾಗಿ ಕಾರ್ಯಕ್ರಮ ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ ಅವರು ಆಫೀಸರ್ಸ್‌ನ್ನು ಟ್ರೈನಿಂಗ್‌ಗೆ ಕಳುಹಿಸತಕ್ಕ ವಿಚಾರ ಹೇಳಿದ್ದಾರೆ. ಈ ಬಗ್ಗೆ ಅವರಿಗೆ ಗೊತ್ತಿರುವ ಹಾಗೆ ಈಗಾಗಲೇ, ಈ ಡೈರಿಗೆ ಸಂಬಂಧಪಟ್ಟಂತೆ ಒಬ್ಬ ಆಫೀಸರನ್ನು ಕಳುಹಿಸಿದ್ದು, ಅವರು ಪ್ರವಾಸ ಮುಗಿಸಿ ಕೊಂಡು ಕರ್ನಾಟಕಕ್ಕೆ ಬಂದಮೇಲೆ ಅಲ್ಲಿ ಏನು ನಡೆಯುತ್ತದೆ ಅದನ್ನ ಇಲ್ಲಿ ಉಪಯೋಗಮಾಡಿಕೊಳ್ಳು ತ್ತಿದ್ದಾರೆ ಇದೇ ರೀತಿ ಆಫೀಸರುಗಳನ್ನು ಪೋಸ್ಟ್ ಮಾಡುತ್ತಾ ಹೋಗುತ್ತಿರುತ್ತೇವೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಇವೊತ್ತು ವಿದೇಶಿ ಪ್ರಯಾಣ ಮಾಡಿ ಬಂದಂತಹವರನ್ನು ತಾವು ಬೇರೆ ಕಡೆಗೆ ಚೇಂಜ್ ಮಾಡದೇ, ಅವರಿಗೆ ಹೆಚ್ಚಿಗೆ ಪ್ರಮೋಷನ್ ಕೊಟ್ಟರು ಅದೇ ಕೆಲಸದಲ್ಲಿ ಇರುವಂತೆ ಮಾಡಬೇಕು. ಇಲ್ಲದೇ ಹೋದರೆ ಅವರು ವಿದೇಶ ಪ್ರಯಾಣ ಮಾಡಿ ಪಡೆದುಕೊಂಡು ಬಂದಂಥಹ ಅನುಭವ ವ್ಯರ್ಥವಾಗುತ್ತದೆ.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಈಗ ತಾವು ಹೇಳತಕ್ಕದ್ದು ನಿಜ ಇದೆ. ತಾವು ಹೇಳಿದ ರೀತಿ ಯಲ್ಲೇ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ಮಾತ್ರ ಚೇಂಜ್ ಮಾಡುತ್ತಿದ್ದೇವೆ.

ಇನ್ನು ಸೆಮನ್ ಬ್ಯಾಂಕ್ ಬಗ್ಗೆ ಒಂದು ವಿಚಾರ ಹೇಳಿದ್ದಾರೆ. ಸುಮಾರು ೧ ಕೋಟಿ ೩೦ ಲಕ್ಷ ರೂಪಾಯಿಯಲ್ಲಿ ಒಂದು ಪ್ರಾಜೆಕ್ಟ್ ನಡೆಯುತ್ತಿದೆ. ಇದಕ್ಕೆ ಬೇರೆ ಒಂದು ಏರ್ಪಾಡು ಮಾಡುವುದ ಕ್ಕಿಂತ ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್ ಏನು ಇದೆ ಅಲ್ಲಿಯೇ ಎಕ್ಸ್‌ಪ್ಯಾಂಡ್ ಮಾಡಲಿಕ್ಕೆ ಪ್ಲಾನ್ ಹಾಕಿಕೊಳ್ಳಬೇಕು ಎಂದು ಇದೆ.

ಇನ್ನು ಪ್ರೊವೈಡಿಂಗ್ ಕ್ರಾಸ್ ಬ್ರೀಡಿಂಗ್ ಈ ಬಗ್ಗೆ ಕರ್ನಾಟಕದಲ್ಲಿ ಡೈರಿ ಡೆವಲಪ್‌ಮೆಂಟ್ ಯಾವ ರೀತಿ ಮಾಡುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಮುಂದೆ ಯಾವ ರೀತಿ ಮಾಡಬೇಕು ಎನ್ನುವುದನ್ನು ಸರ್ಕಾರ ವಿಚಾರ ಮಾಡುತ್ತಿದೆ. ಇನ್ನು ನಮ್ಮ ದೇಶದಲ್ಲಿ ಎಸ್.ಎಫ್.ಡಿ.ಎ. ಕೆಲಸ ನಡೆಯುತ್ತಿದೆ. ಇದರಲ್ಲಿ ಏನಾಗಿದೆ ಎಂದರೆ ನಾವು ೭೫ ಪರ್‌ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ನ್ಯಾಷನಲ್ ಬ್ಯಾಂಕಿನವರು ಪ್ರಾರಂಭದಲ್ಲಿ ೧೯೭೫ರಿಂದ ಈಚೆಗೆ ಸರಿಯಾಗಿ ಕೆಲಸ ಮಾಡಿಕೊಟ್ಟರು. ಆಮೇಲೆ ಕಡಿಮೆ ಮಾಡಿದ್ದಾರೆ. ಮೊನ್ನೆ ಮೀಟಿಂಗ್‌ನಲ್ಲಿ ಸ್ಟೇಟ್ ಲೆವೆಲ್‌ನವರು, ದೊಡ್ಡ ದೊಡ್ಡ ಬ್ಯಾಂಕುಗಳ ಮ್ಯಾನೇಜರನ್ನು ಕರೆದು ಈ ಸ್ಕೀಮ್ ಬಗ್ಗೆ ಯಾವ ತರಹ ಮಾಡಬೇಕು ಎಂದು ವಿಚಾರ ನಡೆದಿದೆ. ಅದರ ಬಗ್ಗೆ ತೀವ್ರವಾಗಿ ವಿಚಾರ ಮಾಡುತ್ತಿದ್ದೇವೆ.

ಇನ್ನು ಪ್ರೊವೈಡಿಂಗ್ ಡೀಪ್ ಫ್ರೀಜ್ ಹೈಬ್ರಿಡ್ ಪ್ಲಾಂಟ್, ಇದನ್ನು ಹೆಸರುಘಟ್ಟದಲ್ಲಿ ಪ್ರಾರಂಭ ಮಾಡಿದ್ದೇವೆ. ಇದನ್ನು ಎಕ್ಸ್‌ಪ್ಯಾಂಡ್ ಮಾಡಬೇಕಾಗಿದೆ. ಇನ್ನು ಬ್ರೀಡಿಂಗ್ ಪಾಲಿಸಿ ಫಾರ್ ಕ್ಯಾಟಲ್ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕು ಎಂದರೆ ಇವೊತ್ತು ಕ್ರಾಸ್ ಬ್ರೀಡಿಂಗ್ ಕಾ ಮೈಸೂರು ಭಾಗದಲ್ಲಿ ಚೆನ್ನಾಗಿ ಬೆಳೆಯುತ್ತವೆ. ಇನ್ನು ಧಾರವಾಡ, ಗುಲ್ಬರ್ಗಕ್ಕೆ ಮುನಿರಾಬಾದಿನಲ್ಲಿ ಒಂದು ಪ್ರಾರಂಭ ಮಾಡಿದ್ದೇವೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಮಾಡಿದ್ದೇವೆ. ಇದು ಈಗ ಸದ್ಯದಲ್ಲಿ ಕಡಿಮೆ ಇರಬಹುದು, ಇದರ ಬಗ್ಗೆ ಹೆಚ್ಚಿನ ಕಾರ್ಯಕ್ರಮ ಮಾಡಬೇಕು ಎಂದು ಮಾಡಿದ್ದೇವೆ. ಆಗ ಅನೇಕ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅವೆಲ್ಲವನ್ನೂ ಸರ್ಕಾರದ ಗಮನ ದಲ್ಲಿಟ್ಟುಕೊಂಡು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

ಇನ್ನು ಪೇ ಸ್ಕೇಲ್ ಬಗ್ಗೆ ಪೈ ಕಮಿಷನ್ ಅವರು ಇದನ್ನು ಬೇರೆ ಮಾಡಿದ್ದಾರೆ ಎಂದು ಹೇಳಿದರು. ಇದು ನನ್ನ ಡಿಪಾರ್ಟ್‌ಮೆಂಟಿಗೆ ಮಾತ್ರ ಅಲ್ಲ ಬೇರೆ ಕೆಲವು ಡಿಪಾರ್ಟ್‌ಮೆಂಟ್‌ಗಳಿಗೂ ಅನ್ಯಾಯವಾಗು ತ್ತದೆ. ಅದರಿಂದ ಇದು ಈಗ ಸರ್ಕಾರದ ಪರಿಶೀಲನೆಯಲ್ಲಿದೆ.

5-00 P.M.

SRI G. B. SHANKAR RAO.—How can you expect the officers to work with enthusiasm? His enthusiasm to work will be hampered when the other people get more. The minimum was given. I pleaded that they should be paid on the same scale you pay to the other doctors. If you put them on the same scale and give uniform pay you can also bring down the expenditure on Health Department. The qualifications, experience, responsiblity are the same. At the same time the attendant diseases that these doctors are subjected to is much more. Why should these people be neglected? It is high time that we think they should not be discouraged. They should be encouraged more then the other doctors. They have to take are of livestocks and when the livestocks and when the livestocks are taken care of the human lives are safe. If you spend more on livestocks, you get more nutritions required for the health of human beings and when once it is there in plenty, the diseases will be less and to that extent you can cut the expenditure of the Health Department.

ಶ್ರೀ ದೇವೇಂದ್ರಪ್ಪ ಘಾಳಪ್ಪ.-ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರು ಹೇಳಿದ ಹಾಗೆ ಕಮೀಷನ್ ಮಾಡಿದ್ದೇವೆ. ಸರ್ಕಾರ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಸೂಕ್ತವಾದ ಕ್ರಮತೆಗೆದುಕೊಳ್ಳುತ್ತದೆ. ಕರಿಬಸವನಗೌಡರು ಒಂದು ಮಾತು ಹೇಳಿದರು. ೧೯೫೬ ರಿಂದ ಈಚೆಗೆ ಭಾಷಾವಾರು ವಿಭಜಯಾದ ಮೇಲೆ ಮಂತ್ರಿಗಳೇ ಆಗಲೀ, ಮುಖ್ಯಮಂತ್ರಿಗಳೇ ಆಗಲೀ ಎಲ್ಲಾ ಭಾಗವನ್ನು ತಮ್ಮದು ಎಂದು ತಿಳಿದು ಕೊಂಡು ಕೆಲಸ ಮಾಡಬೇಕಾಗುತ್ತದೆ. ತಾವು ಕೊಟ್ಟ ಸಲಹೆಗಳ ಬಗ್ಗೆಯು ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕರಿಬಸವನ ಗೌಡ.—ಗುಲ್ಬರ್ಗ ಕೂಡ ಒಂದು ಡಿವಿಜನ್ ತಮ್ಮ ಸ್ಕೀಮುಗಳು............

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಂತ್ರಿಗಳು ಉತ್ತರ ಕೊಟ್ಟಮೇಲೆ, ವಿವರಣೆ ಕೇಳುವುದಕ್ಕೆ ಅವಕಾಶ ಕೊಡಿ.

ಚೇರ್ಮನ್‌ರವರು.—ಮಾನ್ಯಮಂತ್ರಿಗಳು ಮಧ್ಯದಲ್ಲಿ ಅವಕಾಶಕೊಡಬೇಡಿ, ಕೊನೆಯಲ್ಲಿಸ್ಪಷ್ಟೀಕರಣಕ್ಕೆ ಉತ್ತರ ಕೊಡಿ,

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಅಧ್ಯಕ್ಷರೇ, ಮೀರ್ಯಾಣುಗಳ ಬಗ್ಗೆ ಮಾನ್ಯ ಸದಸ್ಯರುಗಳು ಕೇಳುವುದಕ್ಕೆ ಹೇಳಿದ್ದೇನೆ. ಇವತ್ತಿನ ವೈಜ್ಞಾನಿಕ ಯುಗದಲ್ಲಿ ೪೦ ವರ್ಷ ಬೇಕಾದರೆ ಇಟ್ಟುಕೊಂಡು ಅದನ್ನು ಉಪಯೋಗ ಮಾಡತಕ್ಕ ಯುಗದಲ್ಲಿ ಇವತ್ತು ನಾವು ಇದ್ದೇವೆ. ಮೀರ್ಯಾಣುಗಳ ಉತ್ಪಾದನೆಗೆ ಹೆಚ್ಚು ಹೆಚ್ಚು ಗಮನ ಕೊಡುತ್ತಿದ್ದೇವೆ. ಇನ್ನು ಹಲವಾರು ಕಡೆಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಔಷಧಿಗಳು ಕಡಿಮೆ ಪ್ರಮಾಣದಲ್ಲಿ ಸರಬರಾಜಾಗುತ್ತಿವೆ. ಸರಬರಾಜು ಆದರೂ ಕೂಡ ಕೆಲವು ಕಡೆ ಡಾಕ್ಟರುಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಸರ್ಕಾರ ಔಷಧಿ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀಮಾನ್ ಚಂದ್ರಶೇಖರರವರು ಎತ್ತುಗಳ ತಳಿಯ ಬಗ್ಗೆ ಬಹಳ ಚನ್ನಾಗಿ ಹೇಳಿದ್ದಾರೆ. ಇವತು ಹಳ್ಳೀಕಾರ, ಅಮೃತ ಮಹಲ್ ಹಾಗೂ ಕೃಷ್ಣ ವಾಲಿ ಎಂದು ೪-೫ ರೀತಿಯ ತಳಿಗಳು ಇವೆ. ಇವುಗಳು ನಮ್ಮ ದೇಶದಲಿ ಬಹಳ ಹಿಂದಿನಿಂದಲೂ ಇದ್ದು ರೈತರಿಗೆ ಅನುಕೂಲವಾಗತಕ್ಕ ತಳಿಗಳಾಗಿವೆ. ಇವುಗಳನ್ನು ಅಭಿವೃದ್ಧಿ ಮಾಡುವ ಸಲುವಾಗಿ ನಮ್ಮ ಖಾತೆ ಹೆಚ್ಚಿನ ಕ್ರಮಗಳನ್ನು ಕೈಗೊಂಡಿದೆ. ಶೇಖರರವರು ದೇವಣಿ ತಳಿ ಇಲ್ಲವೇ ಇಲ್ಲ ಎಂದು ಹೇಳಿದರು. ೧೯೫೬ಕ್ಕೆ ಮುಂಚೆ ಇದು ಮಹಾರಾಷ್ಟ್ರದಲ್ಲಿ ಇತ್ತು, ಬೀದರೆ ಜಿಲ್ಲೆ ಕರ್ನಾಟಕಕ್ಕೆ ಬಂದ ಮೇಲೆ ಈ ತಳಿ ನಮ್ಮ ಬೀದರ್ ಜಿಲ್ಲೆಯ ರೈತರಿಗೆ ಬಹಳ ಅನುಕೂಲವಾಗಿದೆ. ೧೯೭೫ರಿಂದ ಇದರ ಅಭಿವೃದ್ಧಿಗೆ ಹೆಚ್ಚಿನ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ

ಬಿಲ್ಡಿಂಗ್ಸ್ ಬಂದಿವೆ. ಇನ್ನು ೩-೪ ತಿಂಗಳಲ್ಲಿ ಸರಿಯಾಗಿ ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಹೆಚ್.ಎಫ್. ಮತ್ತು ಆರ್‌ಡಿಎಂ. ಇನ್ನಿತರ ವರೈಟಿಗಳ ಬಗ್ಗೆ ಹೇಳಿದರು, ಇವತ್ತು ನಾವು ಮಹರಾಜರಿಗೆ ಋಣಿಯಾಗಿರಬೇಕು. ಆಗ ಅವರು ಹೊರದೇಶದಿಂದ ತಂದು ಅವುಗಳನ್ನು ಬೆಳೆಸಿದ್ದಾರೆ. ಅವುಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗತಕ್ಕದ್ದು ನಮ್ಮ ಜವಾಬ್ದಾರಿ. ಡಿಪಿಎಪಿ ಮತ್ತು ಎಸ್‌ಎಫ್‌ಡಿ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಈ ಕಾರ್ಯಕ್ರಮ ಸರಿಯಾಗಿ ನಡೆಯುತ್ತಿಲ್ಲ, ಈ ಕಾರ್ಯಕ್ರಮ ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಅಲ್ಲಿ ಪಶುಗಳಿಗೆ ಹರಡತಕ್ಕ ರೋಗಗಳನ್ನು ಕಂಟ್ರೋಲ್ ಮಾಡಬೇಕೆಂದು ಹೇಳಿದ್ದಾರೆ. ಅಕ್ಕಪಕ್ಕದ ರಾಜ್ಯಗಳಿಂದ ಸಾಮಾನ್ಯವಾಗಿ ಈ ರೋಗಗಳು ಹರಡುತ್ತಿವೆ. ಈ ಬೇನೆಗಳು ಹರಡದಂತೆ ಮುಂಜಾಗ್ರತೆ ಕ್ರಮಕೈಗೊಳ್ಳುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತಿದ್ದೇವೆ.

ಹಾಲಿನ ಸರಬರಾಜು ಮತ್ತು ದರಗಳ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಡೈರಿ ಪ್ರಾರಂಭವಾದಾಗಿನಿಂದಲೂ ಈ ಸಮಸ್ಯೆಗಳು ಬರುತ್ತಲೇ ಇವೆ. ಈ ಬಗ್ಗೆ ನಾನು ಎರಡು ಸದನಗಳಲ್ಲೂ. ಪ್ರಶ್ನೋತ್ತರ ವೇಳೆಯಲ್ಲಿ, ಗಮನಸೆಳೆಯುವ ಸೂಚನೆಗಳಿಗೆ ಅನೇಕ ಬಾರಿ ಉತ್ತರ ಕೊಟ್ಟಿದ್ದೇನೆ. ಈಗ ನಗರದಲ್ಲಿರತಕ್ಕ ಜನತೆಗೆ ಹೆಚ್ಚಿನ ಹಾಲು ಸರಬಾರಜು ಮಾಡುವ ದೃಷ್ಟಿಯಿಂದ ಬೆಂಗಳೂರು ಡೈರಿ ಜೊತೆಗೆ ಮದರ ಡೈರಿ ಬೇರೆ ಮಾಡುತ್ತಿದ್ದೇವೆ. ಅಲ್ಲದೆ ಉತ್ತಮವಾದ ಬಾಟಲಿಂಗ್ ವ್ಯವಸ್ಥೆ, ಮತ್ತು ಕಾಲಕ್ಕೆ ಸರಿಯಾಗಿ ಹಾಲು ದೊರೆಯುವ ವ್ಯವಸ್ಥೆ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಸಾಮಾನ್ಯವಾಗಿ ಮಾರ್ಚಿ ಮತ್ತು ಏಪ್ರಿಲ್ ತಿಂಗಳಲ್ಲಿ ಹಾಲು ಸರಿಯಾಗಿ ಸರಬರಾಜು ಆಗುವುದಿಲ್ಲ. ನಗರದಲ್ಲಿರತಕ್ಕ ಎಲ್ಲರಿಗೂ ಒಳ್ಳೆಯ ಹಾಲನ್ನು ಒದಗಿಸುವ ಬಗ್ಗೆ ಈಗಾಗಲೇ ಕಾರ್ಯಕ್ರಮ ಹಾಕೊಂಡಿದ್ದೇವೆ. ಇದಕ್ಕೆಲ್ಲಾ ಓವರ್‌ಹೆಡ ಚಾರ್ಜಸ್ ಜಾಸ್ತಿ ಬರುತ್ತದೆ. ಈಗಾಗಲೆ ಸಾಕಷ್ಟು ವಾಹನಗಳನ್ನು ಖರೀದಿ ಮಾಡಿದ್ದೇವೆ. ಈಗ ಹಾಲಿನ ಬೆಲೆ ಜಾಸ್ತಿಯಾಗಿದೆಯೆಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ನಮಗೆ ಫ್ಲಸ್ ಮತ್ತು ಲೀನ್ ಸೀಸನಲ್ಲಿ ಹಾಲು ಸರಬರಾಜು ಆಗುತ್ತದೆ. ಒಂದು ಸೀಸನಲ್ಲಿ ಹೆಚ್ಚಿಗೆ ಹಾಲು ಬಂದರೆ, ಮತ್ತೊಂದು ಸೀಸೆನಲ್ಲಿ ಹಾಲು ತುಂಬ ಕಡಿಮೆ ಬರುತ್ತದೆ. ಈ ಅಂತರವನ್ನು. ತುಂಬಿಕೊಳ್ಳಲಿಕ್ಕಾಗಿ ನಾವು ಹಾಲಿನ ದರವನ್ನು ಹೆಚ್ಚಿಸಬೇಕಾಗುತ್ತದೆ, ಬಹುಶಃ ನಾವು ಕೈಗೊಂಡಿಸುವ ಕಾರ್ಯಕ್ರಮಗಳು ಫಲಪ್ರಧವಾದರೆ ಹಾಲಿನ ಬೆಲೆ ಕಡಿಮೆಯಾಗುತ್ತದೆಂದು ಭಾವಿಸುತ್ತೇನೆ.

ಮತ್ತೆ ಈ ಶ್ರೀಮತಿ ರೇಣಕಾ ರಾಜೇಂದ್ರನ್‌ರವರು ಔಷಧಿ ಬಗ್ಗೆ ಹೇಳಿದ್ದಾರೆ. ಕೋಲಾರ ಜಿಲ್ಲೆ ಬರೀ ಮಳೆಯನ್ನು ನಂಬಿರತಕ್ಕ ಜಿಲ್ಲೆ, ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕರ್ನಾಟಕ ಡೈರಿ ಡವಲಪ್‌ಮೆಂಟ್ ಮುಖಾಂತರ ಕೋಲಾರ ಜಿಲ್ಲೆಯಲ್ಲಿ ಬಹಳ ತೀವ್ರವಾಗಿ ಚಟುವಟಿಕೆಗಳನ್ನು ಕೈಗೊಳ್ಳಬೇಕೆಂದು ಈಗಾಗಲೆ ಸೊಸೈಟಿಗಳನ್ನು ಮಾಡಿದ್ದೇವೆ. ಅಲ್ಲಿ ಒಂದು ಚಿಲ್ಲಿಂಗ್ ಪ್ಲಾಂಟ್ ತಯಾರು ಮಾಡಿ, ನಮ್ಮ ವಾಹನಗಳಿಂದಲೇ ಸರಬರಾಜು ಮಾಡಬೇಕೆಂದು ಕೂಡ ನಾವು ಯೋಚನೆ ಮಾಡಿದ್ದೆವೆಂದು ತಿಳಿಸುವುದಕ್ಕೆ ಸಂತೋಷ ಪಡುತ್ತೇನೆ. ಹಾಲನ್ನು ತರಬೇಕಾದರೆ ಒಂದೊಂದು ಹಳ್ಳಿಗೂ ಹೋಗತಕ್ಕಂಥ ಹಾದಿ ಕಟ್ಟಿರುವುದರಿಂದ ಒಂದು ಕಡೆ ಹೋಗಿರುತ್ತವೆ ಮತ್ತೊಂದು ಕಡೆ ಹೋಗಿಲ್ಲವೆಂದು ಹೇಳಿದ್ದಾರೆ. ಎಲ್ಲಿ ರಸ್ತೆಗಳು ಸರಿಯಾಗಿದ್ದು ವಾಹನಗಳು ಹೋಗಲಿಕ್ಕೆ ಸಾಧ್ಯವಿರುತ್ತದೆ ಅಂಥಕಡೆ ಖಂಡಿತವಾಗಿಯೂ ಕಾರ್ಯಗತಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಶ್ರೀ ರಾಮಭಟ್‌ರವರು ಸೌತ್ ಕೆನರಾಬಗ್ಗೆ ಹೇಳಿದ್ದಾರೆ, ಅಲ್ಲಿಂದ ಇನ್‌ಫರ್‌ಮೇಷನ್ ತರಿಸಬೇಕಾಗಿರುತ್ತದೆ. ಕೂಡಲೇ ಇದರ ಬಗ್ಗೆ ಉತ್ತರ ಕೊಡಬೇಕೆಂದರೆ ಸಾಧ್ಯವಾಗುತ್ತಿಲ್ಲ. ನಿಜವಾಗಿಯೂ ಒಂದುರೀತಿಯಾದ ಸಂಶೋಧನೆ ಮಾಡಬೇಕಾಗಿರುತ್ತದೆ. ದನಗಳು ಸಾಯುತಕ್ಕಂಥ ಪರಿಸ್ಥಿತಿ ಇದ್ದರೆ ಅದನ್ನು ಯಾವರೀತಿ ತಪ್ಪಿಸಬೇಕು ಎನ್ನುವುದರ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಗೋಮಾಳದ ಬಗ್ಗೆ ಅನೇಕ ಸದಸ್ಯರು ಬಹಳ ವ್ಯಥೆಯಿಂದ ಹೇಳಿದ್ದಾರೆ. ಗೋಮಾಳದ ಬಗ್ಗೆ ನನಗೆ ತಿಳಿದಮಟ್ಟಿಗೆ ಕರ್ನಾಟಕ ಡೈರಿಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ೮ ಜಿಲ್ಲೆಗಳಲ್ಲಿ ಏನು ಇರುತ್ತದೆ ಇದಕ್ಕೆ ಸೇರಿದಂತೆ ಗೋಮಾಳಗಳು ಇರುತ್ತವೆ. ಇದರಲ್ಲಿ ಫಾರಿನ್ ಎಕ್ಸ್‌ಚೇಂಜ್ ಬರತ

ಕ್ಕಂಥ ಗೇರುಬೀಜ ಬೆಳೆಯಲು ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಹೇಳಿದರು. ಇದನ್ನು ಹೀಗೆ ಬಿಟ್ಟುಕೊಂಡು ಹೋದರೆ ಮುಂದೆ ಬಹಳ ಕಠಿಣ ಪರಿಸ್ಥಿತಿಯುಂಟಾಗಿ ತೊಂದರೆಗೆ ಈಡಾಗಬೇಕಾಗುತ್ತದೆ. ಇದನ್ನು ಕಾಪಾಡಿಕೊಂಡು ಬೆಳೆಸಿಕೊಂಡು ಹೋಗಲಿಕ್ಕೆ ಯಾವರೀತಿ ಪ್ರಯತ್ನ ಮಾಡಬೇಕು ಎನ್ನುವ ಬಗ್ಗೆ ತೀವ್ರವಾಗಿ ವಿಚಾರ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ಫೌಲ್‌ಟ್ರಿಬಗ್ಗೆ ಹೇಳುವುದಾದರೆ, ಇದನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದರೂ, ಇದರ ಮಾರ್ಕೆಟ್ ಇಲ್ಲದಿರುವುದರಿಂದ ಬಹಳ ತೊಂದರೆಯಾಗಿರುತ್ತದೆ. ಇದರಿಂದ ಉತ್ಪತ್ತಿಯಾಗುವ ಮೊಟ್ಟೆಗಳನ್ನು ಉಪಯೋಗಿಸಿಕೊಂಡು ಎಗ್ ಪೌಡರ್ ಮಾಡತಕ್ಕಂಥ ಒಂದು ಪ್ಲಾಂಟ್ ಹಾಕಬೇಕೆಂದು ಹೇಳಿದ್ದಾರೆ. ಕೇರಳಾದಲ್ಲಿ ಈರೀತಿಯಾದ ಪ್ಲಾಂಟ್ ಇರುತ್ತದೆಂದು ಏನು ಸೂಚನೆ ಕೊಟ್ಟಿರುತ್ತಾರೆ ಅದರಂತೆ ನಮ್ಮಲ್ಲಿಯೂ ಒಂದು ಪ್ಲಾಂಟ್ ಮಾಡಲು ನಮ್ಮಲ್ಲಿ ಎಷ್ಟು ಉತ್ಪತ್ತಿಯಾಗುತ್ತಿದೆ. ಸರ್‌ಪ್ಲಸ್ ಏನು ಇದೆ ಇವೆಲ್ಲ ಅಂಕಿಅಂಶಗಳನು ತೆಗೆದುಕೊಂಡು ಯಾವರೀತಿ ಮಾಡಬೇಕು ಎನ್ನುವುದರಬಗ್ಗೆ ಆಲೋಚನೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ.

ಇನ್ನು ಮಾನ್ಯ ಹನುಮೇಗೌಡರು ಮಾತನಾಡುತ್ತಾ ರೈತರಬಗ್ಗೆ ಕಳಕಳಿಯಿಂದ ಬಹಳವಾಗಿ ಹೇಳಿದ್ದಾರೆ. ನಮ್ಮ ಅಧಿಕಾರಿಗಳು ರೈತರಿಗೆ ನಾನಾರೀತಿಯಲ್ಲಿ ಕಷ್ಟನಷ್ಟಗಳನ್ನು ಉಂಟುಮಾಡಿದ್ದಾರೆಂದು ಹೇಳಿದ್ದಾರೆ. ರೈತರ ಬಗ್ಗೆ ಹೆಚ್ಚು ಅನುಭವವಿರತಕ್ಕಂಥ ನಾನು, ಅದರಲ್ಲೂ ರೈತರಮನೆತನದಲ್ಲಿ ಹುಟ್ಟಿದಂಥ ನಾನು ಅವರ ಕಷ್ಟನಷ್ಟಗಳನ್ನು ಚೆನ್ನಾಗಿ ಅರಿತಿಕೊಂಡಿರುತ್ತೇನೆ. ಅದನ್ನು ಯಾವರೀತಿ ಬಗೆಹರಿಸಬೇಕು ಎನ್ನುವುದರಬಗ್ಗೆ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬರಲು ಪ್ರಯತ್ನಪಡುತ್ತೇನೆ. ಏತಕ್ಕೆಂದರೆ ಅವರೂ ಕೂಡ ಹೌಸಿಂಗ ಯೂನಿಯನ್ ಪ್ರೆಸಿಡೆಂಟ್‌ಆಗಿ, ಇರುತ್ತಾರೆ. ಎಕ್ಸಿಕ್ಯುಟೀವ್ ಕಮಿಟಿ, ಜನರಲ್‌ಬಾಡಿಯಲ್ಲಾಗಲಿ ಯಾವ ಆಫೀಸರ್ ಎಂದು ನಿರ್ದಿಷ್ಟವಾಗಿ ತಿಳಿಸಿದರೆ ಅವರ ಮೇಲೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಇದರ ಬಗ್ಗೆ ನಾನು ಬಹಳ ನೊಂದು ಹೇಳುತ್ತಿದ್ದೇನೆ ಹೇಳಬೇಕಾದ್ದು ಬಹಳವಾಗಿ ಇರುತ್ತದೆ. ಅವಕಾಶ ಸಿಕ್ಕಿದರೆ ಎಲ್ಲವನ್ನು ಹೇಳುತೇನೆ.

ಚೇರ್ಮನ್‌ರವರು.—ಮಂತ್ರಿಗಳು ಯಾವ ಸಂದರ್ಭದಲ್ಲೂ ಈಲ್ಡ್ ಆಗಬಾರದೆಂದು ಮೊದಲೇ ತಮಗೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ವಿವರಣೆ ಕೇಳಬೇಕಾದರೆ ದಯವಿಟ್ಟು ಉತ್ತರ ಮುಗಿದಮೇಲೆ ಕೇಳಬಹುದು. ಅದಕ್ಕೆ ಅವಕಾಶ ಕೊಡುತ್ತೇವೆ.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಈಗ ಏನು ಸರ್ಕಾರದವರು ೧೫೦–೨೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ ಅದು ಏನು ಉಪಯೋಗವಾಗುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ೫೦೦ ರೂಪಾಯಿಗಳಿಂದ ೧೦೦೦ ರೂಪಾಯಿಗಳವರೆಗೆ ಹೆಚ್ಚಿಸಿ ಬಡ್ಡಿ ರಹಿತ ಸಾಲವನ್ನಾಗಿ ಕೊಡಬೇಕೆಂದು ತಿಳಿಸಿರುತ್ತಾರೆ. ಅದನ್ನು ಯಾವರೀತಿ ಕೊಡಬೇಕು ಅದರ ಬಗ್ಗೆಯೂ ಸೂಚನೆ ಕೊಟ್ಟಿರುತ್ತಾರೆ. ಸರ್ಕಾರದವರೂ ಕೂಡ ಈರೀತಿ ಕೊಡಲು ಏನು ಮಾಡಬೇಕು, ಯಾವರೀತಿ ಕೊಡಬೇಕು ಎನ್ನುವಬಗ್ಗೆ ವಿಚಾರ ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಚಳ್ಳಕೆರೆ ಫಾರಮ್‌ನಲ್ಲಿ ಏನು ನಡೆಯುತ್ತಿದೆ ಎನ್ನುವಬಗ್ಗೆ ತಿಳಿಸಿದ್ದಾರೆ. ೧೯೭೭–೭೮ರಲ್ಲಿ ೨೪೧೨ರಲ್ಲಿ ಟೋಟಲ್ ಷೀಪ್ ಬಾರನ್ ೧೦೪೩, ಇದರಲ್ಲಿ ತಂದದ್ದು ೧೭೫, ಟೋಟಲ್ ಷೀಪ್ ಸೋಲ್ಡ್ ೧೫೭ ಟೋಟಲ್ ಷೀಪ್ ಡೈಡ್ ೪೭೮. ಈಗ ಹೊಸದಾಗಿ ಒಂದು ಪ್ಲಾಂಟ್ ಬಂದಿರುತ್ತದೆ. ಇದರಿಂದ ಯಾವ ರೀತಿ ಕೆಲಸಮಾಡಬೇಕೆಂಬುದರಬಗ್ಗೆ ಸರ್ಕಾರದವರು ಆಲೋಚನೆ ಮಾಡುತ್ತಿದೆ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅನಂತರ ಶ್ರೀ ರಾಮ್‌ದೇವ್‌ಅವರು ಮಟನ್ ಚಿಕನ್ ತಿನ್ನದೆ ಇದ್ದರೂ ಕೂಡ ಅದರ ಬಗ್ಗೆ ವಿವರಗಳನ್ನು ಕೊಟ್ಟಿರುತ್ತಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅವರು ಅಫಿಷಿಯಲ್‌ಆಗಿ ತಿನ್ನದಿದ್ದರೂ ಅನ್ ಅಫಿಷಿಯಲ್ ಆಗಿ ತಿನ್ನಬಹುದು. ಅವರಂಥವರು ತಿನ್ನುವುದನ್ನು ಅಭ್ಯಾಸ ಮಾಡಿರುವುದರಿಂದಲೇ ಮಟನ್‌ಬೆಲೆ ಜಾಸ್ತಿಯಾಗಿರುವುದು.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಶ್ರೀ ರಾಮ್‌ದೇವ್‌ರವರು ಸುಮಾರು ೧೫ ವರ್ಷಗಳಕಾಲ್ಲದಿಂದಲೂ ಕಾರ್ಪೊರೇಷನ್ ಕೌನ್ಸಿಲರ್‌ಆಗಿ ಕೆಲಸಮಾಡಿ ಈಗ ಶಾಸಕರಾಗಿ ಬಂದಿರುತ್ತಾರೆ. ಬೆಂಗಳೂರಿನಲ್ಲಿ ಈಗಿರತಕ್ಕಂತ ಸ್ಲಾಟರ್ ಹೌಸ್‌ಬಗ್ಗೆ ವಿವರವಾಗಿ ಹಿಂದೆ ಹೇಳಿದ್ದಾರೆ. ಅದನ್ನೆಲ್ಲವನ್ನು ತಿಳಿದುಕೊಂಡು ನಾನು ರಾಜ್ಯಮಂತ್ರಿಯಾಗಿದ್ದಾಗ, ಮಾನ್ಯ ಚಿಕ್ಕೇಗೌಡರು ಸಚಿವರಾಗಿದ್ದು ಅವರ ಜೊತೆಯಲ್ಲಿ ಹೋಗಿ ನೋಡಿಕೊಂಡು ಬಂದು ಮೂರುಬಾರಿ ಕಾರ್ಪೊರೇಷನ್ ಮೀಟಿಂಗ್ ಮಾಡಿ ಬೆಂಗಳೂರಿಗೆ ಒಂದು ಉತ್ತಮವಾದ ಸ್ಲಾಟರ್ ಹೌಸ್ ಬೇಕೆಂದು ತೀರ್ಮಾನಕ್ಕೆ ಬಂದಿರುತ್ತೇವೆ. ಬೆಂಗಳೂರು ಫುಡ್ ಕಾರ್ಪೊರೇಷನ್ ವತಿಯಿಂದ ಮಾಡಿ ಬೆಂಗಳೂರು ಜನರಿಗೆ ಒಳ್ಳೆಯ ಮಟನ್ ಒದಗಿಸಬೇಕೆಂದು ಯೋಚಿಸಿ ಈಗಾಗಲೇ ಸುಮಾರು ೧೫೦ ಎಕರೆಗಳಷ್ಟು ಜಮೀನನ್ನು ತೆಗೆದುಕೊಂಡಿರುತ್ತೇವೆ. ಮತ್ತೆ ಗೌರ್ನಮೆಂಟ್ ಆಫ್ ಇಂಡಿಯಾ, ಸ್ಟೇಟ್ ಗೌರ್ನಮೆಂಟ್, ಮತ್ತು ಕಾರ್ಪೊರೇಷನ್ ಷೇರು ಎಷ್ಟು ಕೊಡಬೆಕೆಂಬುದನ್ನು ಕೂಡ ಹೇಳಿದ್ದಾರೆ. ಇಲೀಗಲ್‌ಆಗಿ ಸ್ಲಾಟರ್‌ಆಗುತ್ತಿದೆ ಎಂದು ಮಾನ್ಯ ಸದಸ್ಯರು ಏನು ಹೇಳಿರುತ್ತಾರೆ, ಅದನ್ನು ತಪ್ಪಿಸುವ ಸಲುವಾಗಿ ವಿಜಿಲೆನ್ಸ್ ಸ್ಕ್ವಾಡ್ ಎಂದು ಮಾಡಿರುತ್ತೇವೆ. ಅದು ಎಫೆಕ್ಟೀವ ಆಗಿ ಕೆಲಸಮಾಡುತ್ತಿಲ್ಲವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಇದರ ಬಗ್ಗೆ ಏನು ಹೇಳಿದರು ಪ್ರಯೋಜನವಿಲ್ಲ, ಸಮಯಸಿಕ್ಕಿದಾಗ ನಾವು ನೀವು ಕೂತು ಸ್ಲಾಟರ್ ಹೌಸ್‌ಬಗ್ಗೆ ಮಾತನಾಡಬೇಕಾಗುತ್ತದೆ. ಇದರಬಗ್ಗೆ ಈಗಾಗಲೇ ಮಾನ್ಯ ಅಜೀಜ್ ಸೇಟ್ ಅವರ ಜೊತೆಯಲ್ಲಿಯೂ, ಮತು ಮಾನ್ಯ ಯಹ್ಯಾ ಅವರ ಜೊತೆಯಲ್ಲಿ ಮಾತುಕತೆಗಳನ್ನು ನಡೆಸಿರುತ್ತೇವೆ. ಯಶವಂತಪುರದಲ್ಲಿರುವ ವಕ್ಫ್‌ಗೆ ಸೇರಿದಂಥ ಜಮೀನು ಏನು ಇರುತ್ತದೆ ಅದನ್ನು ನಮಗೆ ಬಿಟ್ಟುಕೊಡಿ ಎಂದು ಕೇಳಿರುತ್ತೇವೆ. ಅಸೆಂಬ್ಲಿಮುಗಿದ ನಂತರ ತಮಗೆ ಮಾನ್ಯ ಸದಸ್ಯರು ಯಾವರೀತಿ ಮಾಡಲಿಕ್ಕೆ ಸೂಚನೆ ಕೊಡುತ್ತೀರಿ ಅದರಂತೆ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನಪಡುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಬೆಂಗಳೂರು ಡೈರಿ ಒಳ್ಳೆಯ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೇ ಮತ್ತು ಹಾಲು ಹೆಚ್ಚು ಉತ್ಪಾದನೆ ಮಾಡಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೊ ಅದನ್ನು ಕೈಗೊಳ್ಳುತ್ತೇವೆ,

ಇನ್ನು ಪೌಡರ್ ಪ್ಲಾಂಟ್ ಬಗ್ಗೆ ಹೇಳುವುದಾದರೆ ಧಾರವಾಡದಲ್ಲಿ ಒಂದು ಪೌಡರ್ ಪ್ಲಾಂಟ್ ಹಾಕೋಣ ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅಲ್ಲಿ ಫ್ಲೆಷ್ ಸೀಸನ್‌ನಲ್ಲಿ ಹೆಚ್ಚು ಹಾಲು ಬರುವುದರಿಂದ ಅಲ್ಲಿ ಹಾಲನ್ನು ಖರೀದಿ ಮಾಡಿ ಅದರಿಂದ ಪುಡಿ ಮಾಡಿ ಜನರಿಗೆ ಒದಗಿಸಬೇಕು ಅನ್ನುವ ದೃಷ್ಟಿಯಿಂದ ಅಲ್ಲಿ ಒಂದು ಪೌಡರ್ ಪ್ಲಾಂಟ್ ಹಾಕೋಣ ಎಂದು ಸರ್ಕಾರ ನಿರ್ಧಾರ ಮಾಡಿದೆ. ಇದಕ್ಕಾಗಿ ರಿ ಜನಬಲ್ ರೆ ಟಿನಲ್ಲಿ ಅಲ್ಲಿ ೪೫೦ ಎಕರೆ ಜಮೀನನ್ನು ತೆಗೆದುಕೊಂಡಿದ್ದೇವೆ. ಸುಮಾರು ೨೫೭೦ ಜನ ರೈತರಿಗೆ ಇದರಿಂದ ಸಹಾಯವಾಗುತ್ತದೆ. ಅಲ್ಲಿ ಅವರು ಪೌಡರ್ ಬೆಳೆಸುವುದಕ್ಕೆ ಎಲ್ಲಾ ವ್ಯವಸ್ಥೆಯನ್ನೂ ಸಹ ಮಾಡಿದ್ದೇವೆ.

ಇನ್ನು ಹಾಲಿನ ದರವನ್ನು ಯಾವರೀತಿ ನಿಗದಿ ಮಾಡಬೇಕು ಎನ್ನುವುದು ಸರ್ಕಾರದ ತೀವ್ರ ಆಲೋಚನೆಯಲ್ಲಿವೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಇನ್ನು ಷೇರ್‌ಖಾನ್ ಮತ್ತು ಶ್ರೀ ಕರಿಬಸವನಗೌಡರು, ಇನ್ನು ಕೆಲವು ಸದಸ್ಯರು ಕ್ರಾಸ್ ಬ್ರೀಡ್ ಸೆಂಟರ್ ಅನ್ನು ಬೆಂಗಳೂರಿಗೆ ಕೊಟ್ಟಿದ್ದೀರಿ ನಮ್ಮ ಭಾಗದಲ್ಲಿ ಈ ಕೋಳಿ ಸಾಕಾಣಿಕೆಯ ಕೇಂದ್ರವಾಗಲಿ ಅಥವಾ ಹಂದಿ ಸಾಕಾಣಿಕೆಯ ಕೇಂದ್ರವಾಗಲಿ ಅಥವಾ ಒಂದು ಹಾಲಿನಪುಡಿಯ ಪ್ಲಾಂಟ್ ಆಗಲಿ ಕ್ರಾಸ್ ಬ್ರೀಡ್ ಸೆಂಟರ್ ಆಗಲಿ ಕೊಟ್ಟಿಲ್ಲ ಎಂದು ಹೇಳಿದರು. ಆ ರೀತಿ ಎಲ್ಲಾ ಕಡೆಯಲ್ಲೂ ಮಾಡುವುದಕ್ಕೆ ಬರುವುದಿಲ್ಲ. ಯಾವ ಯಾವ ಕ್ಷೇತ್ರದಲ್ಲಿ ಅವಶ್ಯಕವಾದಂಥಾ ಮತ್ತು ಆ ಸ್ಥಳಕ್ಕೆ ಹೊಂದುವಂಥಾ ಭಾಗವನ್ನು ತೆಗಯಬೇಕೇ ವಿನಾ ಒಂದೇ ರೀತಿಯಲ್ಲಿ ಎಲ್ಲವನ್ನೂ ಒಂದೇ ಸ್ಥಳದಲ್ಲಿ ಮಾಡುವುದಕ್ಕೆ ಬರುವುದಿಲ್ಲ. ನಿಮ್ಮ ಭಾಗದಲ್ಲಿ ಕ್ರಾಸ್ ಬ್ರೀಡ್ಸ್ ಎಮ್ಮೆಗೆ ಮಾತ್ರ ಕೊಡಬಹುದೇ ವಿನಾ ಹಸುವಿಗೆ ಕೊಡುವುದಕ್ಕಾಗುವುದಿಲ್ಲ. ಮತ್ತು ತೆಲಂಗಾಣ ಬ್ರೀಡ್ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಂಥಾ ಕಡೆ ಕೊಡಬೇಕಾಗುತ್ತದೆ.

ಇನ್ನು ನಮ್ಮ ಇಂಡಿಯನ್ ಸರ್ವೆ ಪ್ರಕಾರ ೧೦ ಸಾವಿರ ದನಗಳಿಗೆ ಒಂದು ಆಸ್ಪತ್ರೆ ಇರಬೇಕು ಅಂತ ಇದೆ ನಾವು ನಿಷ್ಪಕ್ಷ ೧೦,೫೫೦ ದನಗಳಿಗಾದರೂ ಕೂಡ ಒಂದು ಆಸ್ಪತ್ರೆ ಇರಬೇಕು ಅಂತ ಮಾಡಿದ್ದೇವೆ, ಕ್ಯಾಟಲ್ ಪಾಪ್ಯುಲೇಷನ್ ಪ್ರಕಾರ ಮುಂದಿನ ಒಂದು ದಿನದಲ್ಲಾದರೂ ಕೂಡ

ನ್ಯಾಷನಲ್ ಅವರೇಜ್‌ನಂತೆ ೧೦ ಸಾವಿರ ದನಗಳಿಗಾದರೂ ಒಂದು ಆಸ್ಪತ್ರೆ ಇರುವಂತೆ ಸಾಧನೆ ಮಾಡಬೇಕು ಅಂತ ಇದ್ದೇನೆ. ಇದನ್ನು ಯಾವರೀತಿ ವರ್ಕ್‌ಔಟ್ ಮಾಡಿದರೆ ಸಾಧ್ಯವಾಗಬಹುದು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ.

ಇನ್ನು ಕೆಲವು ಸದಸ್ಯರು ಹಂದಿ ಸಾಕಾಣಿಕೆ ವಿಚಾರದಲ್ಲಿ ಮತ್ತು ಕೋಳಿ ಸಾಕಾಣಿಕೆ ವಿಚಾರದಲ್ಲಿ ಇರುವ ಅನಾನುಕೂಲ ಮತ್ತು ಅದರ ಬಗ್ಗೆ ಯಾವರೀತಿ ಗಮನ ಇಡಬೇಕು ಅನ್ನುವ ಬಗ್ಗೆ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಇನ್ನು ಈ ಇಲಾಖೆ ಪಶು ಸಂಪತ್ತನ್ನು, ಅಂದರೆ ದನಕರುಗಳ ಒಂದು ಸಂಪತ್ತನ್ನು ಯಾವರೀತಿಯಾಗಿ ಬೆಳೆಸಿಕೊಂಡು ಬರಬೇಕು ಮತ್ತು ಉಳಿಸಿಕೊಂಡು ಬರಬೇಕು ಅನ್ನುವ ಬಗ್ಗೆ ಹೇಳಿದ್ದಾರೆ. ಅದನ್ನೂ ಗಮನದಲ್ಲಿಟ್ಟುಕೊಂಡು ಈ ದನಗಳಲ್ಲಿ ಯಾವರೀತಿಯಾಗಿ ರೈತರಿಗೆ ಅನುಕೂಲವಾಗುತ್ತದೆ ಆ ರೀತಿಯಲ್ಲಿ ಕೆಲಸ ಮಾಡೋಣ. ಇನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಹೇಳಬೇಕಾದರೆ ಈ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಏನಾದರೂ ಸಂಶಯಗಳು ಇದ್ದರೆ ಅದನ್ನು ಕೇಳಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ನಾನು ಕ್ಯಾಟಲ್ ಇನ್‌ಷೂರೆನ್ಸ್ ಬಗ್ಗೆ ಹೇಳಿದ್ದೆ ತಾವು ಅದರ ಬಗ್ಗೆ ಹೇಳಲಿಲ್ಲಾ ಮತ್ತು ದನಕರುಗಳನ್ನು ಮಾರುವುದಕ್ಕೆ ತಜ್ಞರ ಒಂದು ಸಲಹೆ ಪಡೆದು ರೆಗ್ಯುಲೇಟೆಡ್ ಮಾರ್ಕೆಟ್ ಮೂಲಕ ಈ ಕೆಲಸ ಮಾಡಬೇಕು ಅಂತ ಹೇಳಿದ್ದೆ ಮತ್ತು ಬೆಂಗಳೂರು ಮತ್ತು ಮೈಸೂರು ಡೈರಿಯ ವರ್ಕರ್ಸ್‌ಗೆ ಕೊಡತಕ್ಕಂಥಾ ಸಂಬಳ ವ್ಯತ್ಯಾಸ ಇದೆ ಮತ್ತು ಆ ಯೂನಿಯನ್ ವರ್ಕರ್ಸ್‌ಗೆ ಸರ್ವಿಸ್ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲಾ. ಇದರ ಬಗ್ಗೆ ತಾವು ಉತ್ತರ ಹೇಳಲಿಲ್ಲಾ ಈಗಲಾದರೂ ಕೂಡ ಇದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಡಿ. ಚೌಡಯ್ಯ.—ನಾನು ತಮಗೆ ಒಂದು ಸಲಹೆ ಕೊಟ್ಟಿದ್ದೆ. ಅದೇನೆಂದರೆ ಹೋಬಳಿಯಲ್ಲಿ ಲೈವ್‌ಸ್ಟಾಕ್ ಇನ್‌ಸ್ಪೆಕ್ಟರ್ಸ್ ಇದ್ದಾರೆ. ಅವರ ಬದಲು ಗ್ರಾಜುಯೇಟ್ಸ್ ಡಾಕ್ಟರ್ಸ್‌ನ್ನಾಗಲಿ ಅಥವಾ ಅಸಿಸ್ಟೆಂಟ್ ಸರ್ಜನ್ಸ್ ಆಗಲಿ ಅವರ ಜಾಗಕ್ಕೆ ಪೋಸ್ಟ್ ಮಾಡಿದರೆ. ಈ ವಿಚಾರದಲ್ಲಿ ಹೆಚ್ಚಿನ ಒಂದು ತಾಂತ್ರಿಕ ತಜ್ಞರಾಗಿದ್ದಂಥಾವರನ್ನು ನೇಮಕ ಮಾಡಿದರೆ ಇದರಿಂದ ಆ ಜನರಿಗೆ ಹೆಚ್ಚಿನ ಸೌಲಭ್ಯ ದೊರಕಿದಂತಾಗುತ್ತದೆ, ಇದನ್ನು ಯೋಚನೆ ಮಾಡಬೇಕು ಅಂತ ಹೇಳಿದ್ದೆ. ಈ ಬಗ್ಗೆ ತಾವು ಉತ್ತರ ಹೇಳಿಲ್ಲಾ, ಈಗಲಾದರೂ ಹೇಳುತ್ತೀರಾ ?

ಶ್ರೀ ಡಿ. ಟಿ ಮಾಯಣ್ಣ.—ಸ್ವಾಮಿ ಕುಣಿಗಲ್ ಕುದುರೆ ಸಾಕಾಣಿಕೆ ಕೇಂದ್ರದಲ್ಲಿ ಸರ್ಕಾರದಲ್ಲಿ ೨೫–೩೦ ಕುದುರೆಗಳು ಇದ್ದುವು ಈಗ ಎಷ್ಟು ಇವೆ ಮತ್ತು ಅವು ಏನಾಯಿತು ಅವುಗಳ ವ್ಯವಸ್ಥೆ ಏನು ? ಈ ವಿಚಾರದಲ್ಲಿ ಸರ್ಕಾರದವರು ಗಮನ ನೀಡಬೇಕು ಅಂತ ಹೇಳಿದ್ದೆ. ಅದಕ್ಕೆ ತಮ್ಮ ಉತ್ತರ ಏನು ?

ಶ್ರೀ ಪಿ. ರಾಂದೇವ್.—ತಾವು ಮಾಡ್ರನ್ ಸ್ಲಾಟರ್‌ಹೌಸ್‌ಗೆ ೧೫೦ ಎಕರೆ ಜಮೀನನ್ನು ತೆಗೆದುಕೊಂಡಿದ್ದೇವೆ ಎಂದು ಉತ್ತರದಲ್ಲಿ ಹೇಳಿದಿರಿ. ಇದಕ್ಕೆ ಬಿಲ್ಡಿಂಗ್ ಅನ್ನು ಯಾವಾಗ ಕಂಪ್ಲೀಟ್ ಮಾಡುತ್ತೀರಾ ಮತ್ತು ಬೆಂಗಳೂರಿಗೆ ಒಂದು ಸ್ಲಾಟರ್ ಹೌಸ್ ಅನ್ನು ಯಾವಾಗ ಕೊಡುತ್ತೀರಾ ಅನ್ನುವುದನ್ನು ಹೇಳುತ್ತೀರಾ ?

SRI G. B. SHANKAR RAO. While rep'ying to the debate, the hon'ble Minister referred to the operation plant. I would like to know whether the concept of operation plant will not work counter to the idea of es ablishii g a dairy of the type of western countries. I remember when the Bangalore Dairy was established. one of the conditions of the sale was to educate the people especially the people of Bangalore with regard to the impor ance of pasturised and hygienic milk and to see that the crossbreeds in Bangalore should be gradually ...t out.

I had referred to the powder plant, the Minister did not say anything Af er taking aid from the Word Bank how far he project has progressed ?

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ ಕೆಲವು ಜಿಲ್ಲೆಗಳಲ್ಲಿ ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್ ಇವೆ. ಅವುಗಳಿಗೆ ೫೦–೬೦ ಲಕ್ಷ ಮತ್ತು ಒಂದು ಕೋಟಿ ರೂಪಾಯಿಗಳವರೆಗೂ ಸಬ್ಸಿಡಿ ಹಣ ಸಿಕ್ಕುತ್ತದೆ. ಇವರಲ್ಲಿ ಸ್ಮಾಲ್ ಫಾರ್ಮರ್ಸ್‌ಗೆ ¼ನೇ ಭಾಗ ಸಬ್ಸಿಡಿ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ⅓ನೇ ಭಾಗ ಸಬ್ಸಿಡಿ ಈ ರೀತಿಯಾಗಿ ಒಂದು ರೇಷಿಯೋ ಪ್ರಕಾರ ಅವರಿಗೆ ಸಬ್ಸಿಡಿ ಹಣ ಸಿಕ್ಕುತ್ತದೆ. ಬ್ಯಾಂಕ್‌ನವರು ಗ್ರಾಮಾಂತರ ಪ್ರದೇಶದ ರೈತರಿಗೆ ಸಾಲವನ್ನು ಕೊಡುವುದಕ್ಕೋಸ್ಕರ ಈ ಒಂದು ಸೌಲಭ್ಯವನ್ನು ಕೊಟ್ಟಿದೆ. ಈಗ ಬ್ಯಾಂಕ್‌ನವರು ಯಾರೂ ಈ ಜನಗಳಿಗೆ ಸಾಲಕೊಡುತ್ತಾ ಇಲ್ಲ. ಇದರಿಂದ ಈಗ ಅವರಿಗೆ ಕೊಟ್ಟಿರುವ ಹಣ ಲ್ಯಾಪ್ಸ್ ಆಗುತ್ತಾ ಇದೆ. ಈ ಬಗ್ಗೆ ಸರ್ಕಾರದವರು ಏನಾದರೂ ಅವರಿಗೆ ಸಾಲ ಕೊಡುವ ಹಾಗೆ ಒಂದು ಆದೇಶ ಹೊರಡಿಸುತ್ತೀರಾ ಅಥವಾ ಬಲವಂತವಾಗಿಯಾದರೂ ಆಗಲಿ ಯಾವುದಾದರಾದರೂ ಆಗಲ್ಲಿ ಅವರಿಗೆ ಸಾಲ ಸಿಗುವ ಒಂದು ವ್ಯವಸ್ಥೆಯನ್ನು ಯಾವರೀತಿ ಮಾಡುತ್ತೀರಾ ಅನ್ನುವುದನ್ನು ತಿಳಿಸುತ್ತೀರಾ ?

ಇನ್ನು ಎರಡನೆಯದಾಗಿ ರೈತರು ಉತ್ಪತ್ತಿ ಮಾಡತಕ್ಕಂಥಾ ಹಾಲಿಗೆ ಅದರ ದರವನ್ನು ಮನಸ್ವೇಚ್ಛೆಯಾಗಿ ಜಾಸ್ತಿ ಮಾಡಿದ್ದೀರಾ. ಇದಕ್ಕೆ ಒಂದು ಶಾಸ್ತ್ರೀಯವಾಗಿ ದರ ಇರಬೇಕು ಅಂತ ನೀವು ಮಾಡಿಲ್ಲ. ಈಚೆಗಂತೂ ಹಾಲಿನ ದರವನ್ನು ನೋಡಿದರೆ ರೈತರ ಹತ್ತಿರ ಕೊಂಡುಕೊಳ್ಳುವುದಕ್ಕೂ ನೀವು ಕೊಡುವುದಕ್ಕೂ ತುಂಬಾ ವ್ಯತ್ಯಾಸ ಇದೆ. ಆದುದರಿಂದ ಒಂದು ಶಾಸ್ತ್ರೀಯವಾಗಿ ಹಾಲಿನ ದರವನ್ನು ನಿಗದಿ ಮಾಡುತ್ತೀರಾ ?

ಇನ್ನು ನಿರುದ್ಯೋಗದವರಿಗೆ ಧನಸಹಾಯವನ್ನು ಕೊಡುವುದರ ಬಗ್ಗೆ ಹೇಳುವುದಾದರೆ ಈಗ ನೀವು ೧೫೦–೨೦೦ ರೂಪಾಯಿ ಏನೋ ಕೊಡುತ್ತಿದ್ದೀರಿ. ಅವರಿಗೆ ಒಂದು ಕೆಲಸ ಸಿಗುವವರೆಗೂ ಕೂಡ ಇದನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಇದರಿಂದ ಕೋಟ್ಯಾಂತರ ರೂಪಾಯಿ ಹಣ ಸರ್ಕಾರಕ್ಕೆ ಖರ್ಚಾಗುತ್ತಾ ಇದೆ. ಅಲ್ಲದೆ ವರ್ಷಕ್ಕೆ ಲಕ್ಷಾಂತರ ಜನ ನಿರುದ್ಯೋಗಿಯಾಗಿ ಬಂದವರಿಗೆ ನೀವು ಈ ರೀತಿ ಕೊಡುತ್ತಾಹೋದರೆ ಕೊನೆಯವರಿಗೂ ನೀವು ಅವರಿಗೆ ಕೆಲಸ ಕೊಡುವುದಕ್ಕಾಗುವುದಿಲ್ಲ ಎಂದು ಕೊಳ್ಳುತ್ತಾ ಹೋದರೆ ಇರುವ ದುಡ್ಡೆಲ್ಲಾ ಹಾಳಾಗಿ ಹೋಗುತ್ತದೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಗ್ರಾಮಾಂತರ ಪ್ರದೇಶದಲ್ಲಿ ನಿರುದ್ಯೋಗ ವಿದ್ಯಾವಂತರು ಏನು ಇದ್ದಾರೆ ಅವರಿಗೆ ಒಂದು ಡೈರಿ ಇಡುವುದಕ್ಕಾಗಲಿ, ಒಂದು ಕೋಳಿ ಸಾಕುವುದಕ್ಕಾಗಲಿ, ಒಂದು ಕುರಿ ಸಾಕುವುದಕ್ಕಾಗಲಿ ೫ ಸಾವಿರದವರೆಗೋ, ೧೦ ಸಾವಿರದವರೆಗೋ ದುಡ್ಡು ಕೊಟ್ಟು, ಫ್ರೀ ಆಫ್ ಇಂಟರೆಸ್ಟ್ ಪ್ರಕಾರ ಅವರಿಗೆ ದುಡ್ಡು ಕೊಟ್ಟು ಅವರು ಇದರಿಂದ ಮುಂದುವರೆಯುವುದಕ್ಕೆ ಸಹಾಯ ಮಾಡುತ್ತೀರಾ ? ಇಂಥಾದ್ದಕ್ಕೆ ಒಂದು ಕೋಟಿ ಆಗಲಿ ಎರಡು ಕೋಟಿ ಆಗಲಿ ಮೂರು ಕೋಟಿ ಆಗಲಿ ಖರ್ಚು ಮಾಡಿದರೆ ಅವರ ಒಂದು ಜೀವನೋಪಾಯಕ್ಕೆ ಸಹಾಯವಾಗುವುದಲ್ಲದೆ, ಇದರಿಂದ ಒಂದು ನಿರುದ್ಯೋಗ ಸಮಸ್ಯೆಯೂ ಬಗೆಹರಿದಂತಾಗುತ್ತದೆ. ಈ ಬಗ್ಗೆ ಏನಾದರೂ ತೀರ್ಮಾನಮಾಡಿ ಒಂದು ವ್ಯವಸ್ಥೆ ಮಾಡುತ್ತೀರಾ ?

ಛೇರ್ಮನ್‌ರವರು.—ತಾವು ವಿವರಣೆಯನ್ನು ಈ ರೀತಿಯಾಗಿ ಕೇಳಿದರೆ ಮತ್ತು ಮಾನ ಮಂತ್ರಿಗಳು ಉತ್ತರ ಕೊಡುತ್ತಾ ಹೋದರೆ ಈ ಮನೆಯಲ್ಲಿ ಇನ್ನೂ ಅನೇಕ ಸದಸ್ಯರು ಮಾತನಾಡಬೇಕು ಅನ್ನುವ ಆಸಕ್ತಿ ಇದ್ದರೂ ಕೂಡ ಅವರಿಗೆ ಇದರಿಂದ ಕಾಲಾವಕಾಶ ಸಿಗದೆ ತೊಂದರೆಯಾಗುತ್ತದೆ, ಆದುದರಿಂದ ಆದಷ್ಟು ಸಂಕ್ಷೇಪಮಾಡಿ ಕೇಳಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಜನಗಳ ಕಷ್ಟ ಏನು ಇದೆ ಅನ್ನುವುದನ್ನು ಮಾನ್ಯ ಮಂತ್ರಿಗಳಿಗೆ ಅರಿವಾಗುವ ಹಾಗೆ ಹೇಳಬೇಕೋ ಬೇಡವೇ ? ಬಾಕಿ ಸದಸ್ಯರಿಗೂ ಕೂಡ ಇದರ ಬಗ್ಗೆ ಕೇಳುವುದಕ್ಕೆ ಹೆಚ್ಚು ಅವಕಾಶ ಕೊಡಿ, ಬೇಡ ಅನ್ನುವುದಿಲ್ಲ.

5-30 P.M.

SRI KARIBASAVANAGOUDA N.—In my speech I had suggested to the shifting of the entire Gulbarga division so that the out-dated system may be changed. I think it could not receive the attention of the Hon'ble Minister. I request him to reply that point.

ಶ್ರೀ ಅಣ್ಣಾರಾವ್ ಭೀಮರಾವ್ ಪಾಟೀಲ್.—ಪಶು ಚಿಕಿತ್ಸಾ ಪೆಟ್ಟಿಗೆಗಳನ್ನು ಪ್ರತಿ ಊರಿಗೂ ಒದಗಿಸುವ ಯೋಜನ ಈಗಲೂ ಇದೆಯೆ? ಗುಲ್ಬರ್ಗ ಜಿಲ್ಲೆಯಲ್ಲಿನ ಪಶುವೈದ್ಯ ಶಾಲೆಗಳಲ್ಲಿ ಸರಿಯಾದ ಸಿಬ್ಬಂದಿ ಇಲ್ಲ. ಇದನ್ನು ಮಾನ್ಯ ಸಚಿವರು ವಿಚಾರಣೆ ಮಾಡುವರೆ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಪ್ರಾಣಿಗಳಿಗೆ ವಿಮೆ ಮಾಡಿಸುವ ಬಗ್ಗೆ ಮಾನ್ಯ ಹೆಚ್. ಗಂಗಾಧರನ್ ಅವರು ಹೇಳಿದರು. Under DPAP programme insurance of all animals are made. It is proposed to insure all the animals supplied under subsidy programme in order to avoid loss to farmers due to the death of such animals. There is also a proposal to insure costly bullocks.

ಇನ್ನು ಯೂನಿಯನ್ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಮಾನ್ಯ ರಾಮದೇವ್ ಅವರು ಹೊಸ ಕಸಾಯಿಖಾನೆ ಕೆಲಸವನ್ನು ಯಾವಾಗ ಶುರು ಮಾಡಲಾಗುವುದೆಂದು ಕೇಳಿದರು. ಈಗಾಗಲೇ ನಾವು ಅದನ್ನು ಪ್ರಾರಂಭ ಮಾಡಬೇಕಾಗಿತ್ತು. ಇದರಲ್ಲಿ, ನಗರಸಭೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ—ಈ ಮೂರು ಏಜನ್ಸಿಗಳಿವೆ. ನಾವು ಎರಡು ತಿಂಗಳು ಅಧಿಕಾರದಲ್ಲಿಲ್ಲದಿದ್ದಾಗ ನಗರ ಸಭೆಯವರು ಆ ಜಾಗವನ್ನು ಲೇ-ಔಟ್ ಮಾಡಲಿಕ್ಕೆ ಪ್ರಯತ್ನ ಮಾಡಿದ್ದರು. ಈಗ ಕಸಾಯಿಖಾನೆಯನ್ನು ಆದಷ್ಟು ಬೇಗನೆ ಕಟ್ಟಿಸುವ ಸಲುವಾಗಿ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಲಾಗುವುದು. ಇನ್ನು ಆಪರೇಷನ್ ಫಂಡ್ ಬಗ್ಗೆ ಹೇಳುವುದಾದರೆ...

SRI G. B. SHANKAR RAO.—The original idea of operation fund was started by NDDB about a decade ago to make milk powder. Here it is converted to milk production. I don't know the new concept,

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಮಾನ್ಯ ಹನುಮೇಗೌಡರು ಸಬ್ಸಿಡಿ ಕುರಿತು ಮಾತನಾಡಿದರು. ಪದವೀಧರರಿಗೆ ಈಗ ಸಬ್ಸಿಡಿ ಕೊಡುವುದಕ್ಕೆ ನಮ್ಮಲ್ಲಿ ಅವಕಾಶವಿಲ್ಲ, ಅವರು ಬ್ಯಾಂಕಿನಲ್ಲಿ ಸಾಲ ತೆಗೆದು ಕೊಳ್ಳಬೇಕಾಗುತ್ತದೆ. ಹಾಲಿನ ಪೌಡರ್ ಪ್ಲಾಂಟನ್ನು ಸರ್ಕಾರ ಈಗಧಾರವಾಡದಲ್ಲಿ ಪ್ರಾರಂಭವಾಡುತ್ತದೆ ಇದಕ್ಕಾಗಿ ಸರ್ಕಾರಿ ಆದೇಶವಾಗಿದೆ ಮತ್ತು ಯೋಜನಾ ವರದಿ ಸಹ ಸಿದ್ಧವಾಗುತ್ತಿದೆ. ಡೇರಿ ಅಭಿವೃದ್ಧಿ ಆಶ್ರಯದಲ್ಲಿ ಪೌಡರ್ ಪ್ಲಾಂಟ್ ಮತ್ತು ಫೀಡರ್ ಪ್ಲಾಂಟ್ ಎರಡೂ ಇದೆ, ಈ ಎರಡನ್ನೂ ವಸೂಲಿ ಮಾಡಲಾಗುತ್ತಿದೆ. ಇನ್ನು ಬಳಕೆದಾರರಿಗೆ ಹಾಲನ್ನು ಒಂದು ನಿರ್ದಿಷ್ಟ ಬೆಲೆಗೆ ಕೊಡ ಬೇಕು ಮತ್ತು ಹಾಲು ಉತ್ಪಾದಕರಿಗೂ ಯೋಗ್ಯ ದರವನ್ನು ಕೊಡಬೇಕೆನ್ನುವುದು ಸರ್ಕಾರದ ಉದ್ದೇಶ, ಹಾಲಿನ ಸುಗ್ಗಿ ಕಾಲದಲ್ಲಿ ಸ್ವಲ್ಪ ಅನುಕೂಲವಿರುತ್ತದೆ. ಅದು ಬಿಟ್ಟು ಮೂರು ತಿಂಗಳು ಸ್ವಲ್ಪ ಹಾಲಿನ ಸಂಗ್ರಹಣೆ ಕಡಿಮೆ ಇರುತ್ತದೆ. ಇದನ್ನು ಸರಿದೂಗಿಸಿ, ಗ್ರಾಹಕರಿಗೆ ಒಂದು ನಿರ್ದಿಷ್ಟ ಬೆಲೆಗೆ ಹಾಲನ್ನು ಒದಗಿಸುವ ಉದ್ದೇಶದಿಂದ ಸರ್ಕಾರ ಪೌಡರ್ ಪ್ಲಾಂಟನ್ನು ಹಾಕಿಕೊಂಡಿದ್ದು, ಅದನ್ನು ತೀವ್ರಗತಿಯಲ್ಲಿ ಕಾರ್ಯಗತ ಮಾಡಲಾಗುತ್ತಿದೆ. ಈ ಬಗ್ಗೆ ಮಾನ್ಯ ಹನುಮೇಗೌಡರು ಸರ್ಕಾರದ ಮೇಲೆ ನಂಬಿಕೆ ಇಡಬೇಕು. ಮಾನ್ಯ ಹನುಮೇಗೌಡರು ಯೂನಿಯನ್ ಪ್ರೆಸಿಡೆಂಟರು ಆಗಿದ್ದಾರೆ. ಅವರು ಕಾಲ ಕಾಲಕ್ಕೆ ಹಾಲಿನ ಬೆಲೆ ನಿಗದಿ ಬಗ್ಗೆ ಸಲಹೆ ಕೊಡಬಹುದು.

ಎಸ್. ಎಫ್.ಡಿ.ಎ. ಯೋಜನೆ ಕೇಂದ್ರ ಸರ್ಕಾರದ್ದು. ಇದರಲ್ಲಿ ಸಬ್ಸಿಡಿ ಕೊಡುವುದಕ್ಕೆ ಅವಕಾಶ ಇದೆ. ಕೆಲವು ಕಾಲ ರಾಷ್ಟ್ರೀಕೃತ ಬ್ಯಾಂಕುಗಳು ಸಬ್ಸಿಡಿ ಕೊಟ್ಟವು. ಇತ್ತೀಚೆಗೆ ಅವುಗಳು ಸಬ್ಸಿಡಿ ಕೊಡುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು, ನಾನು ರಾಜ್ಯಮಟ್ಟದ ಎಲ್ಲಾ ಬ್ಯಾಂಕುಗಳ ಅಧಿಕಾರಿಗಳನ್ನು ಕರೆದು ಮಾತನಾಡಿ, ಈ ಯೋಜನೆಯನ್ನು ಸರಿಯಾಗಿ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಿಂದೆ ಬ್ಯಾಂಕಿನವರು ಸಾಲ ಕೊಡುತ್ತಿದ್ದುದರಲ್ಲಿ ಇಷ್ಟು ಭಾಗವನ್ನು ರೈತರಿಗೆ ಕೊಡಬೇಕೆಂದು ಕಡ್ಡಾಯ ಮಾಡಲಾಗಿತ್ತು. ಅದೇ ರೀತಿ, ಇಷ್ಟು ಭಾಗವನ್ನು ರೈತರಿಗೆ ಸಾಲ ಕೊಡಬೇಕೆಂದು ಬ್ಯಾಂಕುಗಳ ಮೇಲೆ ಕಡ್ಡಾಯ ಹೇರಿ?

ಚೇರ್ಮನ್‌ರವರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಾನ್ಯ ಸದಸ್ಯರು ಮಧ್ಯೆ ಪ್ರಶ್ನೆ ಕೇಳಬಾರದು.

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಮಾನ್ಯ ಸದಸ್ಯರು ಹಲವಾರು ವಿವರಣೆಗಳನ್ನು ಕೇಳಿದ್ದಾರೆ. ಅವುಗಳಿಗೆಲ್ಲಾ ಈಗಲೇ ಉತ್ತರ ಕೊಡಬೇಕೆಂದೇನಿಲ್ಲ. ಪಶುಸಂಗೋಪನಾ ಖಾತೆ ಇನ್ನೂ ಬೆಳೆಯತಕ್ಕ ಖಾತೆ. ಮಾನ್ಯ ಸದಸ್ಯರು ಕೊಟ್ಟ ಹಲವಾರು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಖಂಡಿತವಾಗಿ ನಾವು ರೈತರ ಅಭಿವೃದ್ಧಿ ಸಲುವಾಗಿ ಕೆಲಸ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

SRI B. B. SAYANAK.—I am asking clarification regarding Belgaum Dairy.

ಚೇರ್ಮನ್‌ರವರು.—ಮಾನ್ಯ ಸದಸ್ಯರುಗಳೆಲ್ಲರೂ ಪ್ರಸ್ತಾಪ ಮಾಡಿದ್ದನ್ನು ಗಮನಕ್ಕೆ ತೆಗೆದುಕೊಂಡು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಕೆಲವು ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶಗಳು ಸಿಕ್ಕಿವೆ. ಆದ್ದರಿಂದ ಪುನಃ ಹೆಚ್ಚು ಜನ ಮಾನ್ಯ ಸದಸ್ಯರಿಗೆ ವಿವರಣೆ ಕೇಳುವುದಕ್ಕೆ ಅವಕಾಶ ಕೊಡುವುದು ಬಹಳ ಕಷ್ಟವಾಗುತ್ತದೆ.

(MR. SPEAKER in the Chair)

MR. SPEAKER.-Sri Sayanak is an experienced member of this House What was the convention earlier? How many clarification can he ask?

SRI B. B. SAYANAK.—I want to ask one clarification Am I not entitled for seeking clarification?

MR. SPEAKER.—I would like to know whether he has not participated in the discussion. Let him resume his seat.

SRI B B. SAYANAK.—Though I have not taken part, I must seek clarification regarding the dairy in Belgaum Milk Dairy. The milk is adulterated. The ladies have taken a MORCHA to the Divisional Commissioner. This must be set right.

MR. SPEAKER.—All those who have participated in the discussion will be allowed clarification. That is all even, then, if it is necessary

ಶ್ರೀ ದೇವೇಂದ್ರಪ್ಪ ಘಾಳಪ್ಪ - ಅಧ್ಯಕ್ಷರೇ ಇದುವರೆಗೂ ಮಾನ್ಯ ಸದಸ್ಯರು ಸಾಕಷ್ಟು ಸಲಹೆಗಳನ್ನೂ ಸೂಚನೆಗಳನ್ನೂ ಕೊಟ್ಟಿದ್ದಾರೆ. ಅವೆಲ್ಲಕ್ಕೂ ಕೂಡ ಸಾಧ್ಯವಾದ ಮಟ್ಟಿಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಶ್ರೀಮಾನ್ ಸೈನಕ್ ಅವರು ಹೇಳಿದ ಮಾತನ್ನು ಗಮನಕ್ಕೆ ತೆಗೆದುಕೊಂಡು ಮಿಲ್ಕ್ ಅಡಲ್ಟ್ರೇಷನ್ ಆಗದ ಹಾಗೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದಕಾರಣ ಮಾನ್ಯ ಸದಸ್ಯರು ಕೊಟ್ಟಿರುವ ಎಲ್ಲಾ ಸಲಹೆಗಳನ್ನೂ ಗಮನದಲ್ಲಿ ಇಟ್ಟುಕೊಂಡು ಸಾಧ್ಯವಾದಷ್ಟೂ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಮಾನ್ಯ ಸದಸ್ಯರು ತಮ್ಮ ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—I will put the Demand to vote of the House. The question is :

"That a sum not exceeding Rs. 14,16,66,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 4, "Animal Husbandry and Dairy Development.

*The motion was adopted and the sums are granted.*